ಜನಶಕ್ತಿ


ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 53
ಡಿಸೆಂಬರ್ 30, 2012

ಪುಟ 16 ರೂ. 5/-







ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳು : ಸಹನೆ ಸಲ್ಲದು



ಫ್ಯಾಸಿಸ್ಟ್ ಪ್ರವೃತ್ತಿಯ ಹೊಸ ಆವೃತ್ತಿಗಳು



ಕಾರ್ಮಿಕ ಸಂಘಟನೆಗಳ ಜಂಟಿ 'ಜೈಲ್ ಭರೋ' ಚಳುವಳಿ

ಹಾಸ್ಟೆಲ್ ದಿನಗೂಲಿ ನೌಕರರ ಪ್ರತಿಭಟನೆ



ಗೋ ಹತ್ಯೆ ನಿಷೇಧ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕದಿರಲಿ

ವೈದ್ಯಕೀಯ ನಿರ್ಲಕ್ಷ್ಯದ ವಿವಿಧ ಆಯಾಮಗಳು

ಇತ್ತೀಚೆಗೆ (ಡಿಸೆಂಬರ್ 2011) ಪಶ್ಚಿಮ ಬಂಗಾಳದ ಎಎಂಆರ್‌ಐ (ಆಮ್ರಿ) ಆಸ್ಪತ್ರೆಯ ದುರಂತದಲ್ಲಿ 160 ಜನರು ಮರಣ ಹೊಂದಿದ ಪ್ರಕರಣ ಎಲ್ಲರ ಗಮನವನ್ನು ಸೆಳೆದಿದೆ. ಅಲ್ಲಿ ಸಂಭವಿಸಿದ ದುರಂತಕ್ಕೆ ಕಾರಣ ಆಸ್ಪತ್ರೆಯಲ್ಲಿ ಸುರಕ್ಷಾ ಕ್ರಮಗಳಿರದೇ ಇರುವುದು. ಬೆಂಗಳೂರಿನಲ್ಲಿ ಕೆಲವು ಟಿ.ವಿ.ಮಾಧ್ಯಮಗಳು ನಗರದ ಆಸ್ಪತ್ರೆಗಳಲ್ಲಿ ಸುರಕ್ಷಾ ಕ್ರಮಗಳಿವೆಯೇ ಎಂಬುದನ್ನು ಕಂಡುಹಿಡಿಯಲು ಮುಂದಾಗಿವೆ. ಇದು ವೈದ್ಯಕೀಯ ನಿರ್ಲಕ್ಷ್ಯ ಅಲ್ಲದಿದ್ದರೂ ಇಂಥ ಘಟನೆಗಳನ್ನು ತಡೆಗಟ್ಟಲೇಬೇಕು. ಆದರೆ ಪ್ರತಿದಿನವೂ ಸಂಭವಿಸುವ ಸಾವು – ನೋವು ಉಂಟುಮಾಡುವ ಇನ್ನೊಂದು ಸಮಸ್ಯೆ ವೈದ್ಯಕೀಯ ನಿರ್ಲಕ್ಷ್ಯ. ಆ ವಿಷಯದ ಬಗ್ಗೆ ತಿಳಿಯೋಣ.

ವೈದ್ಯಕೀಯ ನಿರ್ಲಕ್ಷ್ಯ ಇತ್ತೀಚಿನದಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ ಹಾಗೂ ವರದಿಯಾಗುತ್ತಿದೆ ಎಂದು ಹೇಳಬಹುದು. ಗ್ರಾಹಕ ರಕ್ಷಣಾ ಕಾನೂನು (1986) ಜಾರಿಯಲ್ಲಿದ್ದು ವೈದ್ಯಕೀಯ ನಿರ್ಲಕ್ಷ್ಯಕ್ಕೆ ಪರಿಹಾರ ಒದಗಿಸಿಕೊಡಲು ಮುಂದಾಗಿದೆ ಎಂಬುದು ವೈದ್ಯಕೀಯ ನಿರ್ಲಕ್ಷ್ಯ ತಡೆಗೆ ಸಹಾಯಕವಾಗಬೇಕಿದೆ.



ಇತ್ತೀಚೆಗೆ ಹೈಕೋರ್ಟ್, ಹೈದರಾಬಾದಿನ ನಿಝಾಮ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಬ್ಬ ಬೆಂಗಳೂರಿನ ವ್ಯಕ್ತಿಗೆ ಅವನಿಗಾದ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಒಂದು ಕೋಟಿ ರೂಪಾಯಿ ಪರಿಹಾರವನ್ನು ಕೊಡಿಸಿದ್ದುದು ವರದಿಯಾಗಿದೆ. ಈಗಿನ ದಿನಗಳಲ್ಲಿ ವೈದ್ಯಕ್ಷೇತ್ರ ಜಾಗತೀಕರಣ ಪ್ರಕ್ರಿಯೆಯಿಂದ ವ್ಯಾಪಾರೀಕರಣಗೊಂಡು ಅನೇಕ ಬಾರಿ ಅನೇಕ ದುಬಾರಿ ಪರೀಕ್ಷೆಗಳನ್ನು ಹಾಗೂ ಚಿಕಿತ್ಸೆಗಳನ್ನು ಮಾಡುವಲ್ಲಿ ಮುಂದಾಗಿದೆ. ರೋಗಿಯ ಆರ್ಥಿಕ ಹಿನ್ನೆಲೆ ಬಗ್ಗೆ, ವೈದ್ಯನ ನೈತಿಕತೆ ಬಗ್ಗೆ ಕಡಿಮೆ ಗಮನಹರಿಸಲಾಗುತ್ತಿದೆ. ದೊಡ್ಡ ದೊಡ್ಡ ಆಸ್ಪತ್ರೆಗಳು ಪರೀಕ್ಷೆ ಹಾಗೂ ಚಿಕಿತ್ಸೆ ಪಡೆಯಲು ಜಾಹಿರಾತು ಮಾಡುತ್ತಿವೆ ಹಾಗೂ ಹೆಚ್ಚು ರೋಗಿಗಳನ್ನು ತಮ್ಮೆಡೆಗೆ ಸೆಳೆಯುತ್ತಿವೆ. ಆದರೆ ಸುರಕ್ಷಾ ಕ್ರಮಗಳ ಬಗ್ಗೆ ಕಡಿಮೆ ಗಮನಹರಿಸಿವೆ, ಹಾಗೂ ನಿರ್ಲಕ್ಷ್ಯಕ್ಕೆ ವೈದ್ಯಕೀಯ ನಿರ್ಲಕ್ಷ್ಯ ತಡೆಗಟ್ಟಲು ಹಿಂದೆ ಬಿದ್ದಿವೆ.

ಏನಿದು ವೈದ್ಯಕೀಯ

ಯಾವುದೇ ವೈದ್ಯಕೀಯ ಸಮಸ್ಯೆಗೆ, ಇತರೆ ವೈದ್ಯರು ಕೊಡುವ, ಅಥವಾ ಸಾಮಾನ್ಯವಾಗಿ ಕೊಡಬೇಕಾದ ಚಿಕಿತ್ಸೆಯನ್ನು ನೀಡದೇ ಇದ್ದು ಅಥವಾ ಬೇರಾವುದಾದರೂ ಚಿಕಿತ್ಸೆ ನೀಡಿದಾಗ, ರೋಗಿಗೆ ದೈಹಿಕ, ಮಾನಸಿಕ ಅಥವಾ ಆರ್ಥಿಕ ನಷ್ಟವಾದಲ್ಲಿ, ಆ ಸನ್ನಿವೇಶವನ್ನು ವೈದ್ಯಕೀಯ ನಿರ್ಲಕ್ಷ್ಯ ಎನ್ನುವರು. ಅದು ಆಕಸ್ಮಿಕವಾಗಿರಬಹುದು ಅಥವಾ ಜಾಗರೂಕತೆ ಇಲ್ಲದ್ದರಿಂದಲೂ ಆಗಬಹುದು. ಈ ನಿರ್ಲಕ್ಷ್ಯ ವೈದ್ಯನಿಂದ ಅಥವಾ ವ್ಯವಸ್ಥೆಯ (ಆಸ್ಪತ್ರೆಯ) ಅಜಾಗರೂಕತೆಯಿಂದಲೂ ಆಗಬಹುದು.

ಎಲ್ಲೆಲ್ಲಿ ವೈದ್ಯಕೀಯ ನಿರ್ಲಕ್ಷ್ಯ ಸಂಭವಿಸಬಹುದು?

ಎಲ್ಲಿ ಜನರು ತಮ್ಮ ಅನಾರೋಗ್ಯಕ್ಕೆ ಚಿಕಿತ್ಸೆ ಪಡೆಯುತ್ತಾರೋ ಅಥವಾ ಆರೋಗ್ಯಕ್ಕೆ ಸಲಹೆ ಪಡೆಯುತ್ತಾರೋ ಅಲ್ಲಿ ನಿರ್ಲಕ್ಷ್ಯ ಕಂಡುಬರುವ ಸಾಧ್ಯತೆ ಇರುತ್ತದೆ.



ಉದಾ: ಸಾಮಾನ್ಯ ಹೊರರೋಗಿ ಚಿಕಿತ್ಸಾಲಯ (OUTPATIENT CLINICS) ಗಳಲ್ಲಿ (ಸರಕಾರಿ ಅಥವಾ ಖಾಸಗೀ), ದಂತ ಚಿಕಿತ್ಸಾ ಕೇಂದ್ರಗಳಲ್ಲಿ ಆಪರೇಷನ್ ಮಾಡಿಸಿಕೊಂಡ ಸ್ಥಳದಲ್ಲಿ, ತುರ್ತು ಚಿಕಿತ್ಸಾ ಕೇಂದ್ರಗಳಲ್ಲಿ, ಅರವಳಿಕೆ (ANAESTHESIA) ಪಡೆದ ರೋಗಿಗಳಲ್ಲಿ, ಪ್ಲಾಸ್ಟಿಕ್ ಸರ್ಜರಿಗಳಲ್ಲಿ, ಕ್ಷಕಿರಣ ಚಿಕಿತ್ಸೆಗಳಲ್ಲಿ, ಇತ್ಯಾದಿ.

ವೈದ್ಯಕೀಯ ನಿರ್ಲಕ್ಷ್ಯದ ಪರಿಣಾಮಗಳೇನು?

ಪ್ರಾರಂಭದಲ್ಲಿ ನೋವು ಹಾಗೂ ಆತಂಕ ಕಂಡುಬರುತ್ತದೆ. ಕೆಲವೊಮ್ಮೆ ವೈದ್ಯಕೀಯ ಯಿಂದ ಸಾವು, ನೋವು ಹಾಗೂ ನಿರ್ಲಕ್ಷ್ಯ ಅಂಗ ಊನಗಳಾಗುತ್ತವೆ.

* ವೈದ್ಯಕೀಯ ವೆಚ್ಚ ಹೆಚ್ಚಾಗುತ್ತದೆ. ನಂತರದ ದಿನಗಳಲ್ಲಿ ರೋಗಿ ವೈದ್ಯನಲ್ಲಿ ಹೋಗಬೇಕಾಗುವುದರಿಂದ ಆಗಲೂ ವೈದ್ಯಕೀಯ ವೆಚ್ಚವಾಗುತ್ತದೆ.
* ವ್ಯಕ್ತಿ ತನ್ನ ವೃತ್ತಿಯಿಂದ ದೂರ ಉಳಿಯಬೇಕಾಗುವುದರಿಂದ ಆದಾಯ ನಷ್ಟವಾಗುತ್ತದೆ.
* ಕೆಲವೊಮ್ಮೆ ರೋಗಿಗೆ ದೀರ್ಘಕಾಲದ ಸಮಸ್ಯೆಯಾದಾಗ, ಶಾಶ್ವತ ವೈದ್ಯಕೀಯ ವೆಚ್ಚವಾಗುವ ಸಾಧ್ಯತೆ ಇರುತ್ತದೆ.

ವೈದ್ಯ ವಿಜ್ಞಾನ ಅಪಾರವಾಗಿ ಬೆಳೆದಿದೆ. ವೈದ್ಯ ವಿಜ್ಞಾನವನ್ನು ರೋಗ ಪರೀಕ್ಷೆ ಹಾಗೂ ರೋಗ ಚಿಕಿತ್ಸೆಗೆ ಉಪಯೋಗಿಸುವಾಗ ಕೆಲವು ಲೋಪದೋಷಗಳಾಗುತ್ತಿವೆ. ಅದರಿಂದ ರೋಗಿಗೆ ತೊಂದರೆಯಾದರೂ ಅದನ್ನು ವೈದ್ಯಕೀಯ ನಿರ್ಲಕ್ಷ್ಯ ಎಂದು ಹೇಳಲಾಗುವುದಿಲ್ಲ. ಈಗಿನ ದಿನಗಳಲ್ಲಿ ಆಸ್ಪತ್ರೆಗಳನ್ನು ಉನ್ನತ ಮಟ್ಟಕ್ಕೆ ಏರಿಸುವ ಅನೇಕ ಮೌಲ್ಯಮಾಪನ ಮಾಡುವ ಕಂಪನಿಗಳು ಉದ್ಭವವಾಗಿವೆ. ಆಸ್ಪತ್ರೆಗಳಲ್ಲಿಯೇ ಎಥಿಕ್ಸ್ (ETHICS) ಕಮಿಟಿ ಹಾಗೂ ಆಡಿಟ್ ಕಮಿಟಿಗಳಾಗಿ ಆಸ್ಪತ್ರೆ ವಾತಾವರಣವು ಸ್ನೇಹಮಯವಾಗಲು ಪ್ರಯತ್ನ ಮಾಡಲಾಗುತ್ತದೆ. ಆದರೂ ಈ ಹಂತದಲ್ಲಿ ಕೆಲವು ಲೋಪದೋಷಗಳನ್ನು ಗುರುತಿಸಬಹುದಾಗಿದೆ.

ಉದಾ:

* ಆಸ್ಪತ್ರೆ / ಆರೋಗ್ಯ ಕೇಂದ್ರ ಸ್ವಚ್ಛವಾಗಿರದೇ ಇರುವುದು. ಶೌಚಾಲಯ ಇಲ್ಲದಿರುವುದು.
* ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು.
* ಹೆರಿಗೆ ವ್ಯವಸ್ಥೆ ಇರಬೇಕಾದಲ್ಲಿ ಇಲ್ಲದಿರುವುದು.
* ಆಸ್ಪತ್ರೆ/ಆರೋಗ್ಯ ಕೇಂದ್ರದ ಕಟ್ಟಡ ಶಿಥಿಲವಾಗಿರುವುದು.
* ಲಂಚ/ಭ್ರಷ್ಟಾಚಾರ ವ್ಯಾಪಕವಾಗಿ ಕಂಡುಬರಬಹುದು ಅದರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ದೂರುಕೊಟ್ಟರೂ ಅದನ್ನು ಗಮನಿಸದಿರುವುದು.
* ರೋಗಿಗೆ ಯಾವುದೇ ತರಹದ ವೈದ್ಯಕೀಯ, ಆಸ್ಪತ್ರೆಯ ಚಿಕಿತ್ಸೆಯ ಮಾಹಿತಿ ದೊರೆಯದಿರುವುದು. ಅಗತ್ಯ ಔಷಧಿಗಳು ದೊರಕದಿರುವುದು, ಸರಕಾರಿ ಆಸ್ಪತ್ರೆ ಅಥವಾ ಆರೋಗ್ಯ ಕೇಂದ್ರದಲ್ಲಿ ಔಷಧಿ ದೊರಕಿದರೂ, ವೈದ್ಯರು ರೋಗಿಗೆ ಹೊರಗಡೆ ಕೊಂಡುಕೊಳ್ಳಲು ಔಷಧಿ ಚೀಟಿ ನೀಡುವುದು.
* ಜನಾರೋಗ್ಯ ಸನ್ನದು ಆಸ್ಪತ್ರೆಯಲ್ಲಿ ಹಾಕದಿರುವುದು, ಆಸ್ಪತ್ರೆ ಸೇವೆಗಳ ಬಗ್ಗೆ ಮಾಹಿತಿ ನೀಡದಿರುವುದು.
* ಆಸ್ಪತ್ರೆಯಲ್ಲಿ ಅಗ್ನಿಶಾಮಕ ವ್ಯವಸ್ಥೆ ಇಲ್ಲದಿರುವುದು.
* ಆಸ್ಪತ್ರೆ ಸಿಬ್ಬಂದಿಯಲ್ಲಿ ಹೊಂದಾಣಿಕೆ ಇಲ್ಲದಿರುವುದು.
* ಆಸ್ಪತ್ರೆ ಮೇಲ್ವಿಚಾರಣೆಗೆ ಯಾವುದೇ ಸಮಿತಿ ಇಲ್ಲದಿರುವುದು.

ಇವುಗಳನ್ನು ವೈದ್ಯಕೀಯ ನಿರ್ಲಕ್ಷ್ಯ ಎಂದು ಪರಿಗಣಿಸದಿದ್ದರೂ ಇವುಗಳು ರೋಗಿಗಳಿಗೆ ತೊಂದರೆಯನ್ನುಂಟುಮಾಡುತ್ತವೆ. ಇವುಗಳನ್ನು ಸರಿಪಡಿಸಲು ಸರಕಾರ ಅಥವಾ ಆಸ್ಪತ್ರೆ ವ್ಯವಸ್ಥಾಪಕರು ಪ್ರಯತ್ನ ಮಾಡಬೇಕು. ಇವುಗಳನ್ನು ಸರಿಪಡಿಸುವುದರಿಂದ ವೈದ್ಯಕೀಯ ನಿರ್ಲಕ್ಷ್ಯದ ಪ್ರಕರಣಗಳು ಕಡಿಮೆಯಾಗಲು ಸಹಾಯವಾಗುತ್ತವೆ.

ವೈದ್ಯನ ಕರ್ತವ್ಯ

ಸರ್ವೋಚ್ಚ ನ್ಯಾಯಾಲಯ "ಪ್ರತಿಯೊಬ್ಬ ವೈದ್ಯನೂ ಕಾಳಜಿ ಹಾಗೂ ತನ್ನ ಪರಿಣತಿಯನ್ನು ಉಪಯೋಗಿಸಿ ಚಿಕಿತ್ಸೆ ನೀಡಬೇಕಾಗುತ್ತದೆ" ಎಂದು ಹೇಳುತ್ತದೆ.

ಪ್ರತಿಯೊಬ್ಬ ವೈದ್ಯನೂ ರೋಗಿಯೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳಬೇಕು. ರೋಗದ ಇತಿಹಾಸ ಪಡೆದು ರೋಗಿಯನ್ನು ಪರೀಕ್ಷೆ ಮಾಡಿ ರೋಗ ಕಂಡುಹಿಡಿದು ಚಿಕಿತ್ಸೆ ನೀಡಬೇಕು. ನಂತರ ರೋಗ ಯಾವುದು, ಎಷ್ಟು ದಿನ ಇರುತ್ತದೆ, ಅದರ ಚಿಕಿತ್ಸೆ ಮಾಡದಿದ್ದರೇನು ಅಪಾಯ, ಅದನ್ನು ತಡೆಗಟ್ಟುವುದು ಹೇಗೆ, ಚಿಕಿತ್ಸೆ ಎಷ್ಟು ದಿನ, ಚಿಕಿತ್ಸೆ ಅಡ್ಡಪರಿಣಾಮ ಮುಂತಾದ ವಿಷಯಗಳ ಬಗ್ಗೆ, ರೋಗಿಗೆ ಹೇಳಬೇಕು, ರೋಗಿಯ ಪ್ರಶ್ನೆಗಳಿಗೆ, ಉತ್ತರಿಸಬೇಕು, ಖಾಸಗಿ ಕೇಂದ್ರಗಳಲ್ಲಿ ಚಿಕಿತ್ಸೆಯ ವೆಚ್ಚವೆಷ್ಟು ಎಂದು ಹೇಳಬೇಕಾಗುತ್ತದೆ.

ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿದ ಎಲ್ಲ ವಿವರಗಳನ್ನು ರೋಗಿಗೆ ವರದಿ ಮೂಲಕ ನೀಡಬೇಕು.

ರೋಗ ಕಂಡುಹಿಡಿಯುವುದು ವೈದ್ಯನ ಕರ್ತವ್ಯಗಳಲ್ಲೊಂದು. ಕೆಲವೊಮ್ಮೆ ರೋಗ ಕಂಡುಹಿಡಿಯದೇ ನೇರವಾಗಿ ಚಿಕಿತ್ಸೆ ನೀಡುತ್ತಿರುವುದು ಕಂಡುಬರುತ್ತದೆ. ಇನ್ನು ಕೆಲವು ಬಾರಿ ರೋಗ ಪತ್ತೆ ಆಗದಿದ್ದರೂ ಚಿಕಿತ್ಸೆ ನೀಡಲಾಗುತ್ತದೆ. ಉದಾ: ಅಪೆಂಡಿಸೈಟಿಸ್, ಕ್ಯಾನ್ಸರ್, ಹೃದಯಾಘಾತ, ಸಕ್ಕರೆ ಕಾಯಿಲೆ. ರೋಗಿ ಇನ್ನೊಬ್ಬ ವೈದ್ಯನಲ್ಲಿಗೆ ಹೋದಾಗ ರೋಗ ಪತ್ತೆಯಾಗಿ ಚಿಕಿತ್ಸೆ ವಿಳಂಬವಾಗಿ ರೋಗಿಗೆ ತೊಂದರೆಯಾಗುತ್ತದೆ. ಇದೂ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತದೆ. ಅನೇಕ ಬಾರಿ ವೈದ್ಯನಿಗೆ ರೋಗ ಕಂಡುಹಿಡಿಯಲಾಗದಿದ್ದಲ್ಲಿ, ವೈದ್ಯ ನಿರ್ಲಕ್ಷಿಸದೇ ಕೂಡಲೇ ಇತರೇ ತಜ್ಞ ವೈದ್ಯನಲ್ಲಿಗೆ ರೋಗಿಯನ್ನು ಕಳುಹಿಸುವ ಕನಿಷ್ಠ ವ್ಯವಸ್ಥೆ ಮಾಡಬೇಕಾಗುತ್ತದೆ.

ವೈದ್ಯ ವಿಜ್ಞಾನ, ಜೀವ ವಿಜ್ಞಾನದ ಭಾಗ. ಜೀವ ವಿಜ್ಞಾನ ಅಪಾರವಾಗಿ ಬೆಳೆದಿದೆ. ಮಾನವನ ವಿಕಾಸ ಇನ್ನಷ್ಟು ಉನ್ನತ ಹಾಗೂ ಸಂಕೀರ್ಣವಾಗಿದೆ. ಆದರೂ ವೈದ್ಯ ವಿಜ್ಞಾನಕ್ಕೆ ಅನೇಕ ಮಿತಿಗಳಿವೆ. ಅನೇಕ ಬಾರಿ ಈ ಮಿತಿಗಳನ್ನು ಗುರುತಿಸಲಾಗುವುದಿಲ್ಲ. ಹಾಗೂ ಅದನ್ನು ನಿರ್ಲಕ್ಷ್ಯತೆಯಿಂದ ಕಂಡು ವೈದ್ಯನಿಗೆ ಅಪಾಯ ಉಂಟುಮಾಡುವ ಪ್ರಕರಣಗಳು ಹಲವಾರು. ಅನೇಕ ಬಾರಿ ರೋಗಿ, ವೈದ್ಯ, ವ್ಯವಸ್ಥೆಯಲ್ಲಿ ಸರಿಯಾದ ಸಂವಹನದ ಕೊರತೆಯಿಂದ ನಿರ್ಲಕ್ಷ್ಯವಾಗಿದೆಯೆಂದು ತೀರ್ಮಾನವಾಗುತ್ತದೆ.

ಭಾರತದಲ್ಲಿ ಜನರಿಗೆ ತಮ್ಮ ವೈದ್ಯನ ಮೇಲೆ ಪ್ರಶ್ನಾತೀತ ನಂಬಿಕೆ ಇರುವುದನ್ನು ನಾವು ನೋಡುತ್ತೇವೆ. ವೈದ್ಯನ ಮೇಲೆ, ಅವರ ವೈದ್ಯಕೀಯ ತಿಳುವಳಿಕೆ ಮೇಲೆ ನಂಬಿಕೆ ಅತ್ಯಗತ್ಯ. ಆದರೆ ಅದು ಕುರುಡು ನಂಬಿಕೆಯಾಗಬಾರದು. ಈ ಕಾರಣದಿಂದ ವೈದ್ಯಕೀಯ ನಿರ್ಲಕ್ಷ್ಯಗಳು ಬೆಳಕಿಗೆ ಬರುತ್ತಿಲ್ಲ.

ವೈದ್ಯ, ವೈದ್ಯ ವ್ಯವಸ್ಥೆ ಹಾಗೂ ರೋಗಿಗಳು ವೈದ್ಯಕೀಯ ನಿರ್ಲಕ್ಷ್ಯತೆಯನ್ನು ತಡೆಗಟ್ಟಲು ಪ್ರಯತ್ನಿಸಬೇಕು, ವೈದ್ಯವಿಜ್ಞಾನದ ಸದುಪಯೋಗ

ಪುಟ 4 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಸಂವಿಧಾನ ತಿದ್ದುಪಡಿಯೊಂದರಿಂದಲೇ ಹಿಂದುಳಿಯುವಿಕೆ ನೀಗದು

ಹೈದರಾಬಾದ್ - ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 371ನೇ ಕಲಂ ತಿದ್ದುಪಡಿ ಮಸೂದೆಗೆ ಕೊನೆಗೂ ಲೋಕಸಭೆ ಹಾಗೂ ರಾಜ್ಯಸಭೆ ಅನುಮೋದನೆ ನೀಡಿರುವುದು ಸ್ವಾಗತಾರ್ಹವಾಗಿದೆ. ಅಭಿವೃದ್ಧಿಯಿಂದ ವಂಚಿತವಾಗಿದ್ದ ಆ ಭಾಗದ ಜನತೆಯ ಮೂರು ದಶಕಗಳ ಹೋರಾಟಕ್ಕೆ ಈಗ ಜಯ ಸಿಕ್ಕಂತಾಗಿದೆ. ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಇದರ ರಾಜಕೀಯ ಲಾಭ ಪಡೆಯಲು ಕೇಂದ್ರ್ರದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಒಳಗೊಳಗೆ ಹುನ್ನಾರ ನಡೆಸಿದ್ದು ಗುಟ್ಟಾಗಿ ಉಳಿಯಲಿಲ್ಲ. ಕೊನೆಗೆ ತಾನು ಕೇಂದ್ರಕ್ಕೆ ಬರೆದ ಪತ್ರ ತನಗೇ ತಿರುಗು ಬಾಣ ಆಗಬಹುದೆಂಬ ಭೀತಿಯಿಂದ ರಾಜ್ಯ ಬಿಜೆಪಿ ಸರ್ಕಾರ ಪತ್ರವನ್ನು ಹಿಂತೆಗೆದುಕೊಂಡಿತು. ಇದರಿಂದ ಕೇಂದ್ರ ಯುಪಿಎ ಸರ್ಕಾರಕ್ಕೆ ಮಸೂದೆಯನ್ನು ಸದನದಲ್ಲಿ ಮಂಡಿಸಲು ಹಾದಿ ಸುಗಮವಾಯಿತು. ಸದನದಲ್ಲಿ ಹಾಜರಿದ್ದ ಎಲ್ಲಾ ಪಕ್ಷಗಳ ಎಲ್ಲ ಸದಸ್ಯರೂ ತಿದ್ದುಪಡಿ ಮಸೂದೆಗೆ ಒಪ್ಪಿಗೆ ಸೂಚಿಸಿದ್ದು ಗಮನಾರ್ಹವಾಗಿದೆ.

ಆದರೆ ಸಂಸತ್ತಿನ ಉಭಯ ಸದನಗಳಲ್ಲಿ ಅಂಗೀಕಾರಗೊಂಡ ಮಸೂದೆ ಕಾಯ್ದೆಯಾಗಿ ಜಾರಿಗೆ ಬರುವ ಪ್ರಕ್ರಿಯೆ ಸಾಕಷ್ಟು ಉದ್ದವಾಗಿಯೇ ಇದೆ. ಮಸೂದೆಯನ್ನು ಎಲ್ಲ 28 ರಾಜ್ಯಗಳಿಗೆ ಕಳುಹಿಸಲಾಗುತ್ತದೆ. ಅರ್ಧಕ್ಕಿಂತ ಹೆಚ್ಚು, ಅಂದರೆ ಕನಿಷ್ಠ 15 ರಾಜ್ಯಗಳು ಅದನ್ನು ಅನುಮೋದಿಸಬೇಕು. ಅರ್ಧಕ್ಕಿಂತ ಅಧಿಕ ರಾಜ್ಯಗಳು ಅದನ್ನು ಅನುಮೋದಿಸದೆ ಹೋದರೆ ಮತ್ತೆ ಅದನ್ನು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಅಂಗೀಕರಿಸಿ, ರಾಷ್ಟ್ರಪತಿಗಳ ಅಂಕಿತ ಪಡೆಯಬೇಕು. ಆನಂತರ ರಾಜ್ಯ ಸರ್ಕಾರ ನಿಯಮಾವಳಿಗಳನ್ನು ರೂಪಿಸಿ ಕಾಯ್ದೆಯ ಅನುಷ್ಠಾನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

ಪ್ರಸ್ತುತ ಸಂವಿಧಾನದ 371ನೇ ಕಲಂ (ಜೆ) ತಿದ್ದುಪಡಿಯಿಂದಾಗಿ ಹೈದರಾಬಾದ್ - ಕರ್ನಾಟಕ ವ್ಯಾಪ್ತಿಯ 6 ಜಿಲ್ಲೆಗಳ ಜನರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಮೀಸಲಾತಿ ಜತೆಗೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಸಾಕಷ್ಟು ಅನುದಾನ ದೊರೆಯಬೇಕಾಗಿದೆ. ಆದರೆ ಕಾಯ್ದೆಯೊಂದು ಅಂಗೀಕಾರಗೊಂಡ ತಕ್ಷಣ ಶತಮಾನಗಳ ಹಿಂದುಳಿಯುವಿಕೆ ತನ್ನಷ್ಟಕ್ಕೆ ನೀಗಲಿದೆ ಎಂದು ಭಾವಿಸುವುದು ಮೂರ್ಖತನವಾದೀತು. ಮಹಾರಾಷ್ಟ್ರದ ವಿದರ್ಭ ಪ್ರದೇಶಕ್ಕೆ ನೀಡಲಾದ ವಿಶೇಷ ಸ್ಥಾನಮಾನದಿಂದ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚು ಅನುದಾನ ಮೀಸಲಿಡಲಾಗಿತ್ತು. ಆದರೆ ಆ ಪ್ರದೇಶದಲ್ಲಿ ರೈತರ ಆತ್ಮಹತ್ಯೆಗಳನ್ನಾಗಲಿ, ಹಸಿವಿನ ಸಾವುಗಳನ್ನಾಗಲಿ ನಿಲ್ಲಿಸಲು ಸಾಧ್ಯವಾಗಿಲ್ಲ. ಆಂಧ್ರ ಪ್ರದೇಶದ ತೆಲಂಗಾಣ ಪ್ರದೇಶಕ್ಕೆ ನೀಡಲಾದ ವಿಶೇಷ ಸ್ಥಾನಮಾನದಿಂದ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸ್ಥಳೀಯರಿಗೆ ಮೀಸಲಾತಿ ಸಿಕ್ಕಿತ್ತು. ಆದರೆ ತೆಲಂಗಾಣ ಪ್ರತ್ಯೇಕ ರಾಜ್ಯದ ಬೇಡಿಕೆ ಮುಂದಿಟ್ಟುಕೊಂಡು ಅಲ್ಲಿ ಹೋರಾಟ ನಡೆಯುತ್ತಲೇ ಇದೆ.

ಕೇವಲ ವಿಶೇಷ ಸ್ಥಾನಮಾನ ಸಿಗುವುದರಿಂದ ಒಂದು ಪ್ರದೇಶದ ಅಭಿವೃದ್ಧಿ ಆಗುವುದಿಲ್ಲ. ಅಭಿವೃದ್ಧಿಗೂ ಸರ್ಕಾರದ ದೋರಣೆಗಳಿಗೂ ನೇರವಾದ ಸಂಬಂಧವಿದೆ. ಸ್ವಾತಂತ್ರ್ಯಾನಂತರ ದೇಶದಲ್ಲಿ ಬಂಡವಾಳಶಾಹಿ ಅಭಿವೃದ್ಧಿ ದಾರಿಯನ್ನು ಅನುಸರಿಸುತ್ತಾ ಬರಲಾಯಿತು. ಅದರಿಂದಾಗಿ ಗುತ್ತೇದಾರಿ ಬಂಡವಾಳಗಾರರಿಗೆ ಲಾಭವಾಯಿತು. 90ರ ದಶಕದ ಈಚೆಗೆ ಉದಾರೀಕರಣದ ದೋರಣೆಗಳನ್ನು ಅನುಸರಿಸಲು ಆರಂಭಿಸುವ ಮೂಲಕ ದೇಶೀಯ ದೊಡ್ಡ ಬಂಡವಾಳಿಗರ ಜೊತೆಯಲ್ಲಿ ವಿಶ್ವ ಹಣಕಾಸು ಬಂಡವಾಳದ ಪ್ರತಿನಿಧಿಗಳಿಗೆ ದೇಶದೊಳಗೆ ಬರಮಾಡಿಕೊಳ್ಳಲಾಯಿತು. ಇದರೊಂದಿಗೆ ದೇಶದ ಜನರ ಅಭಿವೃದ್ಧಿಯ ಬಾಗಿಲು ಮುಚ್ಚಿದಂತಾಯಿತು. ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಹೆಚ್ಚಾಯಿತು ಮಾತ್ರವಲ್ಲ ಪ್ರಾದೇಶಿಕ ಅಸಮಾನತೆ ತೀವ್ರಗೊಳ್ಳಲು ಕಾರಣವಾಯಿತು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಈ ದೋರಣೆಗಳು ಬದಲಾಗದೆ ಸಂಸತ್ತಿನಲ್ಲಾಗಲಿ, ರಾಜ್ಯ ಶಾಸನ ಸಭೆಗಳಲ್ಲಾಗಲಿ ಕಾನೂನುಗಳನ್ನು ರೂಪಿಸುವುದರಿಂದ ಅಸಮಾನ ಬೆಳವಣಿಗೆಯ ಸಮಸ್ಯೆಯನ್ನು ಇತ್ಯರ್ಥಪಡಿಸಲು ಸಾಧ್ಯವಿಲ್ಲ.

ಅಭಿವೃದ್ಧಿಯ ಪರ್ಯಾಯ ದೋರಣೆಗಳನ್ನು ಜನ ಗುರುತಿಸುವಂತಾಗಬೇಕು. ಅವುಗಳಿಗಾಗಿ ಹೋರಾಡಬೇಕು. ಜನರ ಕೊಂಡುಕೊಳ್ಳುವ ಸಾಮರ್ಥ್ಯ ಹೆಚ್ಚಾಗುವುದೇ ನೈಜ ಅಭಿವೃದ್ಧಿಯ ಬೀಗದ ಕೈ. ಪ್ರಗತಿಪರ ಭೂ ಸುಧಾರಣೆಗಳಿಂದ ಭೂಮಿಯ ಮರು ಹಂಚಿಕೆಯಾಗಬೇಕು. ನೀರಾವರಿ ಹಾಗೂ ಕೃಷಿಯಲ್ಲಿ ಸಂಶೋಧನೆಗೆ ಆದ್ಯತೆ ದೊರೆಯಬೇಕು. ಕೃಷಿ ಕ್ರಾಂತಿಯೊಂದಿಗೆ ಕೈಗಾರೀಕರಣಕ್ಕೆ ನಾಂದಿಯಾಗಬೇಕು. ಅದುವೇ ಸಮಗ್ರ ಅಭಿವೃದ್ಧಿಯ ದಾರಿ. ಅಲ್ಲಿಯವರೆಗೆ ಮೀಸಲಾತಿಯಂತಹ ತಾತ್ಕಾಲಿಕ ಪರಿಹಾರಗಳಿಗಾಗಿ ಹೋರಾಡುವುದು ಅನಿವಾರ್ಯವಾಗಿದೆ. ಉದಾರೀಕರಣ-ಖಾಸಗೀಕರಣದ ದರ್ಬಾರಿನಲ್ಲಿ ಖಾಸಗೀ ಶಿಕ್ಷಣ ಸಂಸ್ಥೆಗಳು, ಖಾಸಗಿ ವಿಶ್ವವಿದ್ಯಾಲಯಗಳು, ಖಾಸಗಿ ಉದ್ಯಮಗಳು ಹಾಗೂ ಅಳಿದುಳಿದ ಸಾರ್ವಜನಿಕ ರಂಗದಲ್ಲಿ ಗುತ್ತಿಗೆ, ಹೊರಗುತ್ತಿಗೆಗಳೇ ವಿಜೃಂಭಿಸುವವಾಗ ವಿಶೇಷ ಸ್ಥಾನಮಾನದಿಂದಾಗಲಿ, ಮೀಸಲಾತಿಯಿಂದಾಗಲಿ ಹಿಂದುಳಿಯುವಿಕೆಯನ್ನು ಹೊಡೆದು ಹಾಕಲು ಸಾಧ್ಯವೇ?


ರೈತ-ದಲಿತ-ಅಲ್ಪಸಂಖ್ಯಾತ ವಿರೋಧಿ ಗೋಹತ್ಯೆ ನಿಷೇಧ ಮಸೂದೆಗೆ ರಾಜ್ಯಪಾಲರು ಅಂಕಿತ ಹಾಕದಿರಲಿ

'ಕತ್ತೆ ಕಾಶಿಗೆ ಹೋದರೂ ಕಾಲು ಝಾಡಿಸುವ ತನ್ನ ಚಾಳಿ ಬಿಡೋದಿಲ್ಲ' ಎನ್ನುವ ಗಾದೆ ಮಾತೊಂದಿದೆ. ಹಾಗೆ ಬಿಜೆಪಿ ಬೆಳಗಾವಿಯಲ್ಲಿ ಅಧಿವೇಶನ ನಡೆಸಿದರೂ ತನ್ನ ಪ್ರಜಾಪ್ರಭುತ್ವ ವಿರೋಧಿ ಸ್ವಭಾವವನ್ನು ಬಿಡೋದುಂಟೇ? ಬೆಳಗಾವಿಯಲ್ಲಿ ಅಧಿವೇಶನ ನಡೆಸಿದ್ದೇ ತನ್ನ ಮಹಾ ಹೆಗ್ಗಳಿಕೆಯೆಂದು ಬಿಜೆಪಿಯೇನೋ ಕೊಚ್ಚಿಕೊಳ್ಳುತ್ತಿದೆ. ಆದರೆ ವಿಧಾನಸೌಧವೋ, ಸುವರ್ಣ ಸೌಧವೋ ಅಲ್ಲಿ ನಡೆಯುವುದು ಅಭಿವೃದ್ಧಿ ಅಧಿವೇಶನವೆಂದೇ ಹೇಳಿಕೊಂಡರೂ ತನ್ನ ಕೋಮುವಾದೀ ಫ್ಯಾಶಿಸ್ಟ್ ಪ್ರವೃತ್ತಿಯನ್ನು ಜಾರಿಗೊಳಿಸಲು ಆ ಸಂದರ್ಭವನ್ನು ದುರುಪಯೋಗ ಮಾಡಿಕೊಂಡಿತು, ಪ್ರಜಾಪ್ರಭುತ್ವಕ್ಕೆ ಮಾರಕವಾಗಿ ವರ್ತಿಸಿತು.

ಬೆಳಗಾವಿಯ ಅಧಿವೇಶನ ಬಹುತೇಕ ನಿರರ್ಥಕವೆಂಬುದು ವ್ಯಾಪಕವಾಗಿ ಕೇಳಿ ಬಂದ ಅಭಿಪ್ರಾಯವಾಗಿದೆ. ಒಂದನೆಯದಾಗಿ ಬೆಂಗಳೂರಿನ ಕಲಾಪಗಳಿಗೆ ಮಾಡುವ ಖರ್ಚಿನ ಕನಿಷ್ಟ ಮೂರು ಪಟ್ಟು(ಒಟ್ಟು 18 ಕೋಟಿ) ಹೆಚ್ಚಿನದಾಗಿತ್ತು. ಬಹು ಮುಖ್ಯವಾಗಿ ಯಾವುದೇ ವಿಷಯಗಳ ಬಗ್ಗೆ ಗಂಭೀರ ಚರ್ಚೆ ನಡೆಸದೇ ವಿಧಾನ ಸಭೆಯ ವೇದಿಕೆಯನ್ನು ಅರ್ಥಹೀನಗೊಳಿಸಿದ್ದು, ಮಾತ್ರವಲ್ಲ, ತನ್ನ ದುಷ್ಟ ಅಜೆಂಡಾ ಜಾರಿಗಾಗಿ ಸಂಸದೀಯ ವಿಧಾನ, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬುಡಮೇಲುಗೊಳಿಸಿದ್ದು. ವಿಶೇಷವಾಗಿ ಯಾವುದೇ ವಿರೋಧ ಪಕ್ಷಗಳು ಅಧಿವೇಶನದಲ್ಲಿ ಇಲ್ಲದಿರುವಾಗ ತರಾತುರಿಯಲ್ಲಿ ರಾಜ್ಯದ ಮತ್ತು ರಾಷ್ಟ್ರದ ಸಾಮಾಜಿಕ, ಆರ್ಥಿಕ ರಂಗದ ಮೇಲೆ ಅಪಾಯಕಾರಿ ಪರಿಣಾಮ ಬೀರುವ ಗೋ ಹತ್ಯೆ ನಿಷೇಧ ವಿಧೇಯಕ, ಶಿಕ್ಷಣದ ದಂಧೆಗೆ, ಖಾಸಗಿ ಸಂಸ್ಥೆಗಳ ಮನಸೋ ಇಚ್ಛೆ ಲೂಟಿಗೆ ಅವಕಾಶ ಕಲ್ಪಿಸುವ ಖಾಸಗಿ ವಿಶ್ವವಿದ್ಯಾಲಯಗಳ ಆರಂಭಕ್ಕೆ ಅವಕಾಶ ಕಲ್ಪಿಸಿದ ಮಸೂದೆ ಒಳಗೊಂಡು ಒಟ್ಟು 13 ಮಸೂದೆಗಳನ್ನು ಮಂಡಿಸಿ ರಣಹೇಡಿಯಾಗಿ ತರಾತುರಿಯಲ್ಲಿ ಅನುಮೋದಿಸಿಕೊಂಡಿತು.

ಹಿಂದಿನ ದಿನವೇ ತರಲೆತ್ನಿಸಿದ್ದ ಕರ್ನಾಟಕ ಗೋ ಹತ್ಯೆ ಪ್ರತಿಭಂದಕ ಮತ್ತು ಜಾನುವಾರು ರಕ್ಷಣೆ(ತಿದ್ದುಪಡಿ) ಮಸೂದೆ-2012 ನ್ನು ತೀವ್ರ ವಿರೋಧದ ನಡುವೆ ಹಿಂದಕ್ಕೆ ಇಟ್ಟಿತ್ತು. ಆದರೆ ಮರು ದಿನ ಕಲಾಪದ ಸಂದರ್ಭದಲ್ಲಿ ಗೊಂದಲಕಾರಿ ವಾತಾವರಣ ಸೃಷ್ಟಿಯಾಗಿದ್ದಾಗ ತನ್ನ ಕೈಗೊಂಬೆಯೆಂದು ಭಾವಿಸುರುವ ಸಭಾಪತಿಗಳ ಮೂಲಕ ಈ ಮಸೂದೆಯನ್ನು ಧ್ವನಿಮತದಿಂದ ಅಂಗಿಕರಿಸಿರುವುದಾಗಿ ಏಕಪಕ್ಷೀಯವಾಗಿ ಪ್ರಕಟಿಸಿತು. ಬಿಜೆಪಿ ಅಧಿಕಾರಕ್ಕೆ ಬರುವ ಮೊದಲಿನಿಂದಲೂ ತನ್ನ ಕೋಮುವಾದೀ ವಿಭಜನೆಯ ರಾಜಕಾರಣಕ್ಕಾಗಿ ಗೋವನ್ನು ದುರುಪಯೋಗ ಮಾಡುತ್ತಾ ಬಂದಿರುವುದು ತಿಳಿದ ವಿಷಯವೇ ಆಗಿದೆ. ಅದು ಅಧಿಕಾರಕ್ಕೆ ಬಂದ ಕೂಡಲೇ ಏನಾದರೂ ಮಾಡಿ 1964ರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಅದನ್ನು ಇನ್ನಷ್ಟೂ ಕ್ರೂರಗೊಳಿಸಲು ಮುಂದಾಯಿತು. ಇದನ್ನೇ ಅದು ಆಡಳಿತ ನಡೆಸಿದ ಬಹುತೇಕ ರಾಜ್ಯಗಳಲ್ಲಿ ಮಾಡಿದೆ. ಹಸು ಮಾತ್ರವಲ್ಲ ಎಮ್ಮೆ, ಎತ್ತುಗಳು ಜಾನುವಾರುಗಳು ವ್ಯಾಖ್ಯಾನಕ್ಕೆ ಒಳಗಾಗಿ ಜಾನುವಾರುಗಳ ಸಾಗಾಣಿಕೆ, ಅದರ ಮಾಂಸ ಭಕ್ಷಣೆ ಅತ್ಯಂತ ದಂಡನೀಯ ಕ್ರಿಮಿನಲ್ ಅಪರಾಧವನ್ನಾಗಿಸಿತು. ಜನತೆಯ ಪ್ರಬಲ ವಿರೋಧವನ್ನು ಲೆಕ್ಕಿಸದೇ ಅಂಗೀಕರಿಸಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿತ್ತು. ಇದನ್ನು ಆಳವಾಗಿ ಪರಿಶೀಲಿದ ರಾಜ್ಯಪಾಲರು ಲೋಪದೋಷಗಳನ್ನು ಪಟ್ಟಿ ಮಾಡಿ ರಾಷ್ಟ್ರಪತಿಗಳ ಪರಿಶೀಲನೆಗೆ ಕಳುಹಿಸಿದ್ದರು. ಅಲ್ಲಿಂದ ಅವರೂ ಸಹ ಕೆಲವು ಸ್ಪಷ್ಟನೆಗಳನ್ನು ಕೇಳಿ ರಾಜ್ಯ ಸರಕಾರಕ್ಕೆ ಕಳುಹಿಸಿದ್ದರು. ಆದರೆ ಸರಕಾರ ಅವುಗಳಿಗೆ ಸ್ಪಷ್ಟನೆ ನೀಡದೇ ತಿದ್ದುಪಡಿಯ ಹೆಸರಿನಲ್ಲಿ ಅದೇ ಕ್ರೂರ


ಪುಟ 4 ಕ್ಕೆ



ಕೃಪೆ : ವಿಜಯ ಕರ್ನಾಟಕ

- ಉತ್ತಮ ಸಮಾಜದ ಕನಸುಗಳ ಮುನ್ನುಡಿ
- ಜನಪರ ಹೋರಾಟಗಳ ಕೈಗನ್ನಡಿ
- ವೈಚಾರಿಕ-ವೈವಿಧ್ಯಮಯ-ಬಹುವರ್ಣ-ಸಚಿತ್ರ

ದುಡಿವ ಜನರ ಪ್ರಾಣ ಮಿತ್ರ



ಜನಶಕ್ತಿ

ಕನ್ನಡ ವಾರ ಪತ್ರಿಕೆಯ

ಪ್ರಸಾರಾಂದೋಲನ ಮಾಸ – ಡಿಸೆಂಬರ್ 2012

ಯಶಸ್ವಿಗೊಳಿಸಿ

ಪತ್ರಿಕೆ ಖರೀದಿಸಿ ಚಂದಾದಾರರಾಗಿ
ಓದಿ, ಓದಿಸಿ

ವಿಶೇಷ ಸಂಚಿಕೆ – ಜಾಹಿರಾತು ಸಂಗ್ರಹಕ್ಕೆ ಕೈ ಜೋಡಿಸಿ

ಬಂಧುಗಳೇ,

'ರಾಜ್ಯೋತ್ಸವ-ವಿಶೇಷ ಸಂಚಿಕೆ'ಯನ್ನು ಹೊರತರಲು ಸಿದ್ದತೆಗಳು ನಡೆದಿವೆ. ಡಿಸೆಂಬರ್ ತಿಂಗಳ ಕೊನೆಯಲ್ಲಿ ಈ ಸಲದ ವಿಶೇಷ ಸಂಚಿಕೆಯನ್ನು ಹೊರತರಲು ಉದ್ದೇಶಿಸಲಾಗಿದ್ದು ಅದನ್ನು 'ಕರ್ನಾಟಕ- ಜಾಗತೀಕರಣದ ಎರಡು ದಶಕಗಳು- ಪರಿಣಾಮಗಳು ಮತ್ತು ಪರಿಹಾರಗಳು' ಎಂಬ ವಿಷಯ ಆಧಾರಿತವಾಗಿ ರೂಪಿಸಲೂ ತೀರ್ಮಾನಿಸಲಾಗಿದೆ. ಪತ್ರಿಕೆಯ ವಿಶೇಷ ಸಂಚಿಕೆಗೆ ಜಾಹಿರಾತುಗಳನ್ನು ಸಂಗ್ರಹಿಸಲಾಗುತ್ತಿದೆ. ಪತ್ರಿಕೆಯನ್ನು ಆರ್ಥಿಕಾಗಿ ಬಲಪಡಿಸಲು ಜಾಹಿರಾತುದಾರರು ಉದಾರವಾಗಿ ಜಾಹಿರಾತುಗಳನ್ನು ನೀಡಿ ಪ್ರೋತ್ಸಾಹಿಸಬೇಕೆಂದೂ ಪತ್ರಿಕೆಯ ಹಿತೈಷಿಗಳು-ಓದುಗರು ಜಾಹಿರಾತುಗಳನ್ನು ಸಂಗ್ರಹಿಸಿ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

– ಸಂಪಾದಕರು

ಜನಶಕ್ತಿ ಪತ್ರಿಕೆಯ ಓದುಗರ - ಏಜೆನ್ಸಿದಾರರ ಗಮನಕ್ಕೆ

1. 2013 ಜನವರಿ ಒಂದರಿಂದ ಪತ್ರಿಕೆಯ ಮುದ್ರಣ-ವಿತರಣೆಯ ಜವಾಬ್ದಾರಿಯನ್ನು "ಕ್ರಿಯಾ ಪ್ರಕಾಶನ" ವಹಿಸಿಕೊಳ್ಳುತ್ತದೆ.
2. ಪತ್ರಿಕೆಯ ಬಿಡಿ ಪತ್ರಿಕೆ ಬೆಲೆ ರೂ. 10.00
3. ಹೊಸ ವಾರ್ಷಿಕ ಚಂದಾ ದರಗಳು:
ವಿದ್ಯಾರ್ಥಿಗಳಿಗೆ : 300 ರೂ.
ವ್ಯಕ್ತಿಗಳಿಗೆ : 350 ರೂ.
ಸಂಘ ಸಂಸ್ಥೆಗಳಿಗೆ: 500 ರೂ
4. ಪತ್ರಿಕೆಯ ಏಜೆನ್ಸಿದಾರರಿಗೆ ಶೇ. 30ರಷ್ಟು ಕಮಿಶನ್ ನೀಡಲಾಗುವುದು.
5. ಪತ್ರಿಕೆಗೆ ಚಂದಾ ನೊಂದಾಯಿಸುವವರಿಗೆ ಶೇ. 10ರಷ್ಟು ಕಮಿಶನ್ ನೀಡಲಾಗುವುದು.

ವೈದ್ಯಕೀಯ ನಿರ್ಲಕ್ಷ್ಯ...

ಪುಟ 2 ರಿಂದ

ಪಡೆಯಲು ಮುಂದಾಗಬೇಕು. ಜನರು ಅಗತ್ಯ ಬಿದ್ದರೆ ಗ್ರಾಹಕ ರಕ್ಷಣಾ ಕಾನೂನಿನ ಸಹಾಯ ಪಡೆಯಬೇಕು. ವೈದ್ಯರು ಎಂದಿಗಿಂತಲೂ ಹೆಚ್ಚಿನ ಜಾಗರೂಕತೆ ವಹಿಸಿದಾಗ ನಿರ್ಲಕ್ಷ್ಯತೆಯನ್ನು ತಡೆಯಬಹುದಾಗಿದೆ.

ಇಂದಿನ ದಿನಗಳಲ್ಲಿ ಸಮಯದ ಕೊರತೆಯೋ ಅಭ್ಯಾಸದ ಒತ್ತಡದಿಂದಲೋ ವೈದ್ಯರು ತಮ್ಮ ಪರೀಕ್ಷೆಗಳ ಆಧಾರದ ಮೇಲೆ ಚಿಕಿತ್ಸೆ ನೀಡಲು ಮುಂದಾಗುತ್ತಾರೆ. ಆದರೆ ಈ ವಿಧಾನ ವೈಜ್ಞಾನಿಕವಲ್ಲ. ರೋಗ ಸಮಸ್ಯೆಗೆ ಹಲವಾರು ಆಯಾಮಗಳಿರುವುದರಿಂದ ವೈದ್ಯರು, ದಾದಿಗಳು ಹಾಗೂ ಇತರರು ತಮ್ಮ ಅಭಿಪ್ರಾಯ ಕೊಟ್ಟ ನಂತರ ಚಿಕಿತ್ಸೆ ಮಾಡುವ ಪದ್ಧತಿ ರೂಢಿಗೆ ಬರಬೇಕು. ಈಗಲೂ ದೊಡ್ಡ ಆಸ್ಪತ್ರೆಗಳಲ್ಲಿ ಕೆಲವೆಡೆ (ಉದಾ ಬೆಂಗಳೂರಿನ ನಿಮಾನ್ಸ್) ಈ ಪದ್ಧತಿ ಜಾರಿಯಲ್ಲಿದೆ. ಈ ಪದ್ಧತಿಯನ್ನು ರೋಗ ಚಿಕಿತ್ಸೆಗೆ ಅಳವಡಿಸಿದರೆ, ವೈದ್ಯಕೀಯ ನಿರ್ಲಕ್ಷ್ಯತೆಯನ್ನು ಸುಲಭವಾಗಿ ತಡೆಗಟ್ಟಬಹುದಾಗಿದೆ.

ಡಾ|| ಪ್ರಕಾಶ್ ಸಿ.ರಾವ್
ಕ್ಲಿನಿಕ್ ಅರ್ಪಣ, 4/3, ಮೊದಲನೇ ಮುಖ್ಯರಸ್ತೆ, ಯಶವಂತಪುರ, ಬೆಂಗಳೂರು-560010ಮೊ: 9632726177

ಗೋಹತ್ಯೆ .... ರಾಜ್ಯಪಾಲರು ಅಂಕಿತ ಹಾಕದಿರಲಿ

ಪುಟ 3 ರಿಂದ

ಅಂಶಗಳನ್ನೇ ಪುನಃ ಮಂಡಿಸಿದೆ. ಇಲ್ಲಿ ಮಾಡಿದ ತಿದ್ದುಪಡಿಯೆಂದರೆ ಜಾನುವಾರುಗಳ ಪಟ್ಟಿಯಿಂದ ಎಮ್ಮೆ ಮತ್ತು ಕೋಣ ಕೈಬಿಟ್ಟಿರುವುದು.

ಈ ಹಿಂದಿನ ಕಾಯ್ದೆಯಲ್ಲಿ 12 ವರುಷ ಮೇಲ್ಪಟ್ಟ ಅಥವಾ ದುಡಿಯಲು ಅಸಮರ್ಥವಾಗಿರುವ ದನಗಳನ್ನು ವಧಿಸಲು ಅವಕಾಶವಿತ್ತು .ಆದರೀಗ ಅವಕಾಶವಿಲ್ಲ. ಬದಲಾಗಿ ಸಾಯುವವರೆಗೂ ಸಾಕಬೇಕಿರುವ ಅಥವಾ ಪುಕ್ಕಟೆಯಾಗಿ ಗೋಶಾಲೆಗೆ ಬಿಡುವ ಅನಿವಾರ್ಯತೆಯಿದೆ. ಒಂದು ವೇಳೆ ಗೋ ಮಾಂಸ ತಿಂದರೆ, ಅಥವಾ ಆ ಮಾಂಸ ನಿಮ್ಮಲ್ಲಿ ಕಂಡು ಬಂದರೆ ಇದೆಯೆಂದು ತನಿಖಾಧಿಕಾರಿ ಹೇಳಿದರೆ, ಸಾಗಾಣಿಕೆ ಮಾಡಿದರೆ ಜಾಮೀನು ರಹಿತ ವಾರಂಟ್ ಮೂಲಕ ಕ್ರಿಮಿನಲ್ ಮೊಕದ್ದಮೆ ಹೂಡಿ ಜೈಲಿಗಟ್ಟಲಾಗುವುದು. ಒಂದರಿಂದ ಏಳು ವರುಷಗಳವರೆಗೂ ಕಾರಾಗೃಹ ಶಿಕ್ಷೆ, ಒಂದು ಲಕ್ಷದವರೆಗೂ ದಂಡ ವಿಧಿಸಬಹುದಾಗಿದೆ. ಇಂತಹ ಅಂಶಗಳಿರುವ ಈ ಕಾಯ್ದೆ ಭಯೋತ್ಪಾದನಾ ಕೃತ್ಯಗಳಲ್ಲಿ ಬಾಗಿಯಾದವರ ಕೃತ್ಯಗಳಿಗೆ ಸಮನಾದಂತೆ!

ಈ ಕಾಯ್ದೆ ರೈತರ-ಕೃಷಿಕರ ವಿರೋಧಿಯಾಗಿದೆ. ಈಗಾಗಲೇ ಕೃಷಿಯ ಬಿಕ್ಕಟ್ಟಿನಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ ಅನಗತ್ಯವಾಗಿರುವ ದನಗಳು ಕೃಷಿಕರಿಗೆ ಹೊರೆಯಾಗಿವೆ. ಆ ಹೊರೆಯನ್ನು ಅನುಭವಿಸಲೇಬೇಕು. ಇಲ್ಲ ಗೋಶಾಲೆಗೆ ನೀಡಿದಾಗ ಅದು ಅವರ ವ್ಯಾಪಾರದ ಸರಕಾಗಿ ಲಾಭದ ದಂಧೆಗೆ ಆಹಾರವಾಗುತ್ತದೆ. ಎರಡನೆಯದಾಗಿ ಇದು ಬಹುಸಂಖ್ಯಾತರ, ಮುಖ್ಯವಾಗಿ ಬಡಜನರ, ಸಾಮಾನ್ಯರ ತಲೆತಲಾಂತರದ ಆಹಾರದ ಹಕ್ಕನ್ನು ಕಸಿದುಕೊಳ್ಳುತ್ತದೆ. ಈ ರಂಗದಲ್ಲಿರುವ ಕೋಟ್ಯಾಂತರ ಜನರ ಆರ್ಥಿಕ ಜೀವನಕ್ಕೆ ಸಂಚಕಾರ ತಂದು ಬೀದಿ ಪಾಲಾಗಿಸುತ್ತದೆ. ಮೇಲಾಗಿ ಸಂಘಪರಿವಾರ ವಿಶೇಷವಾಗಿ ದನ ಮತ್ತು ಅದರ ಮಾಂಸದ ಪ್ರಶ್ನೆಯನ್ನು ಅಲ್ಪಸಂಖ್ಯಾತರಿಗೆ ತಳಕು ಹಾಕಿ ಕೋಮುಗ್ರಸ್ತಗೊಳಿಸಿರುವುದರಿಂದ ವಿಶೇಷವಾಗಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ, ಹಿಂಸೆ ಹುಟ್ಟು ಹಾಕಿ ವಿಭಜನೆಯನ್ನು ತಂದು ದೇಶದ ಐಕ್ಯತೆ, ಸಮಗ್ರತೆ, ಪ್ರಜಾಪ್ರಭುತ್ವದ ನಾಶಕ್ಕೆ ಕಾರಣವಾಗುತ್ತದೆ. ಈಗಾಗಲೇ ದನಗಳ ಹೆಸರಿನಲ್ಲಿ ನಿತ್ಯವೂ ಧಾಳಿಗಳು, ಹಿಂಸೆ, ಗಲಭೆಗಳನ್ನು ನೋಡುತ್ತಿದ್ದೇವೆ. ಹಾಗಾಗಿ ಈ ಮಸೂದೆ ಕಾನೂನಾಗಬಾರದು ಮತ್ತು ಅದು ಜಾರಿಯಾಗಲೇಬಾರದು. ಅದಕ್ಕಾಗಿ ವಿಧಾನಸಭೆ ಇದನ್ನು ತಿರಸ್ಕರಿಸಬೇಕಾಗಿತ್ತು.

ಆದರೆ ಎಲ್ಲಾ ರಂಗಗಳಲ್ಲಿ ವಿಫಲವಾಗಿ ಜನತೆಯಿಂದ ಛೀಮಾರಿಗೀಡಾಗಿರುವ, ಅಧಿಕಾರದಾಹ, ಧನದಾಹದ ಕಿತ್ತಾಟದಿಂದ ಒಡೆದಿರುವ ಬಿಜೆಪಿ ಹೇಗಾದರೂ ಪುನಃ ಅಧಿಕಾರಕ್ಕೆ ಬರಲು ಅಂತಿಮವಾಗಿ ಎಂದಿನಂತೆ ಕೋಮುವಾದವನ್ನು ಬಳಸಲು ಹೊರಟಿದೆ. ಅದಕ್ಕಾಗಿ ಹೇಗಾದರೂ ಇದನ್ನು ಈಗಲೇ ಅಂಗೀಕರಿಸಿದಂತೆ ಮಾಡಿ ರಾಜ್ಯಪಾಲರ ಅಂಕಿತಕ್ಕೆ ಕಳುಹಿಸಿದಲ್ಲಿ ಅದನ್ನೇ ಬಳಸಿ ಮತೀಯ ವಿಭಜನೆ, ವಿಷ ಪ್ರಚಾರ ನಡೆಸಬಹುದೆಂದು ಲೆಕ್ಕಾಚಾರ ಹಾಕಿದೆ. ಈ ಹುನ್ನಾರಗಳನ್ನು ಜನತೆ ಅರಿಯಬೇಕು. ಇಂತಹ ಮಸೂದೆ ರಾಜ್ಯಪಾಲರೂ, ರಾಷ್ಟ್ರಪತಿಗಳು ಅಂಕಿತ ಹಾಕಬಾರದು. ಬಹು ಮುಖ್ಯವಾಗಿ ಜನತೆ ಬಿಜೆಪಿಯನ್ನು ಅಧಿಕಾರಕ್ಕೆ ಬರದಂತೆ ನಿರ್ಣಾಯಕವಾಗಿ ಸೋಲಿಸಿ ಮೂಲೆ ಗುಂಪಾಗಿಸಬೇಕು. ಇಲ್ಲವಾದಲ್ಲಿ ಅಪಾಯ ತಪ್ಪಿದ್ದಲ್ಲ.

ಜನಶಕ್ತಿ
ಕನ್ನಡ ವಾರಪತ್ರಿಕೆ

'ಚಿನ್ನ'ದ ನಾಡಿನಲ್ಲಿ 'ಅನ್ನದ ಭದ್ರತೆ'ಗಾಗಿ

ಒಂದು ಲಕ್ಷ ಸಹಿ ಸಂಗ್ರಹದ ಆಂದೋಲನ

ಕೋಲಾರ ಜಿಲ್ಲೆ ರೇಷ್ಮೆ ಉತ್ಪಾದನೆಗೆ ಖ್ಯಾತವಾದ ಜಿಲ್ಲೆ. ಜಿಲ್ಲೆಯ ಸಾಮಾನ್ಯ ಜನರು ರೇಷ್ಮೆ ಬಟ್ಟೆ ಖರೀದಿಸಿ ತೊಟ್ಟುಕೊಂಡು ಸಂತೋಷ ಪಡುವ ಸ್ಥಿತಿ ಇಂದು ಇದೆಯಾ ? ದೇಶಕ್ಕೆ ತನ್ನ ಒಡಲಾಳದಿಂದ ಚಿನ್ನವನ್ನು ಬಗೆದು ಬಗೆದು ಕೊಟ್ಟ ಜಿಲ್ಲೆ ಕೋಲಾರ ಜಿಲ್ಲೆ. ದಶಕಗಳ ಕಾಲ ಅನುದಿನವೂ ಗಣಿಯಾಳಕ್ಕಿಳಿದು ಬಂಗಾರದ ಅದಿರನ್ನು ಅಗೆದು ಹೆಕ್ಕಿ ತರಲು ತಮ್ಮ ಪ್ರಾಣವನ್ನೇ ಒತ್ತೆ ಇಟ್ಟು ದುಡಿಯುತ್ತಿದ್ದ ಕಾರ್ಮಿಕರು, ಜಿಲ್ಲೆಯ ರೈತರು–ಕೂಲಿಕಾರರ ಕುಟುಂಬಗಳು ತಮಗಾಗಿ ತುಣುಕು ಚಿನ್ನವನ್ನು ಖರೀದಿಸುವ ಸ್ಥಿತಿ ಇಂದು ಇದೆಯಾ ? ಬೆಂಗಳೂರು ಮಹಾನಗರ ಸೇರಿದಂತೆ ರಾಜ್ಯದ ಎಷ್ಟೋ ನಗರಗಳಿಗೆ ಹಣ್ಣು, ತರಕಾರಿ ಬೆಳೆದು ಕೊಡುವ ಜಿಲ್ಲೆ ಕೋಲಾರ ಜಿಲ್ಲೆ. ಈ ಜಿಲ್ಲೆಯ ಜನರು ತಮ್ಮ ಮನೆಗಳಲ್ಲಿ ಅಡುಗೆಗೆ ತರಕಾರಿ, ಸೊಪ್ಪು ಬಳಸುವ ಶಕ್ತಿ ಹೊಂದಿದ್ದಾರಾ ? ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ಹಾಲು ಉತ್ಪಾದನೆಯನ್ನು ಮಾಡುವ ಜಿಲ್ಲೆ ಕೋಲಾರ ಜಿಲ್ಲೆ. ಆದರೆ ತಮ್ಮ ಮನೆ ಮಕ್ಕಳಿಗೆ ಸಂತೋಷವಾಗಿ ಒಂದು ಲೋಟ ಹಾಲು ಕೊಡುವ ಸ್ಥಿತಿ ರೈತರ ಮನೆಗಳಲ್ಲಿ ಇದೆಯಾ?

ಇಂತಹ ಹಲವು ಪ್ರಶ್ನೆಗಳು ಕೋಲಾರ ಜಿಲ್ಲೆಯ ಜನರ ಮುಂದೆ ಎದುರಾದ ಸಂದರ್ಭ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿಯು ಇಂತಹ ಪ್ರಶ್ನೆಗಳನ್ನು ಇಟ್ಟುಕೊಂಡು ಜನರ ಬಳಿಗೆ ಮನೆ ಮನೆಗಳಿಗೆ ತೆರಳುತ್ತಿದೆ.

ಮನೆಯಲ್ಲಿರುವ 'ಕಂದಮ್ಮ'ನಿಗೆ ಒಂದು ಲೋಟ ಹಾಲಿಲ್ಲ

ಈ ಪ್ರಶ್ನೆಗಳಿಗೆ ಅಲ್ಲಿ ಜನರಿಂದ ಸಿಗುತ್ತಿರುವ ಉತ್ತರ ಏನು ? ಚಿನ್ನ, ರೇಷ್ಮೆಗಳ ವಿಷಯ ಹಾಗಿರಲಿ, ದನಕರು ಸಾಕಿರುವವರು "ಮನೆಯಲ್ಲಿರುವ 'ಕಂದಮ್ಮ'ನಿಗೆ ಒಂದು ಲೋಟ ಹಾಲು ಕೊಡುವ ಸ್ಥಿತಿಯಲ್ಲಿ ನಾವು ಇಲ್ಲ.." ಎನ್ನುತ್ತಾರೆ. ಒಂದು ಲೋಟ ಹಾಲು ಕಡಿಮೆಯಾದರೆ, ಅಷ್ಟು ಹಣ ಡೈರಿಯಿಂದ ಬರುವುದು ಕಡಿತವಾಗಿ 'ಕುಟುಂಬದ ನಿರ್ವಹಣೆ" ಸಮಸ್ಯೆಯಾಗುತ್ತದೆಂಬ ಆತಂಕ ಅವರಿಗೆ.

ದಾರುಣ ಸ್ಥಿತಿಗೆ ಏನು ಕಾರಣವೇನು ?

ಜಿಲ್ಲೆಯ ಜನರ ಇಂತಹ ದಾರುಣ ಸ್ಥಿತಿಗೆ ಕಾರಣಗಳಾದರೂ ಏನು ? ಜಿಲ್ಲೆಗೆ ಯಾವುದೇ ಶಾಶ್ವತ ನೀರಾವರಿ ಯೋಜನೆಗಳಿಲ್ಲ. 800–1,000 ಅಡಿ ಆಳಕ್ಕೆ ಕೊರೆಯಲಾಗಿರುವ ಕೊಳವೆ ಬಾವಿಗಳು ಸಹ ಬತ್ತಿ ಹೋಗುತ್ತಿವೆ. ಕೃಷಿಗೆ ಅಗತ್ಯವಾಗಿ ಬೇಕಾದ ನೀರಿಲ್ಲದೇ ಶೇ. 80 ರಷ್ಟು ಕೃಷಿ ಅವಲಂಭಿತರಾಗಿರುವ ಜಿಲ್ಲೆಯ ರೈತರು, ಕೂಲಿಕಾರರು ಗಂಭೀರ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಸರ್ಕಾರದ ಖಾಸಗೀಕರಣ, ಉದಾರೀಕರಣ, ಹಾಗೂ ಮುಕ್ತ ಮಾರುಕಟ್ಟೆ ಧೋರಣೆಗಳ ಪರಿಣಾಮಗಳ ಜೊತೆಗೆ ಈ ಅಂಶವೂ ಸೇರಿ ಜಿಲ್ಲೆಯಲ್ಲಿ ಬಡತನ ವಿಪರೀತವಾಗಿ ಏರುತ್ತಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ರಾಯಚೂರು ಜಿಲ್ಲೆಯ ನಂತರ ಅತಿ ಹೆಚ್ಚು ಬಡಜನರು ಇರುವ ಜಿಲ್ಲೆ ಕೋಲಾರ. ಇಂತಹ ಭೀಕರ ಬಡತನದಲ್ಲಿರುವ ಜನ ಎಲ್ಲ ಆಹಾರ ಧಾನ್ಯಗಳ ಬೆಲೆಗಳು ವಿಪರೀತವಾಗಿ ಏರುತ್ತಿರುವುದರಿಂದ ಕಂಗಾಲಾಗಿದ್ದಾರೆ. ಗರ್ಭಿಣಿಯರು, ಬಾಣಂತಿಯರು ಮನೆ ಮಕ್ಕಳು ಹಿರಿಯರು ಎನ್ನದೇ ಜನರು ಅರೆ ಹೊಟ್ಟೆಯಲ್ಲಿ ಜೀವನ ದೂಡುವ ದಿನಗಳು ಹೆಚ್ಚಾಗುತ್ತಿವೆ. ಇದರ



ಪರಿಣಾಮ ರಕ್ತ ಹೀನತೆಯಿಂದ ನರಳುವ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದೆ. ಅಪೌಷ್ಟಿಕತೆಯಿಂದ ಬಡವರ ಮನೆಯಲ್ಲಿ ಮಕ್ಕಳು ಹುಟ್ಟುವ ಮೊದಲೇ ಕಣ್ಣು ಮುಚ್ಚುತ್ತಿವೆ.

ಈ ಪರಿಸ್ಥಿತಿ ಬದಲಾಗಬೇಕಾದರೆ 'ಹಸಿವಿನಿಂದ ನರಳುವ' ಈ ಜನಗಳಿಗೆ ಕನಿಷ್ಟ ಎರಡು ಹೊತ್ತು ನೆಮ್ಮದಿಯಾಗಿ 'ಅನ್ನ' ಉಣ್ಣಲು ಅವಕಾಶವಾಗುವಂತಹ ರೇಷನ್ ವ್ಯವಸ್ಥೆ ಬಹಳ ಅಗತ್ಯ.

ಶ್ರೀಮಂತರ ಸೇವೆಗೆ ಟೊಂಕ ಕಟ್ಟಿ

ನಮ್ಮ ಆಳುವ ಸರ್ಕಾರಗಳೋ ನಮ್ಮ ದೇಶದ ಹಾಗೂ ವಿದೇಶಗಳ ಶ್ರೀಮಂತರು, ಬಂಡವಾಳಗಾರರ ಸೇವೆಗೆ ಟೊಂಕ ಕಟ್ಟಿ ನಿಂತುಬಿಟ್ಟಿವೆ. ಬಜೆಟ್‌ಗಳಲ್ಲಿ ಲಕ್ಷಾಂತರ ಕೋಟಿ ತೆರಿಗೆ ವಿನಾಯತಿ ಪಡೆದುಕೊಳ್ಳುವ ಶ್ರೀಮಂತ. ವರ್ಗಗಳು ಬಡವರಿಗೆ ನೀಡಲಾಗುತ್ತಿರುವ ಆಹಾರ ಸಬ್ಸಿಡಿ, ರಸಗೊಬ್ಬರ ಸಬ್ಸಿಡಿಗಳ ಮೇಲೆ ಕೆಂಗಣ್ಣು ಬೀರುತ್ತಿವೆ.

ಇಂತಹ ಸ್ಥಿತಿಯಲ್ಲಿ ಜನತೆಗೆ ಕಡಿಮೆ ದರದಲ್ಲಿ ಆಹಾರ ಧಾನ್ಯ ಕೊಡಲು ತಯಾರಿಲ್ಲದ ಕೇಂದ್ರ ಕಾಂಗ್ರೆಸ್ ಸರ್ಕಾರ ರೇಷನ್ ಕಾರ್ಡ್‌ಗಳಲ್ಲಿ ಎಪಿಎಲ್ ಕಾರ್ಡ್, ಬಿಪಿಎಲ್ ಕಾರ್ಡ್ ಎಂಧು ವಿಭಾಗ ಮಾಡುತ್ತಾ, ಆಹಾರಕ್ಕೆ ಬದಲಿಗೆ ರೇಷನ್ ಕಾರ್ಡುದಾರರ ಬ್ಯಾಂಕ್ ಖಾತೆಗೆ,ನಗದು ವರ್ಗಾವಣೆ ಮಾಡುತ್ತೇವೆನ್ನುತ್ತಾ ಒಟ್ಟಾರೆ ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನೇ ಬುಡಮೇಲು ಮಾಡಲು ಹೊರಟಿದೆ.

ಆಹಾರದ ಪ್ರಶ್ನೆಗಳ ಆಧಾರದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ರಾಷ್ಟ್ರವ್ಯಾಪಿಯಾಗಿ 5 ಕೋಟಿ ಸಹಿ ಸಂಗ್ರಹಿಸುವ ಆಂದೋಲನವನ್ನು ಯೋಜಿಸಿ ಜನರ ಬಳಿ ಹೋಗುತ್ತಿವೆ.

ಕೆ.ಜಿ.ಎಫ್.ನಲ್ಲಿ ಒಂದು ಲಕ್ಷ ಸಹಿ ಸಂಗ್ರಹ ಆಂದೋಲನ

ವಿಧಾನ ಸಭೆಗೆ ದುಡಿಯುವ ಜನರ ಪ್ರತಿನಿಧಿಯನ್ನು ಚುನಾವಣೆಯಲ್ಲಿ ಆಯ್ಕೆ ಮಾಡಿ ಕಳುಹಿಸಿದ ಹೆಮ್ಮೆಯ ಇತಿಹಾಸ ಇರುವ ಕೆಜಿಎಫ್ ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಕನಿಷ್ಟ ಒಂದು ಲಕ್ಷ ಸಹಿ ಸಂಗ್ರಹದ ಗುರಿಯೊಂದಿಗೆ ಸಿಪಿಐ(ಎಂ) ಕೋಲಾರ ಜಿಲ್ಲಾ ಸಮಿತಿಯು ಹಳ್ಳಿ ಹಳ್ಳಿ ನಗರ ಪ್ರದೇಶ, ಪಟ್ಟಣಗಳನ್ನು ಸುತ್ತುವ ವಾಹನ ಜಾಥಾಗಳನ್ನು ಯೋಜಿಸಿದೆ.

ಈ ಸಹಿ ಸಂಗ್ರಹ ಆಂದೋಲನದ ಉದ್ಘಾಟನೆಯು ಡಿಸೆಂಬರ್ 16 2012 ರಂದು ನಡೆಯಿತು. ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆಡ್ಡಿಯವರು ಪ್ರಧಾನಿಯವರಿಗೆ ಸಲ್ಲಿಸಲಾಗುವ ಬೇಡಿಕೆಗಳ ಪಟ್ಟಿಗೆ ಸಹಿ ಹಾಕುವ ಮುಖಾಂತರ ಆಂದೋಲನವನ್ನು ಉದ್ಘಾಟಿಸಿದರು. ಬೇತಮಂಗಲದ ಪಂಚಾಯಿತಿ ಕಛೇರಿಯ ಮುಂದೆ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು ಕುಟುಂಬವೊಂದಕ್ಕೆ ತಿಂಗಳಿಗೆ 35 ಕೆ.ಜಿ. ಆಹಾರ ಧಾನ್ಯವನ್ನು ಕೆ.ಜಿ.ಗೆ ರೂ 2.ರ ಬೆಲೆಯಲ್ಲಿ ದೇಶದ ಸಮಸ್ತ ಜನರಿಗೆ ಆಹಾರವನ್ನು ಅಗತ್ಯ ಆಹಾರ ಪೂರೈಸುವುದು ಕೇಂದ್ರ ಸರ್ಕಾರಕ್ಕೆ ಕಷ್ಟವಲ್ಲ. ಕಳೆದ ಕೇಂದ್ರ ಬಜೆಟಿನಲ್ಲಿ ಶ್ರೀಮಂತರು, ಬಂಡವಾಳಗಾರರಿಗೆ 5.28 ಲಕ್ಷ ಕೋಟಿ ರೂಪಾಯಿಗಳ ತೆರಿಗೆ ರಿಯಾಯಿತಿಯನ್ನು ನೀಡಿದ ಸರ್ಕಾರ ರೇಷನ್ ಪೂರೈಕೆಗೆ ಮಾತ್ರ ಹಣವಿಲ್ಲ ಎನ್ನುತ್ತಿದೆ. ಇದರಿಂದ ಈ ಸರ್ಕಾರ ಯಾರಿಗಾಗಿ ಆಡಳಿತ ನಡೆಸುತ್ತಿದೆ ಎಂಬುದು ಗೊತ್ತಾಗುತ್ತದೆ ಎಂದು ಛೇಡಿಸಿದರು.

ಇದೇ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಸಿ. ಬಯ್ಯಾರೆಡ್ಡಿಯವರು ಮಾತನಾಡಿ, ಜಗತ್ತಿನ ಮುಂದುವರಿಯುತ್ತಿರುವ ದೇಶಗಳ ಪೈಕಿ ಹಸಿವಿನ ಅಗಾಧತೆ ಹೊಂದಿರುವುದರಲ್ಲಿ ಭಾರತ 24 ನೇ ಸ್ಥಾನದಲ್ಲಿದೆ. ನೇಪಾಳ, ಪಾಕಿಸ್ತಾನ, ಶ್ರೀಲಂಕಾದಂತಹ ದೇಶಗಳು ಸಹ ಈ ವಿಷಯದಲ್ಲಿ ಭಾರತಕ್ಕಿಂತ ಮೇಲಿನ ಸ್ಥಾನದಲ್ಲಿವೆ. ಕರ್ನಾಟಕ ರಾಜ್ಯದಲ್ಲಿ ಬಡಜನರ ಪ್ರಮಾಣದಲ್ಲಿ ಕೋಲಾರವು ರಾಯಚೂರು ನಂತರದ ಎರಡನೇ ಸ್ಥಾನದಲ್ಲಿದೆ. ರಾಜ್ಯದ ಒಟ್ಟು ಬಡವರಲ್ಲಿ ಶೇ. 12.6 ರಷ್ಟು ಜನ ಬಡವರು ರಾಯಚೂರು ಜಿಲ್ಲೆಯಲ್ಲಿದ್ದಾರೆ. ಅದೇ ರೀತಿ ರಾಜ್ಯದ ಒಟ್ಟು ಬಡವರಲ್ಲಿ ಶೇ. 11.9 ರಷ್ಟು ಜನಬಡವರು ಕೋಲಾರದಲ್ಲಿ ಇದ್ದಾರೆ ಎಂದರು. ಈ ದಾರುಣ ಪರಿಸ್ಥಿತಿಯನ್ನು ಬದಲಿಸಲು ಶಾಶ್ವತ ನೀರಾವರಿ– ಆಹಾರ, ಭೂಮಿ, ನಿವೇಶನ ಮುಂತಾದ ಪ್ರಶ್ನೆಗಳ ಮೇಲೆ ಪ್ರಬಲ ಹೋರಾಟ ರೂಪಿಸಬೇಕಿದೆ ಎಂದೂ ಅವರು ಹೇಳಿದರು. ಕೋಲಾರ ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ, ಜಿಲ್ಲಾ ಮುಖಂಡರಾದ ಅರ್ಜುನನ್, ವಿ. ಗೀತಾ, ತಂಗರಾಜು, ಬೆಮೆಲ್ ನಾಗರಾಜು ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅಂದೋಲನದ ಹುರುಪು ಹೆಚ್ಚಿಸಿರುವ ಜನಸ್ಪಂದನ

ಹಸಿವು, ಬಡತನಗಳ ಕುರಿತ ಅಂಕಿ–ಸಂಖ್ಯೆ ಮಾಹಿತಿಗಳನ್ನೊಳಗೊಂಡ ಬ್ಯಾನರ್–ಫಲಕಗಳನ್ನು ಹೊತ್ತ ಆ ಜಾಥಾ ವಾಹನ ಹಳ್ಳಿಯನ್ನು ಪ್ರವೇಶಿಸುತ್ತದೆ. ಧ್ವನಿ ವರ್ಧಕದಿಂದ ಕೇಳಿಬರುವ ಹೋರಾಟದ ಹಾಡುಗಳು ಹಳ್ಳಿಗರ ಗಮನ ಸೆಳೆಯುತ್ತದೆ. ವಾಹನದಿಂದ ಇಳಿದ ಕಾರ್ಯಕರ್ತರ ತಂಡ ಹೋರಾಟದ ಹಾಡು ಹಾಡಲು ಶುರು ಮಾಡುತ್ತದೆ. ಕೆಂಪು ಬಾವುಟ... ಕೆಂಪು ಬಾವುಟ... ಈ ಕೆಂಪು ಬಾವುಟ ಎಲ್ಲಿಯದೋ.... ಎಂಬ ಹಾಡು ಅದು. ಜನ ಗುಂಪುಗೂಡುತ್ತಾರೆ.

ವಾಹನದ ಕಟೌಟ್‌ನಲ್ಲಿ ಕಾಣುತ್ತಿರುವ ಹಸಿವಿನಿಂದ ಕಂಗೆಟ್ಟ ಬಡಕಲು ದೇಹದ ಜನರ

ಪುಟ 15 ಕ್ಕೆ

ಎರಡು ಸಿಐಟಿಯು ಜಿಲ್ಲಾ ಸಮ್ಮೇಳನಗಳು

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸಿಐಟಿಯು ಜಿಲ್ಲಾ ಸಮ್ಮೇಳನಗಳು ಡಿಸೆಂಬರ್ 9 ಮತ್ತು 10 ರಂದು ಬೆಳ್ತಂಗಡಿ ಮತ್ತು ಕುಂದಾಪುರಗಳಲ್ಲಿ ನಡೆದಿವೆ.

ಬೆಳ್ತಂಗಡಿಯಲ್ಲಿ ವಿ.ಜೆ.ಕೆ.ನಾಯರ್:

ದೇಶದಲ್ಲಿನ ಆಡಳಿತ ಪಕ್ಷಗಳು ವಿದೇಶೀ ಹೂಡಿಕೆಯತ್ತ ಒಲವು ತೋರಿಸಿ ದೇಶದ ದುಡಿಮೆಯ ಬಂಡವಾಳಕ್ಕೆ ಬೆಲೆ ಇಲ್ಲದಂತೆ ಮಾಡಲು ಹೊರಟಿವೆ. ಈ ವಿದೇಶೀ ಬಂಡವಾಳ ವಾದರೋ ಸೀಮಿತ ಜನರ ಹಿಡಿತದಲ್ಲಿದೆ. ಕಾರ್ಮಿಕರ ದುಡಿಮೆಯ ಫಲದಿಂದ ಭಾರತ ಅಭಿವೃದ್ಧಿ ಹೊಂದುತ್ತಿದೆ ಎಂಬುದನ್ನು ಪ್ರಮುಖ ರಾಜಕೀಯ ಪಕ್ಷಗಳು ಮರೆತಿವೆ ಎಂಬುದಾಗಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷ ವಿ.ಜೆ.ಕೆ.ನಾಯರ್ ನುಡಿದರು.



ಅವರು ಬೆಳ್ತಂಗಡಿಯಲ್ಲಿ ಎರಡು ದಿನಗಳ ಕಾಲ ನಡೆದ ಸಿಐಟಿಯು ದ.ಕ.ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಕನಿಷ್ಟ ಕೂಲಿಯೇ ಮೊದಲಾದ ಕಾರ್ಮಿಕರ ರಾಷ್ಟ್ರೀಯ ಮಟ್ಟದ ಬೇಡಿಕೆಗಳಲ್ಲದೆ ದ.ಕ. ಜಿಲ್ಲೆಯಲ್ಲಿ ಆನೆ ಕಾರಿಡಾರ್ ಪುಷ್ಪಗಿರಿ ಯೋಜನೆಗಳನ್ನು ಕೈಬಿಡಬೇಕು, ಧರ್ಮಸ್ಥಳದಲ್ಲಿ ನಡೆದ ಸೌಜನ್ಯಾ ಕೊಲೆಯ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು, ಪತ್ರಕರ್ತ ನವೀನ್ ಸೂರಿಂಜೆ ವಿರುದ್ಧ ದಾಖಲಾಗಿರುವ ಪ್ರಕರಣ ಹಿಂದಕ್ಕೆ ಪಡೆಯಬೇಕು, ಸ್ವಸಹಾಯ ಸಂಘಗಳಿಗೆ ಕಡಿಮೆ ಬಡ್ಡಿ ದರಗಳಲ್ಲಿ ಸಾಲ ನೀಡಬೇಕು ಮೊದಲಾದ ಬೇಡಿಕೆಗಳನ್ನೊಳಗೊಂಡ 19 ನಿರ್ಣಯಗಳನ್ನು ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು.

ಒಂದೂವರೆ ಸಾವಿರ ಜನರನ್ನು ಮೀರಿದ ಕೆಂಪು ಸಮವಸ್ತ್ರದ ಪಡೆಯನ್ನೊಳಗೊಂಡ ಆಕರ್ಷಕ ರ್‍ಯಾಲಿ ಬೆಳ್ತಂಗಡಿ ಸಮಾಜ ಮಂದಿರದಿಂದ ಆರಂಭವಾಗಿ ತಾಲೂಕು ಕಚೇರಿ ಸಮೀಪದ ಸಭಾ ಮೈದಾನದಲ್ಲಿ ಸಮಾಪನ ಗೊಂಡಿತು. ಈ ಬಹಿರಂಗ ಸಮಾರೋಪ ಸಭೆಯಲ್ಲಿ ವಿ.ಜೆ.ಕೆ.ನಾಯರ್, ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಯವರಲ್ಲೊಬ್ಬರಾದ ಎಸ್.ವರಲಕ್ಷ್ಮಿ, ಸಿಐಟಿಯು ರಾಜ್ಯ ಸಮಿತಿ ಉಪಾಧ್ಯಕ್ಷ ಬಿ. ಮಾಧವ, ಸಿಐಟಿಯು ಜಿಲ್ಲಾ ಸಮಿತಿ ಅಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಬಿ.ಎಂ.ಭಟ್ ಅಧ್ಯಕ್ಷತೆ ವಹಿಸಿದ್ದರು. ಎಸ್.ಎಂ.ಶಿವ ಕುಮಾರ್ ಸ್ವಾಗತಿಸಿ, ನೀಲೇಶ್ ಪೆರಿಂಜೆ ವಂದಿಸಿದರು.

ಸಮ್ಮೇಳನವು ಜೆ. ಬಾಲಕೃಷ್ಣ ಶೆಟ್ಟಿ ಅಧ್ಯಕ್ಷರಾಗಿ, ವಸಂತ ಆಚಾರಿ ಕಾರ್ಯದರ್ಶಿಯಾಗಿ, ಸುನಿಲ್ ಕುಮಾರ್ ಬಜಾಲ್ ಕೋಶಾಧಿಕಾರಿಯಾಗಿ ಇರುವ ಸಿಐಟಿಯು ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು.




ವರದಿ : ವಾ.ಉ.

ಕುಂದಾಪುರದಲ್ಲಿ ಪ್ರಸನ್ನ ಕುಮಾರ್

ಉದಾರೀಕರಣ ಹಾಗೂ ಜಾಗತೀಕರಣದ ಹೆಸರಿನಲ್ಲಿ ದೇಶವನ್ನು ವಿದೇಶೀಯರಿಗೆ ಹರಾಜು ಮಾಡಲಾಗುತ್ತಿದೆ. ವಿದೇಶೀ ಬಂಡವಾಳಶಾಹಿಗಳು ಭಾರತದಲ್ಲಿ ರೈತರಾಗಲು ಬರುತ್ತಿದ್ದಾರೆ. ದೇಶದ ಬಡ ರೈತರನ್ನು ಮರೆಯುತ್ತಿರುವ ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಉದಾರೀಕರಣದ ಹೆಸರಿನಲ್ಲಿ ಶ್ರೀಮಂತರ ಬೂಟ್ ಪಾಲಿಶ್ ಮಾಡುವುದರ ಮೂಲಕ ವಿದೇಶೀಯರಿಗೆ ಮಣೆ ಹಾಕುತ್ತಿದ್ದಾರೆ ಎಂದು ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್ ದೂರಿದರು.

ಕುಂದಾಪುರದಲ್ಲಿ ನಡೆದ 4ನೇ ಉಡುಪಿ ಜಿಲ್ಲಾ ಸಿಐಟಿಯು ಸಮ್ಮೇಳನದಲ್ಲಿ ಅವರು ಪ್ರಧಾನ ಭಾಷಣ ಮಾಡುತ್ತಿದ್ದರು.



ದೇಶವನ್ನು ಬ್ರಿಟಿಷರ ಕೈಯಿಂದ ಸ್ವತಂತ್ರ ಗೊಳಿಸಲು ಹೋರಾಡಿದ ಹಾಗೂ ಹುತಾತ್ಮರಾಗಿದ್ದ ಅನೇಕ ರಾಷ್ಟ್ರ ಪ್ರೇಮಿಗಳಿಗೆ ಭಾರತವನ್ನು ಒಂದು ಬಲಿಷ್ಟ ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಬೇಕು ಎನ್ನುವ ಕನಸುಗಳಿದ್ದವು. ಆದರೆ ಸ್ವಾತಂತ್ರ್ಯ ನಂತರದಲ್ಲಿ ದೇಶವನ್ನು ಆಳಿದ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಪ್ರಗತಿ ಎನ್ನುವ ಭ್ರಮೆಯಲ್ಲಿ ದೇಶವನ್ನು ದಿವಾಳಿಯಂಚಿಗೆ ತಂದು ನಿಲ್ಲಿಸಿದೆ ಎಂದು ಅವರು ಹೇಳಿದರು.

ದೇವಾಲಯಗಳಲ್ಲಿ ಜಾತಿ ತಾರತಮ್ಯಕ್ಕೆ ಕಾರಣವಾದ ಪಂಕ್ತಿಭೇದವನ್ನು ನಿವಾರಿಸಬೇಕು, ಬೀಡಿ ಕಾರ್ಮಿಕರಿಗೆ ವಾರದ 6 ದಿನವೂ ಕೆಲಸ ಒದಗಿಸಬೇಕು ಮೊದಲಾದ ಕಾರ್ಮಿಕರ ಬೇಡಿಕೆಗಳನ್ನೊಳಗೊಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಮವಸ್ತ್ರ ಧರಿಸಿದ ಕೆಂಪು ಪಡೆಯ ಶಿಸ್ತಿನ ಮೆರವಣಿಗೆಯಿಂದೊಡಗೂಡಿದ ರ್‍ಯಾಲಿ ಕಾರ್ಮಿಕ ಭವನದಿಂದ ಹೊರಟು ಕುಂದಾಪುರ ಬಸ್ ಸ್ಟೇಂಡಿನಿಂದಲಾಗಿ ಗಾಂಧಿ ಮೈದಾನದಲ್ಲಿ ಒಟ್ಟುಗೂಡಿತು. ಒಂದು ಸಾವಿರಕ್ಕೂ ಮಿಕ್ಕಿ ಕಾರ್ಮಿಕರು ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಬಹಿರಂಗ ಸಭೆಯನ್ನುದ್ದೇಶಿಸಿ ಪ್ರಸನ್ನ ಕುಮಾರ್, ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಗಳಲ್ಲೊಬ್ಬರೂ ಕೇರಳದ ಕಾರ್ಮಿಕ ಮುಖಂಡರೂ ಆದ ಕೆ.ಎಚ್.ದಿವಾಕರನ್ ಮಾತನಾಡಿದರು. ಕೆ.ಶಂಕರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಎಚ್.ನರಸಿಂಹ ವಂದಿಸಿದರು.

ಸಮ್ಮೇಳನವು ನೂತನ ಉಡುಪಿ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದ್ದು ಕೆ.ಶಂಕರ್ ಅಧ್ಯಕ್ಷರಾಗಿ, ಬಾಲಕೃಷ್ಣ ಶೆಟ್ಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ನಿವೇಶನರಹಿತರಿಂದ ಕುಂದಾಪುರ ಪುರಸಭೆಗೆ ಮುತ್ತಿಗೆ

ಕುಂದಾಪುರ ಪುರಸಭೆ ವ್ಯಾಪ್ತಿಯಲ್ಲಿ ನಿವೇಶನಗಳ ಕೊರತೆ ಇರುವುದನ್ನು ತಿಳಿದೇ ರಾಜಕೀಯ ದುರುದ್ದೇಶದಿಂದ ಪುರಸಭೆಯ ವಿರುಧ್ಧ ಜನರನ್ನು ಎತ್ತಿಕಟ್ಟುವ ಕೆಲಸ ನಡೆಯುತ್ತಿದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ನಿವೇಶನ ರಹಿತರಿಗಾಗಿ ನಡೆಸುತ್ತಿರುವ ಹೋರಾಟವನ್ನು ಲಘುವಾಗಿ ಕಾಣುತ್ತಿರುವ ಬಿಜೆಪಿ ನೇತೃತ್ವದ ಕುಂದಾಪುರ ಪುರಸಭೆಯ ಧೋರಣೆ ಲಜ್ಜೆಗೇಡಿತನದ್ದು ಎಂದು ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದಸ್ವಾಮಿ ಕಟುವಾಗಿ ಟೀಕಿಸಿದರು. ಪುರಸಭೆಯ ವ್ಯಾಪ್ತಿಯ ನಿವೇಶನರಹಿತ ಅರ್ಜಿದಾರರು ಡಿಸೆಂಬರ್ 14ರಂದು ಪುರಸಭಾ ಕಛೇರಿಗೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಅವರು ಮಾತನಾಡುತ್ತಿದ್ದರು. ರಾಜ್ಯದಲ್ಲಿ ಬಂಡವಾಳ ಹೂಡಲು ಆಗಮಿಸುತ್ತಿರುವ ವಿದೇಶಿ ಲೂಟಿಕೋರ ಕಂಪನಿಗಳಿಗೆ ಸಾವಿರಾರು ಎಕರೆ ಭೂಮಿಯನ್ನು ದಾನಮಾಡಲು ಮುಂದಾಗುವ ಈ ಸರ್ಕಾರಕ್ಕೆ ಬಡವರಿಗೆ ಮನೆ ನಿವೇಶನಗಳನ್ನು ಒದಗಿಸಲು ಯಾಕೆ ಭೂಮಿ ಸಿಗುವುದಿಲ್ಲ ಎಂದು ಪ್ರಶ್ನೆ ಮಾಡಿದ ಅವರು, ಪುರಸಭಾ ವ್ಯಾಪ್ತಿಯಲ್ಲಿ ಸರ್ಕಾರಿ ಭೂಮಿಯನ್ನು ಕಬಳಿಸಿರುವ ಶ್ರೀಮಂತರಿಂದ ಅದನ್ನು ನಿರ್ದಾಕ್ಷಿಣ್ಯವಾಗಿ ಸ್ವಾಧೀನಪಡಿಸಿಕೊಂಡು



ನಿವೇಶನರಹಿತರಿಗೆ ವಿತರಣೆ ಮಾಡಬೇಕು ಎಂದು ಒತ್ತಾಯಿಸಿದರಲ್ಲದೆ ಖಾಸಗಿ ಭೂಮಿಯನ್ನು ಮಾರಾಟ ಮಾಡಲು ಸಿದ್ಧರಿರುವವರಿಗೆ ಯೋಗ್ಯ ಬೆಲೆ ಕೊಟ್ಟು ಭೂಮಿಯನ್ನು ಖರೀದಿಸಿ ನಿವೇಶನರಹಿತರಿಗೆ ವಿತರಣೆ ಮಾಡಲು ಸರ್ಕಾರ ಮುಂದಾಗಬೇಕು ಎಂದು

ಪುಟ 12 ಕ್ಕೆ

ಬೆಲೆ ಏರಿಕೆ ಖಂಡಿಸಿ, ಕನಿಷ್ಟ ಕೂಲಿ ಮಾಸಿಕ 10 ಸಾವಿರ ನಿಗದಿಗೆ, ಗುತ್ತಿಗೆ ಪದ್ದತಿ ರದ್ದತಿ ಒತ್ತಾಯಿಸಿ

ರಾಜ್ಯವ್ಯಾಪಿ ಕಾರ್ಮಿಕರ ಜೈಲ್‌ಭರೋ

ಅಗತ್ಯ ವಸ್ತುಗಳ ಬೆಲೆ ಏರಿಕೆಗೆ ಕಡಿವಾಣ ಹಾಕಬೇಕು. ಕನಿಷ್ಟ ಕೂಲಿಯನ್ನು ಮಾಸಿಕ 10 ಸಾವಿರಕ್ಕೆ ನಿಗದಿಗೊಳಿಸಬೇಕು. ಗುತ್ತಿಗೆ ಕಾರ್ಮಿಕ ಪದ್ದತಿ ನಿಷೇಧಿಸಿ ಗುತ್ತಿಗೆ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸಬೇಕು. ಪಡಿತರ ವ್ಯವಸ್ಥೆ ಸಾರ್ವತ್ರಿಕರಣಗೊಳಿಸಿ 35 ಕೆ.ಜಿ ಅಕ್ಕಿ



ತುಮಕೂರಿನಲ್ಲಿ



2 ರೂಪಾಯಿಂತೆ ಪ್ರತಿ ಕುಟುಂಬಕ್ಕೆ ನೀಡಬೇಕು. ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಖಾಸಗೀಕರಣಗೊಳಿಸಬಾರದು. ಉದ್ಯೋಗ ಸೃಷ್ಟಿಸುವ ಯೋಜನೆ ಜಾರಿಗೊಳಿಸಬೇಕು ಮುಂತಾದ ಬೇಡಿಕೆಗಳಿಗೆ ಒತ್ತಾಯಿಸಿ 'ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ'(ಜೆಸಿಟಿಯು) ಕರೆಯಂತೆ ರಾಜ್ಯದ ನಾನಾ ಜಿಲ್ಲೆಗಳಲ್ಲಿ ವ್ಯಾಪಕವಾದ ಪ್ರತಿಭಟನೆಗಳು ನಡೆದ ಬರದಿಗಳು ಬರುತ್ತಿವೆ.

ಬೆಂಗಳೂರಿಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳ ನೂರಾರು ಕಾರ್ಯಕರ್ತರು ದಿ.19-12-2012 ರಂದು ರಾಜಾರಾಮ ಮೋಹನ್ ರಾಯ್ ವೃತ್ತ ದಲ್ಲಿನ 'ಭವಿಷ್ಯ ನಿಧಿ' ಕಛೇರಿಗೆ ಮುತ್ತಿಗೆ ಹಾಕಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ವಿಜೆಕೆ ನಾಯರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ಎಐಟಿಯುಸಿ ಅನಂತಸುಬ್ಬರಾವ್, ಟಿಯುಸಿಸಿಯ ಜಿ.ಆರ್. ಶಿವಶಂಕರ್, ಬಿಎಂಎಸ್ ನ ಕೆ. ರಾಮಕೃಷ್ಣ ಪೂಂಜ, ಎಐಸಿಸಿಟಿಯು ನ ಶಂಕರ್, ಎಐಟಿಯುಸಿಸಿ ಯ ಎಂ.ಎಸ್.ಪ್ರಕಾಶ್, ವಿಮಾ ನೌಕರರ ಸಂಘಟನೆಯ ಗೋಪಾಲ್ ಮುಂತಾದವರ ನೇತೃತ್ವದಲ್ಲಿ ಉತ್ಸಾಹದಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಾವಿರಕ್ಕೂ ಮಿಕ್ಕಿ ಇದ್ದ ಪ್ರತಿಭಟನಾಕರರಲ್ಲಿ ಪೋಲಿಸರು ಸು. 400 ಜನರನ್ನು ಬಂಧಿಸಿಡರು. ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ತುಮಕೂರಿನಲ್ಲಿ ಬಿಎಸ್‌ಎನ್ ಎಲ್ ಕಛೇರಿ ಮುತ್ತಿಗೆ

ತುಮಕೂರಿನಲ್ಲಿ ಸಿಐಟಿಯು, ಬಿ.ಎಂ.ಎಸ್, ಎಐಟಿಯುಸಿ, ಎಐಸಿಸಿಟಿಯು ಸಂಘಟನೆ ನೂರಾರು ಕಾರ್ಯಕರ್ತರು ಬಿ.ಎಸ್.ಎನ್.ಎಲ್ ಕಾರ್ಖಾನೆಗೆ ಮುತ್ತಿಗೆ ಹಾಕಲು ಯತ್ನಸಿದಾಗ ಪೊಲೀಸರು ಬಂಧಿಸಿದರು.

12-00 ಗಂಟೆಗೆ ಪುರಭವನದಿಂದ ಹೊರಟ ಮೆರವಣಿಗೆಯು ಅಶೋಕ ರಸ್ತೆಯ ಮೂಲಕ ಬಿ.ಎಸ್.ಎನ್.ಎಲ್ ಕಛೇರಿ ತನಕ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರು ಬಿ.ಎಸ್.ಎನ್.ಎಲ್ ಕಛೇರಿ ಎದುರು ಬಹಿರಂಗ ಸಭೆಯನ್ನು ನಡೆಸಿದರು.

ಸಭೆಯನ್ನು ಉದ್ದೇಸಿಸಿ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕಾಂ॥ಎಸ್. ವರಲಕ್ಷ್ಮೀ ಮಾತನಾಡಿ ಕೇಂದ್ರ ಸರ್ಕಾರ ದುಡಿಮೆ ಹಾಗೂ ಜನವಿರೋಧಿ ನೀತಿಗಳನ್ನು ಬದಲಿಸದೆ ಇದ್ದಲ್ಲಿ ಫೆಬ್ರವರಿ 20-21 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ತೆರಳುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು.

ಎಐಟಿಯುಸಿ ಎನ್. ಶಿವಣ್ಣ ಅವರು ಮಾತನಾಡಿ ಕನಿಷ್ಟ ಕೂಲಿ 10,000/- ರೂ. ನಿಗದಿಗೊಳಿಸದ ಸರ್ಕಾರಗಳು ಕಾರ್ಮಿಕ ವಿರೋಧಿಯಾಗಿವೆ ಎಂದು ಖಂಡಿಸಿದರು.

ಬಿಎಂಎಸ್‌ನ ಕಾಂಶರಾಜು ಎಐಸಿಸಿಟಿಯುವಿನ ರುದ್ರೇಶ್ ಸಿಐಟಿಯು ಜಿಲ್ಲಾ ಅಧ್ಯಕ್ಷ ಸೈಯದ್ ಮುಜೀಬ್ ಎಐಟಿಯುಸಿ ಕಂಬೇಗೌಡ ಮಾತನಾಡಿದರು. ಪ್ರತಿಭಟನಾಕಾರರು ಹಾಗೂ ಪೊಲೀಸರ ಮಧ್ಯೆ ಜಟಾಪಟಿ ನಡೆಯಿತು.

ಹೋರಾಟದಲ್ಲಿ ಸಿಐಟಿಯು ತಾಲ್ಲೂಕು ಅಧ್ಯಕ್ಷ ಹುಚ್ಚೆಗೌಡ ದಿಲೀಪ್ ಕುಮಾರ್ ಪೌರಕಾರ್ಮಿಕ ಸಂಘದ ಖಜಾಂಚಿ ಕೆ.ಮಂಜುನಾಥ್ ವೆಂಕಟೇಶ್. ದೇವರಾಜು. ನರಸಿಂಹಮೂರ್ತಿ ಅಂಗನವಾಡಿ ನೌಕರರ ಸಂಘ ಜಿಲ್ಲಾಧ್ಯಕ್ಷರಾದ ಜಿ.ಕಮಲ ಗಂಗಾ ಎಐಟಿಯುಸಿನ ಗೌಡರಂಗಪ್ಪ, ಟಿ.ಆರ್.ರೇವಣ್ಣ ಬಿ.ಎಂ.ಎಸ್ ಕುಮಾರ್ ಪುಟ್‌ಪಾತ್ ವ್ಯಾಪಾರಿಗಳ ಸಂಘದ ಇಬ್ರಾಹಿಂ ಮುಂದಾಳತ್ವ ವಹಿಸಿದ್ದರು. ರಾಜ್ಯದ ವಿವಿದೆಡೆ: ಮಂಡ್ಯ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸು. 400 ಜನ ಕಾರ್ಮಿಕರು ಬಂಧಿನಕ್ಕೊಳಗಾಗಿರುವ ವರದಿ ಬಂದಿದೆ. ಅದೇ ರೀತಿಯಗಿ ಮೈಸೂರು ಜಿಲ್ಲೆಯಲ್ಲಿ ಮೈಸೂರು, ನಂಕನಗೂಡು, ಹುಣಸೂರುಗಳಲ್ಲಿ ಪ್ರತಿಭಟನೆಗಳು ನಡೆದಿದ್ದು ಒಟ್ಟಾರೆ ಸುಮಾರು 650 ಜನರು ಬಂಧನಕ್ಕೆ ಗುರಿಯಾಗಿದ್ದಾರೆ. ಚಿತ್ರದುರ್ಗ, ಹಿರಯೂರು, ಚಳ್ಳಕೆರೆ,ಮೊಣಕಾಲ್ಮೂರು ಸೇರಿ ಚಿತ್ರದುರ್ಗದಲ್ಲಿ ಸು. 700 ಜನರು, ಬಂಧನಕ್ಕೆ ಗುರಿಯಗಿದಾರೆ.

ಅದೇ ರೀತಿಯಲ್ಲಿ ದ.ಕ. ಜಿಲ್ಲೆಯಲ್ಲಿ 600 ಜನ, ಬಳ್ಳಾರಿಯಲ್ಲಿ ಒಟ್ಟು 5 ಕೇಂದ್ರಗಳಲ್ಲಿ ಸುಮಾರು ಸಾವಿರ ಜನರು, ಹಾಸನದಲ್ಲಿ ಮೂರು ಕೇಂದ್ರಗಳಲ್ಲಿ ಸುಮಾರು 250 ಜನರು,



ಬೆಂಗಳೂರಿನಲ್ಲಿ

ಚಿಕ್ಕಬಳ್ಳಾಪುರದಲ್ಲಿ ಒಟ್ಟು 5 ಕೇಂದ್ರಗಳಲ್ಲಿ ಸುಮಾರು 1200 ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ಸುಮಾರು 850 ಮಂದಿ ಬಂಧನಕ್ಕೆ ಒಳಗಾಗಿದ್ದಾರೆ. ರಾಯಚೂರಿನ ಐದು ಕೇಂದ್ರಗಳಲ್ಲಿ ಸುಮಾರು 900 ಜನ , ಕೋಲಾರ ಜಿಲ್ಲೆಯಲ್ಲಿ ಸುಮಾರು 300 ಜನ, ಕೊಪ್ಪಳದಲ್ಲಿ ಮೂರು ಕೇಂದ್ರಗಳಲ್ಲಿ ಸುಮಾರು 400 ಜನ. ಬೆಳಗಾಂನಲ್ಲಿ 500 ಜನ, ದಾವಣಗೆರೆಯಲ್ಲಿ ಸುಮಾರು 100 ಜನ, ಕುಂದಾಪುರದಲ್ಲಿ 1,400 ಜನ, ಉಡುಪಿಯಲ್ಲಿ ಸುಮಾರು 400 ಜನ, ಹುಬ್ಬಳ್ಳಿಯಲ್ಲಿ ಸುಮಾರು 150 ಜನ ಹೋರಾಟದಲ್ಲಿ ಪಾಲ್ಗೊಂಡು ಬಂಧನಕ್ಕೆ ಒಳಗಾಗಿದ್ದಾರೆ.



ರಾಷ್ಟ್ರ ರಾಜಧಾನಿಯಲ್ಲಿ ಜೈಲು ಭರೋ ಹೋರಾಟ

ಡಿಸೆಂಬರ್ 19, 2012 ರಂದು ದೆಹಲಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯ ಚಿತ್ರ


ಮಹಿಳೆಯರ ವಿರುದ್ಧ ಅಪರಾಧಗಳ ಬಗ್ಗೆ ಎಳ್ಳಷ್ಟೂ ಸಹನೆ ಸಲ್ಲದು

1987ರಲ್ಲಿ ಕಾನೂನು ಆಯೋಗ ನ್ಯಾಯಾಧೀಶರ ಅನುಪಾತ ಒಂದು ಲಕ್ಷ ಜನಸಂಖ್ಯೆಯಲ್ಲಿ 1.05 ಇದ್ದುದನ್ನು ಐದು ವರ್ಷಗಳಲ್ಲಿ 5ಕ್ಕೇರಿಸುವ ನೀಲನಕ್ಷೆಯೊಂದನ್ನು ತಯಾರಿಸಿತ್ತು. ಆದರೆ ಈಗ 25 ವರ್ಷಗಳ ನಂತರವೂ ಆ ಅನುಪಾತ ಒಂದು ಲಕ್ಷ ಜನರಿಗೆ 1.4 ನ್ಯಾಯಾಧೀಶರ ಪ್ರಮಾಣದಲ್ಲೇ ಇದೆ. ಜನಸಂಖ್ಯೆಯಲ್ಲಿ ಪೋಲೀಸರ ಅನುಪಾತ ಕೂಡ ಬಹಳ ಕಡಿಮೆ; ಸಮಸ್ತ ಜಗತ್ತಿನಲ್ಲೇ ಈ ಅನುಪಾತ ಅತೀ ಕಡಿಮೆ ಇರುವ ದೇಶಗಳಲ್ಲಿ ಭಾರತವೂ ಒಂದು. 2011ರ 36.6ಶೇ. ಅತ್ಯಾಚಾರದ ಪ್ರಕರಣಗಳಲ್ಲಿ ಇನ್ನೂ ತನಿಖೆಯನ್ನೇ ನಡೆಸಿಲ್ಲ. ಇತ್ತೀಚಿನ ಈ ಭೀಕರ ಪ್ರಕರಣ ನಾವು ಜಡತೆಯನ್ನು ಕೊಡವಿಕೊಂಡು ಎದ್ದು ನಿಲ್ಲುವಂತೆ ಮಾಡಬೇಕು.

ಸೀತಾರಾಮ ಯೆಚೂರಿ

ದೇಶದ ರಾಜಧಾನಿಯ ಜನನಿಬಿಡ ಪ್ರದೇಶದಲ್ಲಿ ಚಲಿಸುತ್ತಿದ್ದ ಒಂದು ಬಸ್ಸಿನಲ್ಲಿ ಭೀಕರ ಸಾಮೂಹಿಕ ಅತ್ಯಾಚಾರ ಮತ್ತು ಅತ್ಯಂತ ಅವಮಾನವೀಯ ಹಿಂಸಾತ್ಮಕ ಪಾಶವೀಕೃತ್ಯ ಇಡೀ ದೇಶವನ್ನು ತಲ್ಲಣಗೊಳಿಸಿದೆ. ಇದಕ್ಕೆ ಬಲಿಯಾದಾಕೆ ಆಸ್ಪತ್ರೆಯಲ್ಲಿ ಇನ್ನೂ ಅತ್ಯಂತ ಗಂಭೀರ ಸ್ಥಿತಿಯಲ್ಲಿದ್ದಾಳೆ. ಕೋಪಾವಿಷ್ಟರಾದ ಜನತೆ ದೇಶದ ಉದ್ದಗಲದಲ್ಲೂ ಈ ಹೀನಕೃತ್ಯವನ್ನು ಖಂಡಿಸಲು ಎದ್ದು ನಿಂತಿದ್ದಾರೆ. ಇದನ್ನು ಪ್ರತಿಧ್ವನಿಸಿದ ಸಂಸತ್ತಿನ ಎರಡೂ ಸದನಗಳ ಒಕ್ಕೊರಲಿನ ಆಗ್ರಹದಿಂದಾಗಿ ಕೇಂದ್ರ ಗೃಹಮಂತ್ರಿಗಳು ಆ ದುಷ್ಕರ್ಮಿಗಳ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವ, ಮತ್ತು ರಾಜಧಾನಿಯಲ್ಲಿ ಕಾನೂನು ವ್ಯವಸ್ಥೆ ಯಂತ್ರವನ್ನು ಬಲಪಡಿಸುವ ಭರವಸೆ ನೀಡಬೇಕಾಗಿ ಬಂದಿದೆ. ದಿಲ್ಲಿಯಲ್ಲಿ ಕಾನೂನು–ವ್ಯವಸ್ಥೆ ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿ ಬರುತ್ತದೆ. ಆದರೆ ಇವೆಲ್ಲ ಎಳ್ಳಷ್ಟೂ ವಿಶ್ವಾಸ ಮೂಡಿಸದ ಭರವಸೆಗಳು.

ಇದಕ್ಕೆ ಕಾರಣ–ಇದೊಂದು ಅಪರೂಪದ ಘಟನೆಯೇನಲ್ಲ. ದೇಶಾದ್ಯಂತ ಮಹಿಳೆಯರ ವಿರುದ್ಧ ಲೈಂಗಿಕ ಅಪರಾಧಗಳು ಆತಂಕಕಾರಿಯಾಗಿ ಹೆಚ್ಚುತ್ತಿವೆ. ದಿಲ್ಲಿಯ ಪಕ್ಕದ ಹರ್ಯಾಣದಲ್ಲಿ ಇತ್ತೀಚೆಗೆ 15 ಭೀಕರ ಅತ್ಯಾಚಾರಗಳು ನಡೆದಿವೆ. ಅವುಗಳಲ್ಲಿ ಹೆಚ್ಚಿನವು ಸಾಮೂಹಿಕ ಅತ್ಯಾಚಾರಗಳು. ಅಮೃತಸರದಲ್ಲಿ ಒಬ್ಬ ಪೋಲೀಸ್ ಅಧಿಕಾರಿಯನ್ನೇ ಆತ ತನ್ನ ಮಗಳನ್ನು ಲೈಂಗಿಕ ಕಿರುಕುಳದಿಂದ ರಕ್ಷಿಸಲು ಪ್ರಯತ್ನಿಸುತ್ತಿದ್ದಾಗ ಕೊಲೆ ಮಾಡಲಾಯಿತು. ರಾಷ್ಟ್ರೀಯ ಅಪರಾಧ ದಾಖಲೆಗಳ ಕಚೇರಿ ಕಲೆ ಹಾಕಿದ ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ 1953ರಿಂದ 2011 ರ ನಡುವೆ ಅತ್ಯಾಚಾರದ ಘಟನೆಗಳು 873 ಶೇ. ಹೆಚ್ಚಿವೆ, ಎಲ್ಲ ವಿಚಾರಣಾರ್ಹ ಅಪರಾಧಗಳನ್ನು ಒಟ್ಟು ಸೇರಿಸಿದರೂ ಅದರ ಮೂರುಪಟ್ಟು ಹೆಚ್ಚಿನ ವೇಗದಲ್ಲಿ, ಕೊಲೆಗಿಂತ ಮೂರೂವರೆ ಪಟ್ಟು ವೇಗವಾಗಿ ಬೆಳೆದಿದೆ. ಕಳೆದ ಐದು ವರ್ಷಗಳಲ್ಲಿ, 2007ರಿಂದ 2011 ರ ನಡುವೆ ಅತ್ಯಾಚಾರದ ಘಟನೆಗಳು 9.7ಶೇ.ದಷ್ಟು ಹೆಚ್ಚಿವೆ.



ನಾಚಿಕೆಗೇಡಿನ ಸಂಗತಿ

"ಎಲ್ಲ ಜಿ–20 ದೇಶಗಳಲ್ಲಿ ಭಾರತ ಮಹಿಳೆಗೆ ಬದುಕಲು ಅತ್ಯಂತ ಕೆಟ್ಟ ದೇಶ ಎಂಬ ಲೇಬಲ್ ಪಡೆದಿದೆ" ಎಂದು ಕೆಲವು ವಾರಗಳ ಹಿಂದೆ 'ದಿ ಗಾರ್ಡಿಯನ್' ಪತ್ರಿಕೆ ವರದಿ ಮಾಡಿತ್ತು. 'ಥಾಮ್ಸನ್ ರೈಟರ್ಸ್ ಟ್ರಸ್ಟ್ ಲಾ ವಿಮೆನ್' ಎಂಬುದು ಮಹಿಳೆಯರ ಹಕ್ಕುಗಳಿಗೆ ಮಾಹಿತಿ ಮತ್ತು ಬೆಂಬಲ ನೀಡುವ ಒಂದು ಕೇಂದ್ರ, ಅದು ನಡೆಸಿರುವ ಒಂದು ಸರ್ವೆಯ ಪ್ರಕಾರ ಮಹಿಳೆಯರಿಗೆ ಅತ್ಯಂತ ಅಪಾಯಕಾರಿಯಾದ 'ಸ್ಥಳ'ಗಳಲ್ಲಿ ಅಫಘಾನಿಸ್ತಾನ, ಕಾಂಗೊ ಮತ್ತು ಸೊಮಾಲಿಯಾದ ಸಾಲಿನಲ್ಲಿ ಭಾರತವೂ ಬರುತ್ತದೆ.

ನಾಚಿಕೆಗೇಡಿನ ಸಂಗತಿಯೆಂದರೆ ಅತ್ಯಾಚಾರಗಳ ಘಟನೆಗಳ ಪಟ್ಟಿಯಲ್ಲಿ ದೇಶದ ಮಹಾನಗರಗಳ ಪೈಕಿ ದಿಲ್ಲಿಯದ್ದೇ ಮೊದಲ ಸ್ಥಾನ. 2007ರಿಂದ 2011ರ ನಡುವೆ ದಿಲ್ಲಿಯೆಲ್ಲಿ 2620 ಅತ್ಯಾಚಾರದ ಕೇಸುಗಳು ದಾಖಲಾಗಿವೆ. ಇದಕ್ಕೆ ಹೋಲಿಸಿದರೆ ಮುಂಬೈಯಲ್ಲಿ 1033, ಬೆಂಗಳೂರಿನಲ್ಲಿ 383, ಚೆನ್ನೈಯಲ್ಲಿ 293 ಮತ್ತು ಕೊಲ್ಕತಾದಲ್ಲಿ 200 ಪ್ರಕರಣಗಳು ದಾಖಲಾದವು.

ಇನ್ನೂ ಹೊಲಸು ಸಂಗತಿಯೆಂದರೆ, ದಿಲ್ಲಿಯಲ್ಲಿ 2002 ರಿಂದ 2011ರ ನಡುವೆ ನಾಲ್ಕು ಅತ್ಯಾಚಾರದ ಪ್ರಕರಣಗಳಲ್ಲಿ ಮೂರರಲ್ಲಿ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಂಡಿದ್ದಾರೆ. ಕಳೆದ ದಶಕದಲ್ಲಿ(2002–2011) 5337 ಪ್ರಕರಣಗಳಲ್ಲಿ 3860ರಲ್ಲಿ ಅಪರಾಧಿಗಳನ್ನು 'ಸೂಕ್ತ' ಸಾಕ್ಷ್ಯವಿಲ್ಲದ್ದರಿಂದ ಕೋರ್ಟುಗಳು ಖುಲಾಸೆ ಮಾಡಿವೆ, ಇಲ್ಲವೆ ಬಿಡುಗಡೆ ಮಾಡಿವೆ. ಇಡೀ ದೇಶದಲ್ಲೂ 2001 ಮತ್ತು 2010 ರ ನಡುವೆ ಅತ್ಯಾಚಾರದ ಪ್ರಕರಣಗಳಲ್ಲಿ ಅಪರಾಧಿಗಳು ಶಿಕ್ಷೆಗೊಳಗಾದ ಪ್ರಮಾಣ ಕೇವಲ 26ಶೇ. ಇದು ಕೊಲೆಪ್ರಕರಣಗಳಲ್ಲಿ ಶಿಕ್ಷೆಗೊಳಗಾದವರ ಪ್ರಮಾಣಕ್ಕಿಂತ(35ಶೇ.) ಬಹಳ ಕಡಿಮೆ ಎಂಬುದನ್ನು ಗಮನಿಸಬೇಕು. ಶಿಕ್ಷೆಯ ಭಯವಂತೂ ದೂರ, ದೇಶದಲ್ಲಿ ನ್ಯಾಯನೀಡಿಕೆಯಲ್ಲಿನ ಇಂತಹ ಶೋಚನೀಯ ಸ್ಥಿತಿಯಿಂದಾಗಿ ಅಪರಾಧಿಗಳಿಗೆ ಈಗ ಕಾನೂನಿನ ಭಯವೆಂಬುದೇ ಇಲ್ಲವಾಗಿದೆ. ಇದೀಗ "ಕಾನೂನು–ವ್ಯವಸ್ಥೆಯ ಬಗ್ಗೆ ಮಾತಾಡುವುದನ್ನು ನಿಲ್ಲಿಸಿ ನ್ಯಾಯನೀಡಿಕೆಯ ಬಗ್ಗೆ ಮಾತಾಡಲು ಆರಂಭಿಸಬೇಕಾದ ಸಮಯ" ಎಂದು ಕೆಲವು ತಿಂಗಳ ಹಿಂದೆ ಕೇಂದ್ರ ಗೃಹ ಕಾರ್ಯದರ್ಶಿ ಆರ್.ಕೆ.ಸಿಂಗ್ ಒಪ್ಪಿಕೊಂಡಿದ್ದರು. ಸುಮಾರು 40–45 ವರ್ಷದ ಒಬ್ಬ ಕೊಲೆ ಮಾಡಿದರೆ, ಆತ ಶಿಕ್ಷೆಗೊಳಗಾಗದೆ, ಮುಕ್ತಮನುಷ್ಯನಾಗಿ ಸಾಯುವ ಸಂಭವವೇ ಹೆಚ್ಚು ಎಂದೂ ಅವರು ಹೇಳಿದ್ದರು. ಭಾರತದಲ್ಲಿ ತನಿಖೆಗೊಳಗಾದವರ ತ್ವರಿತ ವಿಚಾರಣೆ ನಡೆಸಲು ಸಾಕಷ್ಟು ಸಂಖ್ಯೆಯಲ್ಲಿ ನ್ಯಾಯಾಧೀಶರೂ ಇಲ್ಲ.



1987ರಲ್ಲಿ ಕಾನೂನು ಆಯೋಗ ಜನಸಂಖ್ಯೆಯಲ್ಲಿ ನ್ಯಾಯಾಧೀಶರ ಅನುಪಾತವನ್ನು ಒಂದು ಲಕ್ಷ ಜನಸಂಖ್ಯೆಯಲ್ಲಿ 1.05 ಇದ್ದುದನ್ನು ಐದು ವರ್ಷಗಳಲ್ಲಿ 5ಕ್ಕೇರಿಸುವ ನೀಲನಕ್ಷೆಯೊಂದನ್ನು ತಯಾರಿಸಿತ್ತು. ಆದರೆ ಈಗ 25 ವರ್ಷಗಳ ನಂತರವೂ ಆ ಅನುಪಾತ ಒಂದು ಲಕ್ಷ ಜನರಿಗೆ 1.4 ನ್ಯಾಯಾಧೀಶರ ಪ್ರಮಾಣದಲ್ಲೇ ಇದೆ.

ಅತ್ಯಂತ ಅಸಮಂಜಸ

ಹೀಗಿರುವಾಗ, ಇತ್ತೀಚೆಗೆ, ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿ, ಮಹಿಳೆಯರ ರಕ್ಷಣೆಗೆ ಸಾದಾ ಉಡುಪಿನ ಮಹಿಳಾ ಪೋಲೀಸ್ ಅಧಿಕಾರಿಗಳನ್ನು ನೇಮಿಸುವುದು, ಸಿ.ಸಿ.ಕ್ಯಾಮರಾಗಳನ್ನು ಇಡುವುದು ಮತ್ತು ಸಹಾಯವಾಣಿಗಳನ್ನು ರಚಿಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜ್ಯ ಸರಕಾರಗಳಿಗೆ ನಿರ್ದೇಶಿಸಿರುವುದು ಅತ್ಯಂತ ಅಸಮಂಜಸವಾಗಿ ಕಾಣುತ್ತದೆ. "ಕಿಕ್ಕಿರಿದಿರುವ ಬಸ್ಸುಗಳು, ಮೆಟ್ರೋಗಳು, ರೈಲುಗಳಲ್ಲಿ ಮಹಿಳೆಯರ ಅನುಭವಗಳು ಭಯಾನಕ ಮತ್ತು ನೋವು ತುಂಬಿದ ಅಗ್ನಿಪರೀಕ್ಷೆಗಳೇ" ಎಂದು ಸರ್ವೋಚ್ಚ ನ್ಯಾಯಾಲಯ ಟಿಪ್ಪಣಿ ಮಾಡಿದೆ. ಭಾರತದ ಪ್ರತಿಯೊಂದು ರಾಜ್ಯದಲ್ಲಿ ಮತ್ತು ಇಡೀ ದೇಶದಲ್ಲೂ ಜನಸಂಖ್ಯೆಯಲ್ಲಿ ಪೋಲೀಸರ ಅನುಪಾತ ಬಹಳ ಕಡಿಮೆ; ಸಮಸ್ತ ಜಗತ್ತಿನಲ್ಲೇ ಈ ಅನುಪಾತ ಅತೀ ಕಡಿಮೆ ಇರುವ ದೇಶಗಳಲ್ಲಿ ಭಾರತವೂ ಒಂದು. ಸಾಕಷ್ಟು ತರಬೇತಿ ಪಡೆದ ಸಿಬ್ಬಂದಿಯೊಂದಿಗೆ ಕಾನೂನು ಜಾರಿ ವ್ಯವಸ್ಥೆಯನ್ನು ಬಲಪಡಿಸಲು ಕ್ರಮಗಳನ್ನು ಕೈಗೊಳ್ಳದೆ ಪರಿಸ್ಥಿತಿ ಉತ್ತಮಗೊಳ್ಳಲಾರದು. 2011ರ 36.6ಶೇ. ಅತ್ಯಾಚಾರದ ಪ್ರಕರಣಗಳಲ್ಲಿ ಇನ್ನೂ ತನಿಖೆಯನ್ನೇ ನಡೆಸಿಲ್ಲ ಎಂದರೆ ಆಶ್ಚರ್ಯ ಪಡಬೇಕಾಗಿಲ್ಲ.

ಸಿಪಿಐ(ಎಂ) ಇತ್ತೀಚೆಗೆ ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಲೈಂಗಿಕ ಹಿಂಸಾಚಾರಗಳು ಮತ್ತು ಅತ್ಯಾಚಾರಗಳನ್ನು ಕುರಿತಂತೆ ಒಂದು ದೇಶವ್ಯಾಪಿ ಪ್ರಚಾರಾಂದೋಲನವನ್ನು ನಡೆಸಿದೆ. ಈ ಪ್ರಚಾರಾಂದೋಲನದಲ್ಲಿ ಈ ಕೆಳಗಿನ ಬೇಡಿಕೆಗಳನ್ನು ಇಡಲಾಗಿತ್ತು: 1) ಕೆಲಸದ ಸ್ಥಳಗಳಲ್ಲಿ ಲೈಂಗಿಕ ಹಲ್ಲೆ ತಡೆ ಮಸೂದೆಯನ್ನು



ಪಿಐ(ಎಂ) ಸಂಸತ್ ಸದಸ್ಯರು ಸೂಚಿಸಿರುವ ತಿದ್ದುಪಡಿಗಳೊಂದಿಗೆ ತ್ವರಿತವಾಗಿ ಪಾಸು ಮಾಡಬೇಕು. 2) ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳ ಹಾಗೂ ಕೌಟುಂಬಿಕ ಹಿಂಸಾಚಾರದ ಇತರ ಎಲ್ಲ ಪ್ರಕರಣಗಳಲ್ಲಿ ತ್ವರಿತ ನ್ಯಾಯಕ್ಕಾಗಿ ತ್ವರಿತ ವಿಚಾರಣೆ ಕೋರ್ಟುಗಳ ರಚನೆ. 3) ಮಹಿಳೆಯರ ವಿರುದ್ಧದ ಅಪರಾಧಗಳ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಎಲ್ಲ ರಾಜ್ಯಸರಕಾರಗಳಿಂದ ಸಮಯಬದ್ಧ ಕಾರ್ಯಯೋಜನೆ. 4) ಮಹಿಳೆಯರ ವಿರುದ್ಧ ಅಪರಾಧಗಳ ದರಗಳಲ್ಲಿ ಹೆಚ್ಚಳವನ್ನು ತಡೆಯಲು ಕೇಂದ್ರ ಮತ್ತು ರಾಜ್ಯಸರಕಾರಗಳಿಂದ ನಿರೋಧಾತ್ಮಕ ಕ್ರಮಗಳು. 5) ಎಫ್ಐಆರ್ ಸಲ್ಲಿಸುವುದರಲ್ಲಿ ವಿಳಂಬದ ತಪ್ಪು ಮಾಡುವ ಪೋಲೀಸ್ ಅಧಿಕಾರಿಗಳು ತಮ್ಮ ವರ್ತನೆಗೆ ಉತ್ತರ ಕೊಡುವಂತೆ ಮತ್ತು ಶಿಕ್ಷೆ ಅನುಭವಿಸುವಂತೆ ಗಬೇಕು. 6) ಆಪಾದಿತರಿಗೆ ರಾಜಕೀಯ ಮತ್ತು ಸಾಮಾಜಿಕ ರಕ್ಷಣೆ ಒದಗಿಸುವವರಿಗೆ ಶಿಕ್ಷೆ.

ಭಾರತ ಒಬ್ಬ ಮಹಿಳೆಗೆ ಅತ್ಯಂತ ಕೆಟ್ಟ ಸ್ಥಳ ಎಂದು ಗಮನಿಸಿದ ಮೇಲೆ, 'ದಿ ಗಾರ್ಡಿಯನ್' ಪತ್ರಿಕೆ ಒಂದು ಪ್ರಶ್ನೆಯನ್ನು ಮುಂದಿಡುತ್ತದೆ: "ಆದರೆ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಎಂದು ಹೆಮ್ಮೆ ಪಟ್ಟುಕೊಳ್ಳುವ ಒಂದು ದೇಶದಲ್ಲಿ ಇದು ಹೇಗೆ ಸಾಧ್ಯ?" ಇದು ಸಾಧ್ಯವಾಗಲು ಕಾರಣ ನಮ್ಮ ಕಾನೂನು ರಿ ಮತ್ತು ನ್ಯಾಯನೀಡಿಕೆ ವ್ಯವಸ್ಥೆಗಳು ನ್ಯಸ್ತಗೊಂಡಿರುವುದು. ಮಹಿಳೆಯರ ಮೇಲೆ ಹ ಅಮಾನವೀಯ ಅಪರಾಧಗಳನ್ನು ವವರಿಗೆ ತ್ವರಿತ ಗತಿಯಲ್ಲಿ ಶಿಕ್ಷೆ ವಿಧಿಸಲು ಷ ನ್ಯಾಯಾಲಯಗಳನ್ನು ರಚಿಸುವುದು ಅನಿವಾರ್ಯವಾಗಿದೆ. ಅಲ್ಲದೆ, ಶಿಕ್ಷೆ ಹೇಗಿರಬೇಕೆಂದರೆ ಅದು ಇಂತಹ ಅಪರಾಧಗಳನ್ನು ನಿರೋಧಿಸುವಂತದ್ದಿರಬೇಕು. ನಮ್ಮ ದೇಶದ ಜನತೆ ಮತ್ತು ಆಡಳಿತ ವ್ಯವಸ್ಥೆ ಮಹಿಳೆಯರ ವಿರುದ್ಧ ಅಪರಾಧಗಳನ್ನು ಎಳ್ಳಷ್ಟೂ ಸಹಿಸಲಾರದು ಎಂಬ ಭಯವನ್ನು ಮೂಡಿಸುವಂತದ್ದಿರಬೇಕು. ಇತ್ತೀಚಿನ ಈ ಭೀಕರ ಪ್ರಕರಣ ನಾವು ಜಡತೆಯನ್ನು ಕೊಡವಿಕೊಂಡು ಎದ್ದು ನಿಂತು 'ಭಾರತ ಮಹಿಳೆಯರ ವಿರುದ್ಧ ಅಪರಾಧಗಳ ಬಗ್ಗೆ ಎಳ್ಳಷ್ಟೂ ಸಹನೆ ತೋರದಂತೆ ನೋಡಿಕೊಳ್ಳಬೇಕಾಗಿದೆ.

ಬಾಬ್ರಿ ಮಸೀದಿ ಧ್ವಂಸದ ಎರಡು ದಶಕಗಳ ಬಳಿಕ.....

ನುಸುಳಿ ಬರುತ್ತಿರುವ ಫ್ಯಾಸಿಸ್ಟ್ ಪ್ರವೃತ್ತಿಯ ನಾನಾ ಮುಖಗಳು

ಪ್ರಭಾತ್ ಪಟ್ನಾಯಕ್

ಕನ್ನಡಕ್ಕೆ : ಸಿಮ್ಮಿಸಿ

1992ರ ಡಿಸೆಂಬರ್ ಆರರಂದು ನಡೆದ ಬಾಬ್ರಿ ಮಸೀದಿ ಧ್ವಂಸ ಪ್ರಕರಣ ದೇಶದ ಜಾತ್ಯತೀತ ಚೌಕಟ್ಟಿಗೆ ನಿಜಕ್ಕೂ ಅತ್ಯಂತ ದೊಡ್ಡ ಆಘಾತವನ್ನು ಉಂಟು ಮಾಡಿತು. ಇಪ್ಪತ್ತು ವರ್ಷಗಳ ನಂತರ, ಅನಾವರಣಗೊಳ್ಳುತ್ತಿರುವ ದೇಶದ ಇತಿಹಾಸದ ಹಿನ್ನೆಲೆಯಲ್ಲಿ ಈ ಘಟನೆಯನ್ನು ನಾವು ಹೇಗೆ ಅವಲೋಕಿಸುತ್ತೇವೆ ಎಂಬುದು ಪ್ರಮುಖವಾಗುತ್ತದೆ. ಈ ಘಟನೆ ಪ್ರಸ್ತುತ ಪರಿಸ್ಥಿತಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನೂ ನೋಡಬೇಕಾಗುತ್ತದೆ.

ಈ ಘಟನೆ ಮತ್ತು ಅದರ ಭಾವನಾತ್ಮಕ ಪರಿಣಾಮಗಳು, ಕೋಮುವಾದಿ ಮತ್ತು ಫ್ಯಾಸಿಸ್ಟ್ ಶಕ್ತಿಗಳನ್ನು ದೊಡ್ಡ ಪ್ರಮಾಣದಲ್ಲಿ ಬಲವರ್ಧನೆಯನ್ನು ಮಾಡಿವೆ ಎಂಬುದರಲ್ಲಿ ಸಂಶಯವಿಲ್ಲ. ಇದರಿಂದಾಗಿಯೇ ಈ ಶಕ್ತಿಗಳು ಭಾರತೀಯ ರಾಜಕಾರಣದಲ್ಲಿ ಕೇಂದ್ರ ಸ್ಥಾನಕ್ಕೆ ಬರುವಂತಾಯಿತು, ಅಷ್ಟೇ ಅಲ್ಲ ದೇಶದ ಆಡಳಿತವನ್ನು ನಡೆಸಲೂ ಇದರಿಂದ ಸಾಧ್ಯವಾಯಿತು. 1975ರಲ್ಲಿ ಇಂದಿರಾ ಗಾಂಧಿ ಘೋಷಿಸಿದ ತುರ್ತು ಪರಿಸ್ಥಿತಿಯ ಸಂದರ್ಭವನ್ನು ಹೊರತುಪಡಿಸಿದರೆ, ಈ ಘಟನೆ ಕೋಮು ಶಕ್ತಿಗಳು ಅಧಿಕಾರಕ್ಕೆ ಬರಲು ಎರಡನೆಯ ಪ್ರಮುಖ ಕಾರಣವಾಗಿ ತೋರುತ್ತದೆ.

ಅವರು ಅಧಿಕಾರಕ್ಕೆ ಬಂದರೆ ಇಡೀ ದೇಶಕ್ಕೆ ಎಂತಹ ಅನಾಹುತಗಳನ್ನು ತಂದೊಡ್ಡಬಹುದು ಎಂಬುದನ್ನು ಅವರ ಆಡಳಿತದಲ್ಲಿ ತೋರಿಸಿದ್ದಾರೆ. ಆದರೆ, ಪೂರ್ಣ ಪ್ರಮಾಣದಲ್ಲಿ ಅವರ ನಿರ್ದಿಷ್ಟವಾದ ಅಜೆಂಡಾವನ್ನು ದೇಶದ ಮುಂದಿಡಲು ಅವರಿಗೆ ಸಾಧ್ಯವಾಗಿಲ್ಲ. ಬೂರ್ಜ್ವಾ ವಿಶ್ಲೇಷಕರು ಹಲವಾರು ವರ್ಷಗಳಿಂದ ಬಿಜೆಪಿ ಇತ್ತೀಚಿನ ವರ್ಷಗಳಲ್ಲಿ ಸೌಮ್ಯವಾಗುತ್ತಿದೆ ಎಂಬ ವಿಶ್ಲೇಷಣೆಗಳನ್ನು ನೀಡುತ್ತಾ ಬಂದಿದ್ದಾರೆ. ಆದರೆ, ಬಿಜೆಪಿ ಸೌಮ್ಯಗೊಳ್ಳುತ್ತದೆ ಎಂಬುದಲ್ಲ ಪ್ರಶ್ನೆ. ರಾಜಕಾರಣದ ಬಲಾಬಲಗಳ ಕಾರಣದಿಂದಾಗಿ ತಮ್ಮ ಅಜೆಂಡಾವನ್ನು ದೇಶದ ಮೇಲೆ ಹೇರಲು ಬೇಕಾಗುವ ಅಧಿಕಾರವನ್ನು ಗಿಟ್ಟಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ.

ಭಾರತದ ಸಂವಿಧಾನವನ್ನು ಬದಲಾಯಿಸುವ ಬಿಜೆಪಿಯ ಪ್ರಯತ್ನ ಕೈಗೂಡಲಿಲ್ಲ ಮಾತ್ರವಲ್ಲ ಬಾಬ್ರಿ ಮಸೀದಿ ಧ್ವಂಸಗೊಂಡ ಜಾಗದಲ್ಲಿ ರಾಮ ಮಂದಿರ ನಿರ್ಮಾಣ, ಸಂವಿಧಾನದ 370ನೇ ವಿಧಿಗೆ



ವ್ಯಂಗ್ಯಚಿತ್ರವೊಂದನ್ನು ಇ-ಮೇಲ್ ಮಾಡಿದ್ದಕ್ಕಾಗಿಯೇ ಬಂಧನಕ್ಕೊಳಗಾದ ಕೊಲ್ಕತ್ತದ ಪ್ರೊ. ಮಹಾಪಾತ್ರ

ತಿದ್ದುಪಡಿ ತರುವ ವಿಷಯಗಳಲ್ಲೂ ಅಧಿಕಾರದಲ್ಲಿದ್ದಾಗ ಏನನ್ನೂ ಸಾಧಿಸಲು ಸಾಧ್ಯವಾಗಲಿಲ್ಲ.

ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಇದು ಸಮಾಧಾನಕರ ಸಂಗತಿ. ಆದರೆ, ಹಿಂದುತ್ವದ ಗುಂಪುಗಳಿಗೆ ಫ್ಯಾಸಿಸ್ಟ್ ಸಿದ್ಧಾಂತವು ಸೀಮಿತವಾಗಿಲ್ಲ ಎಂಬುದನ್ನು ನಿರಾಕರಿಸಲಾಗದು.

ಫ್ಯಾಸಿಸ್ಟ್ ಮಾದರಿಯನ್ನು ಸಾಕಾರಗೊಳಿಸುವಲ್ಲಿ ಹಿಂದುತ್ವ ಸಿದ್ಧಾಂತದ ಗುಂಪುಗಳೇ ಪ್ರಮುಖವಾಗಿವೆ. ಆದರೆ, ಅದರ ಈ ಪ್ರವೃತ್ತಿ ಇತರ ಕೆಲವು ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳಿಗೂ ತಾಕಿದೆ.

ಅಂತರ್‌ಜಾಲದಲ್ಲಿ ಕಾರ್ಟೂನ್‌ನ್ನು ಇತರರಿಗೆ ಕಳುಹಿಸಿದರು ಎಂಬ ಕಾರಣಕ್ಕೆ ಮಮತಾ ಬ್ಯಾನರ್ಜಿ ಸರ್ಕಾರದ ಪೋಲೀಸರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರನ್ನು ಬಂಧಿಸಿದ್ದಿರಬಹುದು, ಅಥವಾ ಪ್ರಶ್ನೆ ಕೇಳಿದರು ಎಂಬ ಕಾರಣಕ್ಕೆ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಅಮಾಯಕರನ್ನು ಬಂಧಿಸಿರುವ ಘಟನೆಯಿರಬಹುದು, ಅಥವಾ ದಲಿತರನ್ನು ಸಮಾಜದಿಂದ ಬಹಿಷ್ಕಾರ ಹಾಕಬೇಕು ಎಂಬ ಪಿಎಂಕೆ ನಾಯಕ ಡಾ. ರಾಮದಾಸ್ ಅವರ ಹೇಳಿಕೆ ಇರಬಹುದು. ಇಂತಹ ಹಲವು ಘಟನೆಗಳಿಂದ ವಿವಿಧ ರಾಜಕೀಯ ಪಕ್ಷಗಳಲ್ಲಿ ಫ್ಯಾಸಿಸಂನ ಸಿದ್ಧಾಂತ ಹರಡುತ್ತಿದೆ ಎಂಬುದು ತಿಳಿದುಬರುತ್ತಿದೆ.

ಈ ಪೈಕಿ, ಶಿವಸೇನಾ ನಾಯಕ ಬಾಳಾ ಠಾಕ್ರೆ ಮೃತಪಟ್ಟ ಸಂದರ್ಭದಲ್ಲಿ ಫೇಸ್‌ಬುಕ್‌ನಲ್ಲಿ ಮುಂಬೈ ಬಂದ್ ಸ್ವಯಂ ಪ್ರೇರಿತ ಅಲ್ಲ ಅದು ಭಯದಿಂದ ಆಗಿದ್ದು ಎಂದು ಬರೆದುಕೊಂಡಿದ್ದರು ಎಂಬ ಕಾರಣಕ್ಕೆ ಇಬ್ಬರು ಮುಗ್ಧ ಯುವತಿಯನ್ನು ಬಂಧಿಸಲಾಯಿತು. ಈ ಕೃತ್ಯ ಎನ್‌ಸಿಪಿ-ಕಾಂಗ್ರೆಸ್ ಆಡಳಿತದಲ್ಲಿ ನಡೆಯಿತು. ಬಾಳಾ ಠಾಕ್ರೆ ಮೃತಪಟ್ಟಾಗ ಮುಂಬೈ ಸಂಪೂರ್ಣ ಸ್ಥಬ್ಧಗೊಂಡಿದೆ ಎಂಬ ವಾತಾವರಣವನ್ನು ಸಾರ್ವತ್ರಿಕವಾಗಿ ಮೂಡಿಸಲಾಯಿತು. ದೇಶದಲ್ಲಿ ಫ್ಯಾಸಿಸ್ಟ್ ಪ್ರತಿರೂಪ ಎಂಬಂತಿದ್ದ ಬಾಳಾ ಠಾಕ್ರೆ ಅನುಸರಿಸಿದ ಫ್ಯಾಸಿಸ್ಟ್ ಮಾದರಿ ಅಮಾನವೀಯವಾಗಿದ್ದರೂ ರಾಷ್ಟ್ರಪತಿಯಿಂದ ಹಿಡಿದು ಕೆಳ ಹಂತದವರೆಗೆ ಎಲ್ಲರೂ ಬಾಳಾ ಠಾಕ್ರೆಯ ಗುಣಗಾಣದಲ್ಲಿ ತೊಡಗಿದರು, ಸಂತಾಪ ಸೂಚಿಸಿದರು. ಕಮ್ಯೂನಿಸ್ಟ್ ಟ್ರೇಡ್ ಯೂನಿಯನ್ ನಾಯಕನ ಹತ್ಯೆಯಿರಬಹುದು, ಮುಸ್ಲಿಮರ ಮೇಲೆ ನಡೆಸಿದ ನಿರಂತರ ದಾಳಿ ಇರಬಹುದು, ಹೊರಗಿನವರು ಎಂಬ ಕಾರಣಕ್ಕೆ ದಕ್ಷಿಣ ಭಾರತ ಮತ್ತು ಬಿಹಾರಿಗಳ ಮೇಲಿನ ದಾಳಿಗಳಿರಬಹುದು. ಇಂತಹ ಇತಿಹಾಸವಿದ್ದರೂ ಠಾಕ್ರೆಗೆ ಸಂತಾಪದಲ್ಲಿ ಕೊರತೆಯಾಗಲಿಲ್ಲ. ನರಮೇಧದ ಮೂಲಕ ಹಿಂದುತ್ವದ ಸಿದ್ಧಾಂತವನ್ನು ಪ್ರತಿಪಾದಿಸಿದ ನರೇಂದ್ರ ಮೋದಿಯನ್ನು ಮುಂದಿನ ಪ್ರಧಾನಿ ಎಂದು ಬಿಂಬಿಸಿರುವುದು ಮತ್ತು ಅಜ್ಮಲ್ ಕಸಬ್ ಗಲ್ಲಿಗೇರಿಸುವಾಗ ಹರಡಿದ ವಿಸ್ಮೃತಿಗಳಿರಬಹುದು. ಅಸ್ಸಾಂನಲ್ಲಿ ಇತ್ತೀಚೆಗೆ ನಡೆದ ಕೋಮುವಾದಿ ಪ್ರೇರಿತ ಹತ್ಯಾಕಾಂಡಗಳಿರಬಹುದು... ಈ ಎಲ್ಲ

ಮಟ 12 ಕ್ಕೆ

ಖಾಸಗಿ ವಿ.ವಿ. ಗಳಿಗೆ ಎಸ್‌ಎಫ್‌ಐ ವಿರೋಧ

"ಸಿ.ಟಿ.ರವಿ ಖಾಸಗಿ ಶಿಕ್ಷಣ ಲಾಭಿಯ ಏಜೆಂಟ್" –ಡಾ. ವಿ.ಶಿವದಾಸನ್

ರಾಜ್ಯದಲ್ಲಿ 13 ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಿರುವ ರಾಜ್ಯ ಸರ್ಕಾರ ಉನ್ನತ ಶಿಕ್ಷಣವನ್ನು ಸಂಪೂರ್ಣವಾಗಿ ವ್ಯಾಪಾರೀಕರಣ ಮಾಡಲು ಹುನ್ನಾರ ನಡೆಸಿದೆ. ಖಾಸಗಿ ವಿ.ವಿ.ಗಳಿಗೆ ಅನುಮತಿ ಕೊಡಿಸಲು ರಾಜ್ಯದ ಉನ್ನತ ಶಿಕ್ಷಣ ಸಚಿವ ಸಿ.ಟಿ. ರವಿ ಖಾಸಗಿಯುವರ ಏಜೆಂಟ್ ಆಗಿ ಕೆಲಸ ಮಾಡಿದ್ದಾರೆಂದು ಎಸ್‌ಎಫ್‌ಐ ಅಖಿಲ ಭಾರತ ಅಧ್ಯಕ್ಷರಾದ ಡಾ. ಶಿವದಾಸನ್ ಕಟುವಾಗಿ ಟೀಕಿಸಿದರು.

'ಖಾಸಗಿ–ವಿದೇಶಿ ವಿಶ್ವವಿದ್ಯಾಲಯುಗಳ ಸ್ಥಾಪನೆ: ಉನ್ನತ ಶಿಕ್ಷಣದ ವಂಚನೆ' ಎಂಬ ವಿಷಯದ ಕುರಿತು ಬೆಂಗಳೂರು ನಗರದ ಶಾಸಕರ ಭವನದಲ್ಲಿ ಡಿಸೆಂಬರ್....ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ವಿ.ವಿ. ಉಪ ಸಮಿತಿ ಸಂಘಟಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

ಅವರು ಮುಂದುವರೆದು ಮಾತನಾಡುತ್ತಾ ಕೇಂದ್ರದ ಯುಪಿಎ ಸರ್ಕಾರ ವಿದೇಶಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸಲು ಅವಕಾಶ ನೀಡುತ್ತಿದೆ. ಈಗಾಗಲೇ ದೇಶದಲ್ಲಿರುವ ಡೀಮ್ಡ್ ವಿ.ವಿ.ಗಳು ಕಾಲೇಜುಗಳು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ವಿಫಲವಾಗಿವೆ. 44 ಡೀಮ್ಡ್ ಕಾಲೇಜುಗಳನ್ನು ಅನರ್ಹಗೊಳಿಸಲಾಗಿದೆ. ಇಂತಹ ಸಂದರ್ಭದಲ್ಲಿ ದೇಶದ ಸ್ವಾತಂತ್ರ್ಯ ಸಾರ್ವಭೌಮತೆಗೆ ಧಕ್ಕೆಯಾಗುವ ವಿದೇಶಿ ವಿ.ವಿ.ಗಳನ್ನು ಪ್ರಾರಂಭಿಸಲು ಹೊರಟಿರುವ ಸರ್ಕಾರ ದೇಶದ ಹಿತ ಕಾಪಾಡುವ ಬದಲು ಬಹುರಾಷ್ಟ್ರೀಯ ಕಂಪನಿಗಳ ಹಾಗೂ ವಿದೇಶಿಯರ ಹಿತ ಕಾಪಾಡಲು ಹೊರಟಿದೆ.



ಧಾರವಾಡದಲ್ಲಿ ಪ್ರತಿಭಟನೆ


ಬೆಂಗಳೂರಿನಲ್ಲಿ ಪ್ರತಿಭಟನೆ

ಈಗಾಗಲೇ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಕಪ್ಪು ಪಟ್ಟಿಗೆ ಸೇರಿರುವ ವಿ.ವಿ.ಗಳಿಗೆ ನಮ್ಮ ದೇಶದಲ್ಲಿ ಅವಕಾಶ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ಸರ್ಕಾರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಮಹಿಳೆಯರನ್ನು ರಕ್ಷಿಸುವ ಬದಲಾಗಿ ಗೋವುಗಳನ್ನು ರಕ್ಷಿಸಲು ಹೊರಟಿದೆ. ಗೋಹತ್ಯೆ ನಿಷೇಧ ಕಾಯ್ದೆ ಜಾರಿಗೊಳಿಸಿದೆ. ಈ ಮೂಲಕ ಬಿಜೆಪಿ ತನ್ನ ಕೋಮುವಾದಿ ಅಜೆಂಡಾವನ್ನು ಜಾರಿಗೊಳಿಸಲು ಹೊರಟಿದೆ.

ಇಲಿ ಹತ್ಯೆ ನಿಷೇಧ ಕಾಯ್ದೆ ?!! ಗಣೇಶ (ವಿಘ್ನೇಶ್ವರ)ನ ವಾಹನವಾದ ಇಲಿಯನ್ನು ಹತ್ಯೆ ಮಾಡಬಾರದೆಂದು ಮುಂದೊಂದು ದಿನ ರಾಜ್ಯ ಸರ್ಕಾರ ಒಂದು ಕಾಯ್ದೆಯನ್ನು ರೂಪಿಸಿದರೂ ಆಶ್ಚರ್ಯವಿಲ್ಲ.

ಅಲ್ಲದೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರುಗಳು ಭ್ರಷ್ಟಾಚಾರ ಪ್ರಕರಣಗಳಲ್ಲಿ ಭಾಗವಹಿಸಿ ಕೋಟ್ಯಾಂತರ ಹಣವನ್ನು (ಜನರ ತೆರಿಗೆ ಹಣವನ್ನು) ಲೂಟಿ ಹೊಡೆಯುತ್ತಿದ್ದ ಆದರೆ ಶಿಕ್ಷಣ ಕ್ಷೇತ್ರಕ್ಕೆ ವ್ಯಯಿಸಲು ಸರ್ಕಾ ಹಣವಿಲ್ಲ ಎಂದು ಹೇಳಲಾಗುತ್ತಿದೆ. ಜನರನ್ನು ಶಿಕ್ಷಣದಿಂದ ವಂಚಿಸು ಹುನ್ನಾರವಾಗಿದೆ ಎಂದು ಅವ ಖಂಡಿಸಿದರು.

ಇದಕ್ಕೂ ಮುನ್ನ ಎಸ್‌ಎಫ್ ರಾಜ್ಯ ಕಾರ್ಯದರ್ಶಿ ಹುಳ್ಳಿ ಉ ಪ್ರಸ್ತಾವಿಕವಾಗಿ ಮಾತನಾ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾ ಅನಂತನಾಯ್ಕ ಮಾತನಾಡುತ್ತಾ ರಾಜ ವಿ.ವಿ.ಗಳಿಗೆ ಸರಿಯಾದ ಮೂ ಸೌಕರ್ಯಗಳು ಹಣಕಾಸಿ ಅನುದಾನವನ್ನು ನೀಡ ಸಂಶೋಧನಾ ಶಿಕ್ಷಣವನ್ನು ಕಡೆಗಣಿಸಿ ಖಾ ವಿ.ವಿ.ಗಳ ಸ್ಥಾಪನೆಗೆ ಅವಕಾಶ ನೀಡುವ ನೀತಿ ವಿರುದ್ಧ ಎಸ್‌ಎಫ್‌ಐ ತನ್ನ ಹೋರಾಟವ ಮುಂದುವರಿಸುತ್ತದೆ. ರಾಜ್ಯ ಸರ್ಕಾರ ಖಾ ವಿ.ವಿ.ಗಳಿಗೆ ನೀಡಿರುವ ಅನುಮತಿಯನ್ನ ರದ್ದುಗೊಳಿಸಬೇಕೆಂದು ಅವರು ಆಗ್ರಹಿಸಿದ

ಎಸ್‌ಎಫ್‌ಐ ಬೆಂಗಳೂರು ಜಿ ಕಾರ್ಯದರ್ಶಿ ಚಿಕ್ಕರಾಜು ಸ್ವಾಗತಿಸಿದ ಯುವರಾಜು ನಿರ್ವಹಿಸಿದರು. ಎಸ್‌ಎ ಬೆಂಗಳೂರು ಜಿಲ್ಲಾಧ್ಯಕ್ಷರಾದ ಮುನಿರಾ ಸೇರಿದಂತೆ ವಿವಿಧ ವಿಶ್ವವಿದ್ಯಾಲಯಗ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವರದಿ: ಯುವರಾ

ಡಿಸೆಂಬರ್ 18, 2012ರಂದು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಲಾದ ಹೇಳಿಕೆ

ಮಡೆಸ್ನಾನ ಮತ್ತು ಪಂಕ್ತಿಬೇಧ ವಿರುದ್ಧ ಸಿಪಿಐ(ಎಂ) ಜನಾಂದೋಲನ

ಡಿಸೆಂಬರ್ 21ರಿಂದ : ಜನ ಜಾಗೃತಿ ವಾಹನ ಜಾಥಾ ಕುಕ್ಕೆ ಸುಬ್ರಮಣ್ಯದಿಂದ ಮಂಗಳೂರಿಗೆ
ಡಿಸೆಂಬರ್ 24ರಿಂದ : ಕಾಲ್ನಡಿಗೆ ಜಾಥಾ ಮಂಗಳೂರಿನಿಂದ ಉಡುಪಿಗೆ ಬೈಂದೂರಿನಿಂದ ಕುಂದಾಪುರಕ್ಕೆ ದ್ವಿಚಕ್ರ ವಾಹನ ಜಾಥಾ
ಡಿಸೆಂಬರ್ 25ರಿಂದ : ಕಾಲ್ನಡಿಗೆ ಜಾಥಾ ಕುಂದಾಪುರದಿಂದ ಉಡುಪಿಗೆ
ಡಿಸೆಂಬರ್ 27ರಂದು : ಉಡುಪಿಯಲ್ಲಿ ಬೃಹತ್ ಪ್ರತಿಭಟನಾ ಸಭೆ
ಸ್ಥಳ : ಅಜ್ಜರ ಕಾಡು
ಪ್ರತಿಭಟನಾ ಮತಪ್ರದರ್ಶನ
• ಶ್ರೀಕೃಷ್ಣ ಮಠದ ಎದುರು

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಕೋಮುವಾದಿ ಶಕ್ತಿಗಳ ಪ್ರಯೋಗ ಶಾಲೆಗಳಾಗಿ ರೂಪುಗೊಳ್ಳುತ್ತಿರುವ ಜೊತೆ ಜೊತೆಯಲ್ಲಿ ಜಾತಿ ಅಸ್ಪ್ರಶ್ಯತೆ ಹಾಗೂ ಅಂಧ ಶ್ರದ್ಧೆಯನ್ನು ಗಟ್ಟಿಗೊಳಿಸುವ ಕೇಂದ್ರಗಳಾಗಿ ತಮ್ಮ ಪ್ರಭಾವವನ್ನು ವಿಸ್ತರಿಸುತ್ತಿರುವ ವಿದ್ಯಮಾನಗಳು ಆತಂಕದಾಯಕವಾಗಿವೆ. ಜನರ ನಂಬಿಕೆಗಳ ಹೆಸರಿನಲ್ಲಿ ಕುಕ್ಕೆ ಸುಬ್ರಮಣ್ಯದಲ್ಲಿ ನಡೆಸಲಾಗುತ್ತಿರುವ ಮಡೆಸ್ನಾನವಾಗಲಿ ಉಡುಪಿ ಶ್ರೀಕೃಷ್ಣಮಠದಲ್ಲಿ ಚಾಲನೆಯಲ್ಲಿರುವ ಪಂಕ್ತಿಬೇದ ಪದ್ಧತಿಯಾಗಲಿ ನಮ್ಮ ದೇಶದ ಸಂವಿಧಾನದ ಮೂಲ ಆಶಯಗಳಿಗೆ ತದ್ವಿರುದ್ಧವಾಗಿವೆ. ರಾಜ್ಯ ಸರ್ಕಾರದ ಮೇಲೆ ಪುರೋಹಿತಶಾಹಿಗಳ ಹಿಡಿತ ಬಿಗಿಯಾಗಿರುವುದರಿಂದ ಇಂತಹ ಅನಿಷ್ಠ ಪದ್ಧತಿಗಳನ್ನು ಕಾನೂನಿನ ಮೂಲಕ ನಿಷೇಧಿಸಲು ಸರ್ಕಾರ ಹಿಂದೇಟು ಹಾಕುತ್ತಿದೆ. ಸತಿ ಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆಯಂತಹ ಆಚರಣೆಗಳಿಗೆ ಜನರ ನಂಬಿಕೆಗಳೇ ಆಧಾರವಾಗಿದ್ದರೂ ಕಾನೂನು ಮೂಲಕ ಅವುಗಳನ್ನು ನಿಷೇಧಿಸಿ ತಡೆಹಿಡಿಯಲು ಸಾಧ್ಯವಾಗಿದೆ. ಬ್ರಾಹ್ಮಣರು ಉಂಡ ಎಲೆಗಳ ಮೇಲೆ ಬ್ರಾಹ್ಮಣರೇ ಆಗಲಿ, ಮಲೆಕುಡಿಯ ಆದಿವಾಸಿಗಳಾಗಲಿ ಅಥವ ಇತರ ಬ್ರಾಹ್ಮಣೇತರ ಜನರಾಗಲಿ ಉರುಳಾಡುವುದರಿಂದ 'ದೋಷ' ನಿವಾರಣೆಯಾಗುತ್ತದೆ ಅಥವ ಕಾಯಿಲೆ ಗುಣವಾಗುತ್ತದೆ ಎಂಬ ನಂಬಿಕೆ ಅಂಧಶ್ರದ್ಧೆಯ ಪರಮಾವಧಿಯಾಗಿದೆ. ಅದರಂತೆಯೇ, ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಬ್ರಾಹ್ಮಣರಿಗೆ ಮತ್ತು ಬ್ರಾಹ್ಮಣೇತರರಿಗೆ ಪ್ರತ್ಯೇಕ ಪಂಕ್ತಿಗಳಲ್ಲಿ ಊಟ ಬಡಿಸುವ ಪದ್ಧತಿಯು ಜಾತಿ ತಾರತಮ್ಯವನ್ನು ಆಚರಿಸುವ ಕಾನೂನುಬಾಹಿರ ಕ್ರಮವಾಗಿದೆ.

ಜಾತಿ ಅಸ್ಪ್ರಶ್ಯತೆ, ಮೂಢನಂಬಿಕೆಗಳ ವಿರುದ್ಧ ಹೋರಾಡುತ್ತಾ ಜನತೆಯಲ್ಲಿ ಮಾನವೀಯ, ಪ್ರಗತಿಪರವಾದ ಮೌಲ್ಯಗಳನ್ನು ಪ್ರಚುರಪಡಿಸಲು ಶ್ರಮಿಸುತ್ತಿರುವ ಸಿಪಿಐ(ಎಂ) ಕುಕ್ಕೆ ಸುಬ್ರಮಣ್ಯದ ಮಡೆಸ್ನಾನ ಹಾಗೂ ಉಡುಪಿ ಶ್ರೀಕೃಷ್ಣ ಮಠದ ಪಂಕ್ತಿಬೇಧವನ್ನು ಕಾನೂನಿನ ಮೂಲಕ ನಿಷೇಧಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಹಾಗೂ ಈ ಕುರಿತು ಜನರಲ್ಲಿ ಜಾಗೃತಿ ಉಂಟು ಮಾಡುವ ಎರಡನೇ ಹಂತದ ಕಾರ್ಯಕ್ರ ವೊಂದನ್ನು ಹಮ್ಮಿಕೊಂಡಿದೆ. ಕರ್ನಾಟಕ ರಾ ಕೆಟ್ಟ ಹೆಸರನ್ನು ತರಲು ಕಾರಣವಾಗಿರುವ ಪದ್ಧತಿಗಳನ್ನು ಕೊನೆಗಾಣಿಸಲು ಎಲ್ಲ ಪ್ರ ಮಾನವತಾವಾದಿ ಶಕ್ತಿಗಳು, ವ್ಯಕ್ತಿಗಳು ಬರಬೇಕೆಂದು ಸಿಪಿಐ(ಎಂ) ಪಕ್ಷ ವಿನಂತಿಸ

ಡಿಸೆಂಬರ್ 21ರಂದು ಸುಬ್ರಮಣ್ಯದಿಂದ ಆರಂಭವಾಗುವ ಜ ಪ್ರಚಾರ ಜಾಥವನ್ನು ಸಿಪಿಐ(ಎಂ ಕಾರ್ಯದರ್ಶಿ ಜಿ.ವಿ.ಶ್ರೀರಾ ಉದ್ಘಾಟಿಸಲಿದ್ದಾರೆ. ಡಿಸೆಂಬರ್ 24 ಮಂಗಳೂರಿನಿಂದ ಉಡುಪಿಗೆ ಹೊರಡಲ ಕಾಲ್ನಡಿಗೆ ಜಾಥವನ್ನು ನಿಡುಮಾಮಿಡಿ ವೀರಭದ್ರ ಚೆನ್ನಮಲ್ಲ ಸ್ವಾಮೀಜಿಯ ಉದ್ಘಾಟಿಸುವರು. ಸಿಪಿಐ(ಎಂ) ಕೇ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶ್ರೀನಿವಾಸರಾವ್ ಮುಖ್ಯ ಅತಿಥಿಗ ಭಾಗವಹಿಸಲಿದ್ದಾರೆ. ಡಿಸೆಂಬರ್ 27ರ ಉಡುಪಿಯಲ್ಲಿ ನಡೆಯುವ ಬಹಿರಂಗ ಹಾಗೂ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಪೊ ಬ್ಯೂರೊ ಸದಸ್ಯರಾದ ಬಿ.ವಿ. ರಾಘವಲು ಎಂ.ಎ.ಬೇಬಿ ಅವರು ಭಾಗವಹಿಸಲಿದ್ದ

ಕಾಯಮಾತಿಗೆ ಆಗ್ರಹ : ಹಾಸ್ಟೆಲ್ ದಿನಗೂಲಿಗಳು ಹಾಗೂ ಗುತ್ತಿಗೆ ನೌಕರರ ಪ್ರತಿಭಟನೆ

ರಾಜ್ಯದಲ್ಲಿ ಸರ್ಕಾರಿ ವಸತಿ ನಿಲಯಗಳಲ್ಲಿ ಹಾಗೂ ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ಅನೇಕ ವರ್ಷಗಳಿಂದ ದಿನಗೂಲಿ ನೌಕರರಾಗಿ ಮತ್ತು ಗುತ್ತಿಗೆ ನೌಕರರಾಗಿ ದುಡಿಯುವವರು ತಮ್ಮ ಬಹುದಿನಗಳ ನ್ಯಾಯಸಮ್ಮತವಾದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲು ಡಿಸೆಂಬರ್, 18, 2012 ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು. ನಗರದ ರೈಲ್ವೆ ನಿಲ್ದಾಣದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದ ನೌಕರರು, ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನಾ ಧರಣಿ ಹಾಗೂ ಸಭೆಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ದ್ದೇಶಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಮಾತನಾಡಿ ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಇರುವ ಎಸ್.ಟಿ.-ಎಸ್.ಟಿ., ಬಿ.ಸಿ.ಎಂ. ಹಾಸ್ಟೆಲ್ (ವಿದ್ಯಾರ್ಥಿ ನಿಲಯ)ಗಳಲ್ಲಿ ಮತ್ತು ಮುರಾರ್ಜಿ ಹಾಗೂ ಕಿತ್ತೂರ್ ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ



ಅಡುಗೆ, ಸ್ವಚ್ಛತೆ, ಕಾವಲು ಮುಂತಾದ ಕೆಲಸಗಳನ್ನು ಮಾಡುತ್ತಿರುವ ನೌಕರರು ಹತ್ತಾರು ವರ್ಷಗಳಿಂದ ಗುತ್ತಿಗೆ, ದಿನಗೂಲಿ, ನೌಕರರಾಗಿ ದುಡಿಯುತ್ತಿದ್ದಾರೆ. ಕಾಯಂ ಸ್ವರೂಪದ ಕೆಲಸಕ್ಕಾಗಿ ಅವರನ್ನು ನಿಯೋಜಿಸಲಾಗಿದ್ದರೂ ಅವರ ಸೇವೆಯನ್ನು ಕಾಯಂಗೊಳಿಸಿ ಅವರಿಗೆ ಕಾನೂನುಬದ್ಧ ವೇತನವನ್ನು ಮತ್ತು ಇತರ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಒಂದೊಂದು ಜಿಲ್ಲೆಗಳಲ್ಲಿ ಒಂದೊಂದು ರೀತಿಯ ಸಂಬಳ ಸವಲತ್ತುಗಳನ್ನು ನೀಡಲಾಗುತ್ತಿದ್ದು ತಿಂಗಳಿಗೊಮ್ಮೆ ಸರಿಯಾಗಿ ಸಂಬಳ ಪಾವತಿಯಾಗುತ್ತಿಲ್ಲ. ಕೆಲವು ಜಿಲ್ಲೆಗಳಲ್ಲಿ ಇವರನ್ನು ಎನ್.ಜಿ.ಓ.ಗಳ ಮೂಲಕ ಗುತ್ತಿಗೆ ಆಧಾರದಲ್ಲಿ ದುಡಿಸಲಾಗುತ್ತಿದೆ. ಗುತ್ತಿಗೆದಾರರು ತಿಂಗಳುಗಟ್ಟಲೆ ನೌಕರರಿಗೆ ಸಂಬಳವನ್ನೇ ನೀಡುತ್ತಿರುವುದಿಲ್ಲ. ಪ್ರಶ್ನೆ ಮಾಡಿದರೆ ಕೆಲಸದಿಂದ ಕಿತ್ತು ಹಾಕುವ ಬೆದರಿಕೆ ಹಾಕುತ್ತಾರೆ. ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸಹ ನೌಕರರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಗಮನಹರಿಸುತ್ತಿಲ್ಲ. ನೌಕರರ ಬ್ಯಾಂಕ್ ಖಾತೆಗೆ ಸಂಬಳ ಜಮಾ ಮಾಡುವ ಪದ್ಧತಿಯನ್ನು ಜಾರಿಗೊಳಿಸುತ್ತಿಲ್ಲ. ನೌಕರರ ಸಂಬಳದಿಂದ ಕಡಿತವಾಗುವ ಇ.ಪಿ.ಎಫ್. ಮತ್ತು ಇ.ಎಸ್.ಐ. ಹಣವನ್ನು ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಿದ ದಾಖಲೆಗಳನ್ನು ಒದಗಿಸುವುದಿಲ್ಲ. ಹೀಗೆ ಹಲವಾರು ರೀತಿಯಿಂದ ಹಾಸ್ಟೆಲ್ ನೌಕರರ ಶೋಷಣೆ ಮಾಡಲಾಗುತ್ತದೆ ಮಾತ್ರವಲ್ಲ ಅಧಿಕಾರಿ ವರ್ಗದವರು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆ. ಇದರಿಂದಾಗಿ ಹಾಸ್ಟೆಲ್‌ಗಳಲ್ಲಿ ಇರುವ ವಿದ್ಯಾರ್ಥಿ-ವಿದ್ಯಾರ್ಥಿನೀಯರಿಗೆ ಒಳ್ಳೆಯ ಗುಣಮಟ್ಟದ ಆಹಾರವೂ ಸಿಗುತ್ತಿರುವುದಿಲ್ಲ. ಹಾಸ್ಟೆಲ್ ದಿನಗೂಲಿ ನೌಕರರು ಹೆಚ್ಚಾಗಿ ದಲಿತ ಸಮುದಾಯಗಳಿಗೆ ಸೇರಿದವರಾಗಿದ್ದು ಬಹುತೇಕ ಮಹಿಳೆಯರಾಗಿರುತ್ತಾರೆ. ಆದ್ದರಿಂದ, ತೀವ್ರ ನಿರ್ಲಕ್ಷಕ್ಕೆ ಒಳಪಟ್ಟ ರಾಜ್ಯ ಹಾಸ್ಟೆಲ್ ಹಾಗೂ ವಸತಿ ಶಾಲೆಗಳ ದಿನಗೂಲಿ ಹಾಗೂ ಗುತ್ತಿಗೆ ನೌಕರರ ಬೇಡಿಕೆಗಳು ನ್ಯಾಯಬದ್ಧವಾಗಿದ್ದು ಅವನ್ನು ಕೂಡಲೇ ಈಡೇರಿಸಬೇಕೆಂದು ಆಗ್ರಹಿಸಿದರು.



ಕರ್ನಾಟಕ ರಾಜ್ಯ ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳ ದಿನಗೂಲಿ ನೌಕರರ ಸಂಘದ ರಾಜ್ಯ ಸಂಚಾಲಕರಾದ ಭೀಮಶೆಟ್ಟಿ ಯಂಪಳ್ಳಿಯವರು ಮಾತನಾಡಿ ಐದು ವರ್ಷ ನಿರಂತರ ಸೇವೆ ಸಲ್ಲಿಸಿದ ಎಲ್ಲ ಹಾಸ್ಟೆಲ್ ಹಾಗೂ ವಸತಿ ಶಾಲೆ ದಿನಗೂಲಿ ನೌಕರರ ಸೇವೆಯನ್ನು ಕಾಯಂಗೊಳಿಸಿ ಅವರನ್ನು ಸರ್ಕಾರಿ ನೌಕರರೆಂದು ಘೋಷಿಸಬೇಕು. ಎನ್.ಜಿ.ಓ ಗಳ ಮೂಲಕ ಮೂಲಕ ದುಡಿಸುವುದನ್ನು ಕೈಬಿಡಬೇಕು. ಹಾಸ್ಟೆಲ್ ನೌಕರರಿಗೆ ವೇತನ ಹಾಗೂ ತುಟ್ಟಿಭತ್ಯೆ ಸೇರಿ ತಿಂಗಳಿಗೆ ಕನಿಷ್ಠ ರೂ. 10,000 ಕನಿಷ್ಠ ವೇತನ ನಿಗದಿಯಾಗುವಂತೆ 2009ರ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕು, ಅಲ್ಲಿಯವರೆಗೆ 2009ರ ಗೆಜೆಟ್ ನೋಟಿಫಿಕೇಷನ್ ನಿಗದಿಪಡಿಸಿದ ಮೂಲ ವೇತನ ಹಾಗೂ ತುಟ್ಟಿಭತ್ಯೆ ಸಹಿತದ ಸಂಬಳವನ್ನು ರಾಜ್ಯದ ಎಲ್ಲಾ ಹಾಸ್ಟೆಲ್‌ಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ದುಡಿಯುತ್ತಿರುವ ಕಾಯಂ ಹಾಗೂ ಗುತ್ತಿಗೆ ನೌಕರರಿಗೆ ಯಾವುದೇ ತಾರತಮ್ಯವಿಲ್ಲದೆ ಸಂದಾಯ ಮಾಡಬೇಕು. ಕಾರ್ಮಿಕ / ನೌಕರರಿಗೆ ಅನ್ವಯವಾಗುವ ಎಲ್ಲ ಕಾನೂನು ಸೌಲಭ್ಯಗಳನ್ನು ಹಾಸ್ಟೆಲ್ ಮತ್ತು ವಸತಿ ಶಾಲೆ ದಿನಗೂಲಿ ನೌಕರರಿಗೂ ನೀಡಬೇಕು. ಕಾಯಂ ಅಥವಾ ಗುತ್ತಿಗೆ ಎಂಬ ಭೇದವಿಲ್ಲದೆ ಪ್ರತಿ ತಿಂಗಳ 10ನೇ ತಾರೀಖಿನೊಳಗೆ ಅವರ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ವೇತನವನ್ನು ಜಮಾ ಮಾಡಬೇಕು. ಹಾಸ್ಟೆಲ್ ನೌಕರರ ವೇತನದಲ್ಲಿ ಕಡಿತ ಮಾಡಲಾದ ಇ.ಎಸ್.ಐ ಮತ್ತು ಇ.ಪಿ.ಎಫ್. ಹಣವನ್ನು ಸಂಬಂಧಪಟ್ಟ ಇಲಾಖೆಗೆ ಜಮಾ ಮಾಡಿದ ಬಗ್ಗೆ ದಾಖಲೆಗಳನ್ನು ಒದಗಿಸಬೇಕು. ಹಾಸ್ಟೆಲ್‌ಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟಬೇಕು. ಎಲ್ಲಾ ಸರ್ಕಾರಿ ಹಾಸ್ಟೆಲ್‌ಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು ಮತ್ತು ವಿದಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಊಟ ಉಪಹಾರವನ್ನು ಸರಿಯಾಗಿ ಒದಗಿಸಬೇಕು. ಅಡುಗೆ ಅನಿಲ ಸಿಲಿಂಡರುಗಳ ಸರಬರಾಜು ಕಡಿತಮಾಡಬಾರದು. ಸಿಬ್ಬಂದಿ ಕೊರತೆ ಇರುವಲ್ಲಿ ಹೊಸ ನೇಮಕಾತಿ ಮಾಡಬೇಕು ಎಂದು ಆಗ್ರಹಿಸಿದರು. ಪ್ರಾಂತ ಕೃಷಿ ಕೂಲಿಕಾರರರ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಉಪಾಧ್ಯಕ್ಷರಾದ ಜಿ.ಎನ್.ನಾಗರಾಜ್, ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಅನಂತ


ಪುಟ 12 ಕ್ಕೆ

ಹಾಸ್ಟೆಲ್ ದಿನಗೂಲಿ ನೌಕರ ಆತ್ಮಹತ್ಯೆಗೆ ಶರಣು

ಚಿಕ್ಕಬಳ್ಳಾಪುರ ನಗರದ ಹೊರವಲಯದ ಹಳೇ ಆರ್.ಟಿ.ಓ ಬಳಿ ಇರುವ ಸಮಾಜ ಕಲ್ಯಾಣ ಇಲಾಖೆಯ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ನಿಲಯದ ದಿನಗೂಲಿ ಅಡುಗೆ ನೌಕರ ಅತ್ಮಹತ್ಯೆ ಮಾಡಿಕೊಂಡಿದ್ದಾನೆ.

ವಿದ್ಯಾರ್ಥಿ ನಿಲಯದಲ್ಲಿ ಅಡುಗೆ ನೌಕರನಾಗಿದ್ದ ಬಾಪೂಜಿ ನಗರ ನಿವಾಸಿ ಪ್ರದೀಪ್‌ಕುಮಾರ್ ಅತ್ಮಹತ್ಯೆಗೆ ಶರಣಾದವನು. ಕಂದಾವರ ಕೆರೆ ಅಂಗಳದಲ್ಲಿರುವ ಬಾವಿಗೆ ಹಾರಿ ಅತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಮಾಜ ಕಲ್ಯಾಣ ಇಲಾಖೆಯ ಸಚಿವರು ಉಸ್ತುವಾರಿ ವಹಿಸಿಕೊಂಡಿರುವ ಜಿಲ್ಲೆಯಲ್ಲೇ ಇಲಾಖೆಯ ದಿನಗೂಲಿ ನೌಕರ ಅತ್ಮಹತ್ಯೆ ಮಾಡಿಕೊಂಡಿರುವುದು ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಹಲವು ತಿಂಗಳಿಂದ ಹಾಸ್ಟೆಲ್ ದಿನಗೂಲಿ ನೌಕರರಿಗೆ ವೇತನ ನೀಡಿಲ್ಲ. ಇದರಿಂದ ಜೀವನ ಸಾಗಿಸುವುದು ದುಸ್ತರವಾಗಿ ಪ್ರದೀಪ್ ಕುಮಾರ್ ಅತ್ಮಹತ್ಯೆ ಮಾಡಿಕೊಂಡಿದ್ದಾನೆ. ನೌಕರನ ಅತ್ಮಹತ್ಯೆಗೆ ಇಲಾಖೆಯ ಅಧಿಕಾರಿಗಳೇ ನೇರ ಹೊಣೆಯೆಂದು ಆರೋಪಿಸಿ. ದಿನಗೂಲಿ ನೌಕರರು, ದಲಿತ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟಿಸಿದರು.




ಹಾಸ್ಟೆಲ್ ದಿನಗೂಲಿಗಳು – ಗುತ್ತಿಗೆ ನೌಕರರ ಪ್ರತಿಭಟನೆ

ಪುಟ 11 ರಿಂದ

ನಾಯಕ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು.

ಸ್ಥಳಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಇಲಾಖೆಯ ಜಂಟಿ ಆಯುಕ್ತರು ನೌಕರರ ಮನವಿ ಪತ್ರವನ್ನು ಸ್ವೀಕರಿಸಿ, ಬೇಡಿಕೆಗಳ ಕುರಿತು ಚರ್ಚಿಸಲು ಜಂಟಿ ಸಭೆಯನ್ನು ಕರೆಯುವ ಭರವಸೆ ನೀಡಿದರು. ಇದಕ್ಕೂ ಮುನ್ನ ಎರಡು



ನಿಮಿಷಗಳ ಮೌನ ಆಚರಿಸುವ ಮೂಲಕ ಚಿಕ್ಕಬಳ್ಳಾಪುರದಲ್ಲಿ ಆತ್ಮಹತ್ಯೆ ಮಾಡಿಕೊಂಡ ಹಾಸ್ಟೆಲ್ ದಿನಗೂಲಿ ನೌಕರ ಪ್ರದೀಪ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹೋರಾಟದ ಸಿದ್ಧತೆ :

ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ದಿನಗೂಲಿ ನೌಕರರ ಸಂಘದ ರಾಜ್ಯ ಸಂಚಾಲಕರಾದ ಭೀಮಶೆಟ್ಟಿ ಯಂಪಳ್ಳಿಯವರು ವಿಶೇಷ ಮುತುವರ್ಜಿ ವಹಿಸಿ ಗುಲ್ಬರ್ಗಾ, ಯಾದಗಿರಿ, ಬೀದರ್, ಕೊಪ್ಪಳ ಹಾಗೂ ವಿಜಾಪುರ ಜಿಲ್ಲೆಗಳಲ್ಲಿ ಸಂಚರಿಸಿ ಹಾಸ್ಟೆಲ್ ದಿನಗೂಲಿ ನೌಕರರನ್ನು ಸಂಪರ್ಕಿಸಿ, ಅವರ ಸಮಸ್ಯೆಗಳನ್ನು ಆಲಿಸಿ, ಡಿಸೆಂಬರ್ 18 ರಂದು ಬೆಂಗಳೂರಿನಲ್ಲಿ ನಡೆಯುವ ಧರಣಿ ಮುಷ್ಕರದಲ್ಲಿ ಭಾಗವಹಿಸುವಂತೆ ನೌಕರರಿಗೆ ತಿಳುವಳಿಕೆ ನೀಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಕರಿಯಪ್ಪ ಅಚ್ಚೊಳ್ಳಿ ಅವರ ಜೊತೆಯಲ್ಲಿ ಜಿಲ್ಲೆಯಲ್ಲಿರುವ ಸರ್ಕಾರಿ ಹಾಸ್ಟೆಲುಗಳಿಗೆ ಭೇಟಿ ಕೊಟ್ಟು 'ಬೆಂಗಳೂರು ಚಲೋ' ಬಗ್ಗೆ ಪ್ರಚಾರ ಮಾಡಿದ್ದಾರೆ. ಕೃಷಿಕೂಲಿಕಾರರ ಸಂಘದ ಬೆಳಗಾವಿ ಜಿಲ್ಲಾ ಮುಖಂಡರಾದ ಎಲ್.ಎಸ್.ನಾಯಕ್ ಅವರು ಜಿಲ್ಲೆಯಲ್ಲಿರುವ ಹಾಸ್ಟೆಲ್ ದಿನಗೂಲಿ ನೌಕರರಿಗೆ ರಾಜ್ಯಮಟ್ಟದ ಹೋರಾಟದ ಬಗ್ಗೆ ಮಾಹಿತಿ ನೀಡಿ ಧರಣಿ ಮುಷ್ಕರದಲ್ಲಿ ಪಾಲ್ಗೊಳ್ಳಿಸಿದ್ದಾರೆ. ಅದೇ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಕೃಷಿಕೂಲಿಕಾರರ ಸಂಘದ ಮುಖಂಡರಾದ ಇ.ಆರ್. ಯಲ್ಲಪ್ಪ ಅವರು ಜಿಲ್ಲೆಯಿಂದ ಹಾಸ್ಟೆಲ್ ದಿನಗೂಲಿ ನೌಕರರನ್ನು ಬೆಂಗಳೂರಿಗೆ ಕರೆತಂದಿದ್ದ... ಗೌರಿಬಿದನೂರಿನಲ್ಲಿ ಕೂಲಿಕಾರರ ಸಂ... ಮುಖಂಡರಾದ ಸಿ.ಸಿ. ಅಶ್ವತ್ಥಪ್ಪ ಅವ... ಮಾಹಿತಿ ಪಡೆದ ಚಿಕ್ಕಬಳ್ಳಾಪುರ ಜಿಲ್ಲೆ... ಹಾಸ್ಟೆಲ್ ದಿನಗೂಲಿ ನೌಕರರು ಧರಣಿಯ... ಭಾಗವಹಿಸಿದ್ದಾರೆ. ಗಂಗಾವತಿಯ ಕೃ... ಕೂಲಿಕಾರರ ಸಂಘದ ಮುಖಂಡರಾದ ಲಿಂಗ... ಹಣವಾಳ ಗಣನೀಯ ಸಂಖ್ಯೆಯಲ್ಲಿ ದಿನ... ನೌಕರರನ್ನು ಧರಣಿಯಲ್ಲಿ ಪಾಲ್ಗೊಳಿಸಿ...

ಕುಂದಾಪುರ ಪುರಸಭೆಗೆ ಮುತ್ತಿಗೆ....

ಪುಟ 6 ರಿಂದ

ಆಗ್ರಹಿಸಿದರು. ಇದೊಂದು ಚುನಾವಣಾ ಪ್ರೇರಿತ ಹೋರಾಟ ಎಂದು ಪುರಸಭೆಯ ಆಡಳಿತಾರೂಢ ಸದಸ್ಯರು ಆರೋಪಿಸುತ್ತಿರುವುದನ್ನು ಖಂಡಿಸಿದ ಅವರು, ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಹಾಗೂ ನಿವೇಶನರಹಿತರಿಗೆ ನಿವೇಶನ ನೀಡಲು ಒತ್ತಾಯಿಸಿ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಚಳುವಳಿ ದೇಶವ್ಯಾಪಿಯಾಗಿದ್ದು ಯಾವುದೇ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡು ನಡೆಸಲು ಗೊತ್ತಿಲ್ಲ ಎಂದರು.



ಚುನಾವಣೆಯನ್ನು ಒಂದು ಹೋರಾಟವಾಗಿಯೇ ಎದುರಿಸುವ ನಾವು ಜನತೆ ನಮಗೆ ಅಧಿಕಾರವನ್ನು ಕೊಟ್ಟಾಗ ಅವರ ಬೇಡಿಕೆಗಳನ್ನು ಈಡೇರಿಸಿದ ಚರಿತ್ರೆ ನಮ್ಮದಾಗಿದೆ ಎಂದು ಸ್ಪಷ್ಟಪಡಿಸಿದರು. ವಾಜಪೇಯಿ ನಗರ ನಿವೇಶನ ಯೋಜನೆ ಅಡಿಯಲ್ಲಿ 2 ವರ್ಷಗಳ ಹಿಂದೆ 847 ಅರ್ಜಿಗಳನ್ನು ಸ್ವೀಕರಿಸಿದ ಪುರಸಭೆ ಇದುವರೆಗೂ ನಿವೇಶನಕ್ಕಾಗಿ ಸಲ್ಲಿಸಲಾದ 1,323 ಅರ್ಜಿಗಳನ್ನು ಇತ್ಯರ್ಥಪಡಿಸಲು ಪುರಸಭೆ ಇದುವರೆಗೆ ಶ್ರಮ ಜರುಗಿಸಲಿಲ್ಲ. ಆದ್ದರಿಂದ ಹೋರಾಟವನ್ನು ಹಂತ ಹಂತವಾಗಿ ತೀವ್ರಗೊಳಿಸಬೇಕೆಂದು ಸಂಘದ ಅಧ್ಯಕ್ಷರು ಕರೆ ನೀಡಿದರು. ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳ ಸರ್ಕಾರಿ ಜಮೀನಿನಲ್ಲಿ ಮನೆಕಟ್ಟಿಕೊಂಡು ಇರುವ ಬಡವರಿಗೆ ಹಕ್ಕು ಪತ್ರಗಳನ್ನು ನೀಡುವ ರಾಜ್ಯ ಸರ್ಕಾರದ ತೀರ್ಮಾನ ನಮ್ಮ ಹೋರಾಟಕ್ಕೆ ಸಿಕ್ಕ ಮೊದಲ ಜಯ ಎಂದು ಬಣ್ಣಿಸಿದ ಅವರು ಯಾವುದೇ ಆಮಿಷ ಅಥವಾ ಬೆದರಿಕೆಗಳಿಗೆ ಸೊಪ್ಪು ಹಾಕದೆ ಹೋರಾಟವನ್ನು ಮುನ್ನಡೆಸಬೇಕೆಂದು ಹೇಳಿದರು.

ಹಿಂಬಾಗಿಲಿನಿಂದ ಓಡಿಹೋದ ಪುರಸಭಾಧ್ಯ...

ಪುರಸಭೆಗೆ ಮುತ್ತಿಗೆ ಹಾಕಿ... ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾ... ಪುರಸಭಾ ಅಧ್ಯಕ್ಷರಾದ ಸಿಪಿಐ(ಎಂ)... ವಿ.ನರಸಿಂಹ, ಹಾಲಿ ಸದಸ್ಯೆ ಸಿಪಿಐ(ಎಂ)... ಗುಣರತ್ನ, ಕೃಷಿ ಕೂಲಿಕಾರರ ಸಂಘ... ತಾಲ್ಲೂಕು ಕಾರ್ಯದರ್ಶಿ ವೆಂಕಟೇಶ್ ಕೋ... ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕೆ.ಶಂಕ... ಪ್ರತಿಭಟನಾಕಾರ... ಉದ್ದೇ... ಮಾತನಾಡಿದ... ಪ್ರತಿಭಟನೆಂ... ಕಲಾಪಗಳನ್ನು ತ... ಛೇಂಬರ್‌ನಿಂದ... ಆಲಿಸುತ್ತಿದ್ದ... ಪುರಸಭಾ ಅಧ್... ಬಿಜೆಪಿಯ... ಮೋಹನ್... ಶೆಣೈ ಭಾಷಣಕ... ವಾಗ್ದಾಳಿಗೆ ... ಪ್ರತಿಭಟನಾಕಾರರಿಗೆ ಮುಖ ತೋರಿಸ... ಹಿಂದಿನ ಬಾಗಿಲಿನಿಂದ ಓಡಿಹೋದ ... ತಿಳಿದು ಬಂದಾಗ ಪ್ರತಿಭಟನಾಕಾರರ ... ಮುಗಿಲು ಮುಟ್ಟುವಂತಾಯಿತು. ಕ... ಮಾತನಾಡಿದ ಕಾರ್ಮಿಕ ಮುಖ... ಎಚ್.ನರಸಿಂಹ ಪುರಸಭಾಧ್ಯಕ್ಷ... ಹೇಡಿತನವನ್ನು ಬಲವಾಗಿ ಖಂಡಿಸಿದರು... ಕೊನೆಯಲ್ಲಿ ಮುಖ್ಯಾಧಿಕಾ... ಪ್ರತಿಭಟನಾಕಾರರಿಂದ ಮನವಿ ಪತ್ರವ... ಸ್ವೀಕರಿಸಿದರು. ಪ್ರತಿಭಟನೆಯಲ್ಲಿ ಪುರಸಭೆ... ಉಪಾಧ್ಯಕ್ಷೆ ಸಿಪಿಐ(ಎಂ)ನ ಕಲಾವ... ಕೂಲಿಕಾರರ ಸಂಘದ ತಾಲ್ಲುಕು ಅಧ್ಯಕ್ಷರ... ರಾಜೀವ ಪಡುಕೋಣೆ, ಮಹಾಬಲ ವ... ಹೋಬಳಿ, ಅಶ್ವಥ್ ಕುಮಾರ್, ನಾಗ... ಸುಧಾಕರ ಕಾಂಚವ್ ಮೊದಲಾದವ... ಭಾಗವಹಿಸಿದ್ದರು.

– ವೆಂಕಟೇಶ್ ಕೋ...

ಬಾಬ್ರಿ ಮಸೀದಿ ಧ್ವಂಸದ ಎರಡು ದಶಕಗಳ ಬಳಿಕ.....

ಪುಟ 9 ರಿಂದ

ಘಟನೆಗಳೂ ಫ್ಯಾಸಿಸಂ ನುಸುಳಿಕೊಂಡು ಬರುತ್ತಿದೆ ಎಂಬುದನ್ನು ಖಚಿತಪಡಿಸುತ್ತಿದೆ.

ನಿಜ ಹೇಳಬೇಕೆಂದರೆ, 1930ರಲ್ಲಿ ಜರ್ಮನಿಯ ಪರಿಸ್ಥಿತಿಯ ಪುನರಾವರ್ತನೆಯ ಬಗೆಗೆ ಯಾರೂ ಮಾತನಾಡುವುದಿಲ್ಲ. ಫ್ಯಾಸಿಸ್ಟ್ ಪ್ರವೃತ್ತಿಗಳನ್ನು ಫ್ಯಾಸಿಸ್ಟ್ ಪ್ರಭುತ್ವವೊಂದರ ಸ್ಥಾಪನೆ ಎಂದು ತಿಳಿಯಲಾಗದು. ಇಂತಹ ಪ್ರವೃತ್ತಿಗಳ ಅಸ್ತಿತ್ವ ಅಥವಾ ಬೆಳವಣಿಗೆಗಳು ಅಗತ್ಯವಾಗಿ ಫ್ಯಾಸಿಸ್ಟ್ ಪ್ರಭುತ್ವ ಸ್ಥಾಪನೆಗೆ ಕಾರಣವಾಗುತ್ತವೆ ಹೇಳಲಾಗದು. 1930ರಲ್ಲಿ ಜರ್ಮನಿಯಲ್ಲಿ ಫ್ಯಾಸಿಸ್ಟ್ ಶಕ್ತಿಯೊಂದು ರೂಪುತಳೆದ ಪರಿಸ್ಥಿತಿ ಮತ್ತೆ ಉದ್ಭವಿಸುವುದೇ ಎಂಬುದು ಈಗಿನ ಜಾಗತಿಕ ವಿದ್ಯಮಾನದಲ್ಲಿ ಊಹಿಸಲೂ ಆಗದ ಸಂಗತಿ. ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ 7ನೇ ಅಧಿವೇಶನ ಫ್ಯಾಸಿಸಂನ್ನು ಅತ್ಯಂತ ಕಠಿಣ ಶಬ್ದಗಳಿಂದ ವ್ಯಾಖ್ಯಾನಿಸಿತ್ತು. "ಫ್ಯಾಸಿಸಂ ಅಂದರೆ ಅದು ಹಣಕಾಸು ಬಂಡವಾಳದ ಅತ್ಯಂತ ಪ್ರತಿಗಾಮಿ ಹಾಗೂ ಆಕ್ರಮಣಕಾರಿ ವಿಭಾಗದ ಭಯೋತ್ಪಾದಕ ಸರ್ವಾಧಿಕಾರ" ಎಂದು ಅದು ಹೇಳಿತ್ತು. ಇಲ್ಲಿ ಹಣಕಾಸು ಬಂಡವಾಳ ಎಂಬುದು ಒಂದು ದೇಶಕ್ಕೆ ಸಂಬಂಧಿಸಿದ್ದಾಗಿದೆ. ನಾಜಿಗಳು ಇಲ್ಲಿ ತಮ್ಮನ್ನು ತಾವು ರಾಷ್ಟ್ರೀಯ ಸಮಾಜವಾದಿಗಳು ಎಂದು ಕರೆದುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಅಂದಿನ ಫ್ಯಾಸಿಸಂ ಎಂದರೆ ಅಂತರ್ ಸಾಮ್ರಾಜ್ಯಶಾಹಿ ಕಲಹದ ನಡುವೆ ಹುಟ್ಟಿಕೊಂಡದ್ದು. ಫ್ಯಾಸಿಸ್ಟ್ ಪ್ರಭುತ್ವ ಅಸ್ತಿತ್ವಕ್ಕೆ ಬಂದಿರುವುದು ಫ್ಯಾಸಿಸ್ಟರ ಆಕ್ರಮಣದ ಮೂಲಕ.

ಇಂದು ನಾವು ಜಾಗತೀಕರಣಗೊಂಡ ಬಂಡವಾಳದ ಜಗತ್ತಿನಲ್ಲಿ ಜೀವಿಸುತ್ತಿದ್ದೇವೆ. ಇಲ್ಲಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದೊಂದಿಗೆ ಹಲವು ರಾಷ್ಟ್ರಗಳ ಬಂಡವಾಳ ಮಿಳಿತಗೊಂಡಿದೆ. ಇದು ಅಂತರ ಸಾಮ್ರಾಜ್ಯಶಾಹಿ ಕಲಹಗಳು ಮೂಕಗೊಂಡ ವಿಶ್ವವಾಗಿದೆ. ಈ ಹಿನ್ನೆಲೆಯಲ್ಲಿ 'ರಾಷ್ಟ್ರೀಯ' ಹಣಕಾಸು ಬಂಡವಾಳದ ಪರವಾಗಿ, ಹೊರಗಿನಿಂದ ಆಕ್ರಮಣ ಮಾಡಿ, ಭಯೋತ್ಪಾದಕ ಸರ್ವಾಧಿಕಾರದ ಮೂಲಕ ತನ್ನದೇ ಆದ ಸಾಮ್ರಾಜ್ಯವಾದವನ್ನು ಬೆಳೆಸುವುದು ಇಂದಿನ ಪರಿಸ್ಥಿತಿಯಲ್ಲಿ ಸಾಧ್ಯವಾಗದು.

– ಮುಂದುವರಿಯಲಿದೆ.

ಕನ್ನಡ ವಾರಪತ್ರಿಕೆ


ಔಷಧಿ ಕಂಪನಿಗಳಿಂದ ದಂಡ ಬಾಕಿ ರೂ.2300ಕೋಟಿಗಿಂತಲೂ ಹೆಚ್ಚು!

"ಸರಕಾರ ಮತ್ತು ಖಾಸಗಿ ಆರೋಗ್ಯ ಸೇವೆ ಒದಗಿಸುವವರು ತತವಾಗಿ ಪ್ರಯತ್ನಿಸಿದರೂ ಒಂದು ಭಾರೀ ದೊಡ್ಡ ಜನವಿಭಾಗಕ್ಕೆ ಗೂ ಸೂಕ್ತ ಆರೋಗ್ಯಪಾಲನೆ ಸೌಕರ್ಯಗಳು ದಕ್ಕಿಲ್ಲ" ಯುಪಿಎ-2 ಅರೋಗ್ಯ ಮಂತ್ರಿಗಳು ಮರುಗಿದ್ದಾಗಿ ರದಿಯಾಗಿದೆ. ಅದೇ ದಿನ ಸಂಸತ್ತಿನಲ್ಲಿ ರಸಗೊಬ್ಬರ ಮತ್ತು ಸಾಯನಿಕಗಳ ಮೇಲಿನ ಸ್ಥಾಯೀ ಸಮಿತಿಯ ವರದಿಯನ್ನು ಂಡಿಸಲಾಯಿತು. ಇದರ ಪ್ರಕಾರ ದೇಶದ ದೊಡ್ಡ-ದೊಡ್ಡ ಷಧಿ ಕಂಪನಿಗಳಿಗೆ ಸರಕಾರ ನಿಗದಿ ಪಡಿಸಿದ ಬೆಲೆಗಳಿಗಿಂತ ಚ್ಚು ಬೆಲೆಗಳಲ್ಲಿ ಔಷಧಿ ಮಾರಿದ್ದಕ್ಕಾಗಿ ಕಳೆದ 15 ವರ್ಷಗಳಲ್ಲಿ ಟ್ಟು 2577ಕೋಟಿ ರೂ.ಗಳ ದಂಡ ವಿಧಿಸಲಾಗಿದೆ. ಆದರೆ ದರಲ್ಲಿ ವಸೂಲಿಯಾದದ್ದು 10ಶೇ. ಮಾತ್ರ, ಅಂದರೆ ಸುಮಾರು 300ಕೋಟಿ ರೂ. ಬಾಕಿಯಿದೆ.

7 ರಲ್ಲಿ ಪ್ರಜಾಪ್ರಭುತ್ವ ಆಂದೋಲನದ ಸತತ ಒತ್ತಡಗಳ ಂತರ 'ರಾಷ್ಟ್ರೀಯ ಔಷಧಿ ಬೆಲೆನಿರ್ಧಾರ ಪ್ರಾಧಿಕಾರ'(ಎನ್‌ಪಿಪಿಎ) ಚಿಸಲಾಯಿತು. ಕೇಂದ್ರ ಸರಕಾರ 74 ಔಷಧಿಗಳ ಬೆಲೆ ನಿಗದಿ ಡಿಸಿದ್ದು, ಅದಕ್ಕಿಂತ ಹೆಚ್ಚಿನ ಬೆಲೆಗೆ ಮಾರುವ ಔಷಧಿ ಯಾರಕರು, ಆಮದುಗಾರರು, ವಿತರಕರರಿಗೆ, ಆ ಹೆಚ್ಚಿನ ಲೆಗಳಷ್ಟು ದಂಡ ವಿಧಿಸುವ ಅಧಿಕಾರ ಸರಕಾರಕ್ಕಿದೆ. ಎನ್‌ಪಿಪಿಎ ಗಸ್ಟ್ 1997ರಿಂದ ನವಂಬರ್ 2012 ರ ನಡುವೆ ಇಂತಹ 02 ಉಲ್ಲಂಘನೆಗಳ ನೋಟೀಸುಗಳನ್ನು ಈ ಕಂಪನಿಗಳಿಗೆ ಕಳಿಸಿದ್ದು ಅವುಗಳ ಮೊತ್ತ ರೂ. 2577 ಕೋಟಿ ರೂ.ಗಳು. ಇವುಗಳಲ್ಲಿ ವಸೂಲಿಯಾದದ್ದು ಕೇವಲ ರೂ.234 ಕೋಟಿ, ಅದೂ ಕೋರ್ಟುಗಳ ಆದೇಶದ ನಂತರವೇ. ಇನ್ನೂ ರೂ.2267.75 ಕೋಟಿ ವಸೂಲಿಯಾಗದೆ ತಗಾದೆಯಲ್ಲಿವೆ ಎಂದು ಸಂಸದೀಯ ಸ್ಥಾಯೀ ಸಮಿತಿಗೆ ರಾಸಾಯನಿಕಗಳು ಮತ್ತು ರಸಗೊಬ್ಬರ ಇಲಾಖೆ ತಿಳಿಸಿದೆಯಂತೆ. ಹೀಗೆ ದಂಡ ತೆರಬೇಕಾದ ಔಷಧಿ ಕಂಪನಿಗಳಲ್ಲಿ ಸಿಪ್ಲಾ(1700 ಕೋಟಿ ರೂ.), ರನ್ಬಕ್ಸಿ(650 ಕೋಟಿರೂ.), ಒಕಾಸ(90ಕೋಟಿರೂ.), ಕೆಡಿಲ(ರೂ.56 ಕೋಟಿರೂ) ಮುಂತಾದ 'ಪ್ರತಿಷ್ಠಿತ' ಕಂಪನಿಗಳಿವೆ.

ಯುಪಿಎ-2 ಆರೋಗ್ಯ ಮಂತ್ರಿಗಳು ಗ್ರಾಮೀಣ ಪ್ರದೇಶದಲ್ಲಿ ಬಹು ಪಾಲು ಮಂದಿಗೆ ಆರೋಗ್ಯ ಸೇವೆಗಳು ದಕ್ಕಿಲ್ಲ ಎಂದು ಮರುಗಿದ್ದು ಇಂತಹ ದೊಡ್ಡ ಕಂಪನಿಗಳ ಮಾಲಕರ ಸಂಘಟನೆಯಾದ ಸಿಐಐ ಏರ್ಪಡಿಸಿದ್ದ 'ಇಂಡಿಯ ಹೆಲ್ತ್ ಸಮ್ಮಿಟ್'(ಭಾರತ ಆರೋಗ್ಯ ಶೃಂಗ)ದಲ್ಲಿ. ಈ ಗ್ರಾಮೀಣ ಪ್ರದೇಶಗಳಲ್ಲಿ 'ಒಂದು ದಕ್ಷ, ಉನ್ನತ ಗುಣಮಟ್ಟದ ವಿಶೇಷ ಚಿಕಿತ್ಸೆಗಳನ್ನು ಕೈಗೆಟಕುವ ಮತ್ತು ಪಾರದರ್ಶಕ ರೀತಿಯಲ್ಲಿ ಒದಗಿಸಬೇಕಾಗಿದೆ' ಎಂದು ಆರೋಗ್ಯ ಮಂತ್ರಿಗಳು ಹೇಳಿದರು.

ಇದಕ್ಕೆ ಯಪಿಎ-2 ಸರಕಾರ ಏನು ಮಾಡಬೇಕೆಂದಿದೆ? ಯಥಾಪ್ರಕಾರ ಪಿಪಿಪಿ ಮಾದರಿಯಲ್ಲಿ, ಅಂದರೆ 'ಖಾಸಗಿ-ಸಾರ್ವಜನಿಕ ಪಾಲುದಾರಿಕೆ'ಯಲ್ಲಿ! ಆರೋಗ್ಯ ಮಂತ್ರಿಗಳ ಪ್ರಕಾರ



ವೇದರಾಜ ಎನ್.ಕೆ.

2015 ರ ವೇಳೆಗೆ 100 ಮಿಲಿಯ ಡಾಲರುಗಳಷ್ಟು(ಸುಮಾರು 500 ಕೋಟಿ ರೂ.ಗಳಷ್ಟು) ಬೆಳೆಯಬಹುದಾದ 'ಆರೋಗ್ಯ ಉದ್ದಿಮೆ'ಯಲ್ಲಿ ಅದರ ಐದು ಪಟ್ಟು ದಂಡ ತೆರಬೇಕಾಗಿರುವ ಮತ್ತು ಹದಿನೈದು ವರ್ಷಗಳಾದರೂ ಅದನ್ನು ವಸೂಲಿ ಮಾಡಲಾಗದ ಸರಕಾರದ ನಡುವಿನ ಪಾಲುದಾರಿಕೆ! ಈ 2300 ಕೋಟಿ ರೂ.ಗಳಷ್ಟು ದಂಡ ವಸೂಲಿಯಾಗದಿರಲು ಒಂದು ಕಾರಣ ಔಷಧಿ ಕಂಪನಿಗಳು ಸರಕಾರ ನಿಗದಿ ಫಡಿಸಿದ ಔಷಧಿ ಬೆಲೆಗಳನ್ನೇ ನ್ಯಾಯಾಲಯಗಳಲ್ಲಿ ಪ್ರಶ್ನಿಸಿರುವುದರಿಂದಾಗಿ. ಇಂತಹ ಕಂಪನಿಗಳೊಂದಿಗೇ 'ಪಾಲುದಾರಿಕೆ'ಗೆ ಮುಂದಾಗಿರುವ ಸರಕಾರದ ಮಂತ್ರಿಗಳ 'ಒಂದು ದಕ್ಷ, ಉನ್ನತ ಗುಣಮಟ್ಟದ ವಿಶೇಷ ಚಿಕಿತ್ಸೆಗಳನ್ನು ಕೈಗೆಟಕುವ ಮತ್ತು ಪಾರದರ್ಶಕ ರೀತಿಯಲ್ಲಿ ಒದಗಿಸುವ' ಮಾತುಗಳಲ್ಲಿರುವ ಪ್ರಾಮಾಣಿಕತೆಯೆಷ್ಟು?

'ಸರಕಾರೀ ಕಾಂಟ್ರಾಕ್ಟುಗಳನ್ನು ಖಾಸಗಿಯವರಿಗೆ ದಾಟಿಸಬೇಡಿ'

ಹೀಗೆಂದು ಸಲಹೆ ಮಾಡಿರುವುದು ಸಿ.ವಿ.ಸಿ. ಅಂದರೆ 'ಕೇಂದ್ರೀಯ ಜಾಗೃತಾ ಆಯೋಗ-ದೇಶದ ಅತ್ಯುನ್ನತ ಭ್ರಷ್ಟಾಚಾರ-ನಿರೋಧಕ ಕಾವಲು ಸಂಸ್ಥೆ. ಈ ಸಲಹೆ ನೀಡಿರುವುದು ಸರಕಾರೀ ಇಲಾಖೆಗಳಿಗೆ ಮತ್ತು ಸಾರ್ವಜನಿಕ ವಲಯದ ಘಟಕಗಳಿಗೆ ಎಂಬುದನ್ನು ಗಮನಿಸಿ. ಈ ವಿಷಯದಲ್ಲಿ ತನು ನೀಡುವ ಮಾರ್ಗನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಸಬೇಕು ಎಂದು ಅದು ಹೇಳಿದೆ.

ಸರಕಾರೀ ಸಂಘಟನೆಗಳು ಅಥವ ಸಾರ್ವಜನಿಕ ವಲಯದ ಗಳು ಇತರ ಸರಕಾರೀ ಸಂಘಟನೆಗಳು ಅಥವ ಸಾರ್ವಜನಿಕ ದ ಘಟಕಗಳಿಂದ ಆರ್ಡರುಗಳನ್ನು ಪಡೆಯುತ್ತವೆ, ನಂತರ ಗಿಲ ಸಂಬಂಧಗಳ ಮೂಲಕ ಯಾವುದೇ ಹೊಸ ಮೌಲ್ಯ ಇಲ್ಲದೆ, ಸ್ಪರ್ಧಾತ್ಮಕ ಟೆಂಡರು ಕ್ರಮಗಳಿಲ್ಲದೆ ಅವನ್ನು ಖಾಸಗಿಯವರಿಗೆ ದಾಟಿಸಿ ಬಿಡುತ್ತವೆ. ಇಂತಹ ವ್ಯವಹಾರಗಳು ಅತ್ಯಂತ ಅಪಾರದರ್ಶಕವಾಗಿರುತ್ತವೆ. ಸಾಮಾನ್ಯವಾಗಿ ಏಕೈಕ ಮೂಲದಿಂದ ಖರೀದಿಯಲ್ಲಿ ಇದು ಹೆಚ್ಚಾಗಿ ಕಂಡುಬಂದಿದೆ ಎಂದಿರುವ ಸಿವಿಸಿ. ಈ ಹಿನ್ನೆಲೆಯಲ್ಲಿ ಎಲ್ಲ ಸರಕಾರೀ ಇಲಾಖೆಗಳಿಗೆ, ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಮತ್ತು ಘಟಕಗಳಿಗೆ ಇಂತಹ ಸಲಹೆ ಮಾಡಿದೆ. ಇಂತಹ ಖರೀದಿಗಳಿಗೆ ನೀಡಿದ ಟೆಂಡರುಗಳ ಸಕಲ ವಿವರಗಳನ್ನು ವೆಬ್‌ತಾಣದಲ್ಲಿ ಸಾರ್ವಜನಿಕರ ಗಮನಕ್ಕೆ ಬರಲು ಹಾಕಬೇಕು ಎಂದೂ ಅದು ಹೇಳಿದೆ.

ಉದಾರೀಕರಣದ, ಪಿಪಿಪಿ ಮಾದರಿಯ ಈ ದಿನಗಳಲ್ಲಿ ಇಂತಹ ಮಾರ್ಗನಿರ್ದೇಶನ ಸರಿಯೇ ಎಂದು ಇದುವರೆಗೆ ಯಾರೂ ಕೇಳಿಲ್ಲ.

ಪೆಟ್ರೋಲಿಯಂ ಇಲಾಖೆಗೆ ಸಂಸದೀಯ ಸಮಿತಿಯ ತರಾಟೆ

ಇನ್ನೊಂದು ಸಂಸದೀಯ ಸ್ಥಾಯೀ ಸಮಿತಿಯ ವರದಿ ಯುಪಿಎ-2 ಸರಕಾರದ ಇನ್ನೊಂದು ಇಲಾಖೆಯ ಬಗ್ಗೆ ನಿರಾಶೆ ಕ್ತಪಡಿಸಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲದ ಮೇಲಿನ ಂಸದೀಯ ಸ್ಥಾಯೀ ಸಮಿತಿ ಕೃಷ್ಣ-ಗೋದಾವರಿ ಕಣಿವೆಯ 'ಜಿ ಡಿ6' ಅನಿಲ ನಿಕ್ಷೇಪದ 'ಕ್ಷೇತ್ರಾಭಿವೃದ್ಧಿ ೋಜನೆ'(ಎಫ್‌ಡಿಪಿ)ಯಲ್ಲಿ ನಿರೂಪಿಸಿದ ಪ್ರಮಾಣದ ದನೆಯನ್ನು ತಲುಪುವಲ್ಲಿ ಅದರ ಕಾಂಟ್ರಾಕ್ಟ್ ಪಡೆದ ೇಶ್ ಅಂಬಾನಿಯ ರಿಲಯನ್ಸ್ ಡಸ್ಟ್ರೀಸ್(ಆರ್‌ಐಎಲ್) ವಿಫಲವಾಗಿದ್ದರೂ ಪೆಟ್ರೋಲಿಯಂ ಲಾಖೆ ಅದರ ವಿರುದ್ಧ ದಂಡ ಕ್ರಮಗಳನ್ನು ಕೈಗೊಂಡಿಲ್ಲ ಂದು ಟಿಪ್ಪಣಿ ಮಾಡಿದೆ.

ಈ ನಿಕ್ಷೇಪದಿಂದ ಅನಿಲ ಉತ್ಪಾದನೆಯ ಪ್ರಮಾಣ ಇಳಿಮುಖವಾಗುತ್ತಿರುವುದನ್ನು ತಡೆಯಲು ಪೆಟ್ರೋಲಿಯಂ ಇಲಾಖೆ ಮತ್ತು ಹೈಡ್ರೊಕಾರ್ಬನ್ ಮಹಾ ನಿರ್ದೇಶಕರು(ಡಿಜಿಹೆಚ್) ಕಟ್ಟುನಿಟ್ಟಾದ ಉಸ್ತುವಾರಿ ವಹಿಸಬೇಕು ಎಂದು ಅದು ಹೇಳಿದೆ. ಕಂಪನಿಯೇ ಸಲ್ಲಿಸಿದ ಹೂಡಿಕೆ ಯೋಜನೆಯ ಪ್ರಕಾರ ಈ ವೇಳೆಗೆ ದಿನಕ್ಕೆ 80 ಮಿಲಿಯ ಘನಮೀಟರುಗಳ ಅನಿಲ ಉತ್ಪಾದನೆಯಾಗಬೇಕಿತ್ತು. ಆಗಸ್ಟ್ 2010ರಲ್ಲಿ ಇದು 62-63 ತಲುಪಿತ್ತು. ಆದರೆ ಈಗ ಅದು 23-24 ಕ್ಕೆ ಇಳಿದಿದೆ. ಆದರೂ ಪೆಟ್ರೋಲಿಯಂ ಇಲಾಖೆ ತನ್ನ ಉತ್ತರದಲ್ಲಿ ಎಫ್‌ಡಿಪಿಯಲ್ಲಿ ಹೇಳಿರುವಂತೆ ಇನ್ನಷ್ಟು ಅನಿಲ ಬಾವಿಗಳನ್ನು ತೋಡಲು ಹೇಳಲಾಗಿದೆ ಎಂದಷ್ಟೇ ಹೇಳಿರುವ

ಪುಟ 14 ಕ್ಕೆ

ಹತ್ತು ಲಕ್ಷ ಕೇಂದ್ರ ಸರ್ಕಾರೀ ನೌಕರರ ಮುಷ್ಕರ

ಯುಪಿಎ-2 ಸರಕಾರ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಬೆನ್ನಲ್ಲಿ 'ಆರ್ಥಿಕ ಸುಧಾರಣೆ'ಗಳ ಹೊಸ ಕಂತನ್ನು ಬಿಜೆಪಿ ಮತ್ತು ಇತರ ಪಕ್ಷಗಳ ಪ್ರತ್ಯಕ್ಷ, ಪರೋಕ್ಷ ಬೆಂಬಲವನ್ನು ನಿರೀಕ್ಷಿಸಿ ಆರಂಭಿಸಲು ಸಜ್ಜಾಗುತ್ತಿರುವಂತೆಯೇ ಕೇಂದ್ರ ಸರಕಾರೀ ನೌಕರರು ಮತ್ತು ಕಾರ್ಮಿಕರ ಮಹಾಒಕ್ಕೂಟದ ಕರೆಯ ಮೇರೆಗೆ 10 ಲಕ್ಷ ಕೇಂದ್ರ ಸರ್ಕಾರಿ ನೌಕರರು ಡಿಸೆಂಬರ್ 12 ರಂದು ಒಂದು ದಿನದ ಮುಷ್ಕರ ನಡೆಸಿದ್ದಾರೆ.

ಅಂದು ದೇಶಾದ್ಯಂತ ಅಂಚೆ, ಆದಾಯ ತೆರಿಗೆ,ಅಂತರ್ಜಲ ಮಂಡಳಿ, ಮುದ್ರಣ ವಿಭಾಗ; ರಕ್ಷಣಾ ಲೆಕ್ಕಪತ್ರ, ಆಡಿಟ್ ಮತ್ತು ಅಕೌಂಟ್ಸ್ ಮುಂತಾದ ಹಲವಾರು ಕೇಂದ್ರ ಸರಕಾರದ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ, ಕೆಲಸ-ಕಾರ್ಯಗಳೆಲ್ಲ ಸ್ಥಗಿತಗೊಳ್ಳುವಂತೆ ಮಾಡಿದ ಈ ಮುಷ್ಕರದ ಮುಖ್ಯ ಬೇಡಿಕೆ ನಿವೃತ್ತಿ ವೇತನ ನಿರೂಪಣೆಯನ್ನೆ ಬದಲಿಸುವ ಪಿಎಫ್‌ಆರ್‌ಡಿಎ ಮಸೂದೆಗೆ ತೀವ್ರ ಪ್ರತಿರೋಧ ವ್ಯಕ್ತಪಡಿಸುವುದು. ಇದಲ್ಲದೆ 7ನೇ ವೇತನ ಆಯೋಗದ ನೇಮಕ, ಖಾಲಿ ಹುದ್ದೆಗಳ ಭರ್ತಿ, ಕ್ಯಾಶುವಲ್/ದಿನಗೂಲಿ ಕಾರ್ಮಿಕರ ಸೇವೆಗಳನ್ನು ನಿಯಮಿತಗೊಳಿಸುವುದು, ಹೊರಗುತ್ತಿಗೆ, ಕಾಂಟ್ರಾಕ್ಟೀಕರಣ, ಖಾಸಗೀಕರಣ ಇತ್ಯಾದಿಗಳನ್ನು ನಿಲ್ಲಿಸುವುದು ಇತ್ಯಾದಿ ಬೇಡಿಕೆಗಳನ್ನು ಕೇಂದ್ರ ಸರಕಾರೀ ನೌಕರರು ಮುಂದಿಟ್ಟಿದ್ದಾರೆ.

ವರದಿಗಳ ಪ್ರಕಾರ ಅಸ್ಸಾಂ, ತ್ರಿಪುರ, ಪಶ್ಚಿಮ ಬಂಗಾಲ, ಒರಿಸ್ಸ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಛತ್ತೀಸ್‌ಗಡ, ಝಾರ್ಖಂಡ್‌ನಲ್ಲಿ ಮುಷ್ಕರ ಸಂಪೂರ್ಣವಾಗಿತ್ತು, ಮಹಾರಾಷ್ಟ್ರ, ಕರ್ನಾಟಕ, ಉತ್ತರಪ್ರದೇಶ, ಬಿಹಾರದಲ್ಲಿ 80ಶೇ.ಕ್ಕಿಂತ ಹೆಚ್ಚು, ಹಾಗೂ ಇತರೆಲ್ಲ ರಾಜ್ಯಗಳಲ್ಲಿ 60ಶೇ.ದಷ್ಟು ಮುಷ್ಕರ ನಡೆದಿದೆ.

ಜಗದಗಲ

ಶರತ್‌ಚಂದ್ರ

ಸಿರಿಯಾದ ಮೇಲೆ ಅಮೆರಿಕನ್ ನೇರ ಮಿಲಿಟರಿ ಆಕ್ರಮಣ?

ಸಿರಿಯಾದ ಮೇಲೆ ಅಮೆರಿಕ ಇರಾಕ್-ಮಾದರಿಯ ನೇರ ಮಿಲಿಟರಿ ಆಕ್ರಮಣಕ್ಕೆ ತಯಾರಿ ನಡೆಸುತ್ತಿದೆ ಎಂಬ ಸೂಚನೆಗಳು ಲಭ್ಯವಾಗಿವೆ. ಈಗಾಗಲೇ 20 ತಿಂಗಳು ನಡೆದಿರುವ ಲಿಬ್ಯಾ-ಮಾದರಿಯ ಆಂತರಿಕ ಸಶಸ್ತ್ರ ಹೋರಾಟ ದೀರ್ಘ ಕಾಲ ತೆಗೆದುಕೊಳ್ಳಬಹುದು ಅಥವಾ ತನ್ನ ಉದ್ದೇಶಗಳಿಗೆ ಅನುಕೂಲವಾಗಲಿಕ್ಕಿಲ್ಲ ಎಂಬ ತೀರ್ಮಾನಕ್ಕೆ ಅದು ಬಂದಿದೆ ಎಂದು ಹೇಳಲಾಗಿದೆ.

ತುರ್ಕಿ-ಸಿರಿಯಾ ಗಡಿಯಲ್ಲಿ ನಾಟೋದ ಕುಖ್ಯಾತ ಪೆಟ್ರಿಯಟ್ ಕ್ಷಿಪಣಿಗಳನ್ನು ಜರ್ಮನಿ ಸಜ್ಜುಗೊಳಿಸುತ್ತಿದೆ. ಫೈಟರ್ ವಿಮಾನಗಳ ಎಂಟು ಸ್ಕ್ವಾಡ್‌ಗಳನ್ನು ಹೊತ್ತ ಅಮೆರಿಕನ್ ಯುದ್ಧ ಹಡಗು 'ಯು.ಎಸ್.ಎಸ್. ಐಸೆನ್‌ಹೋವರ್' ಸಿರಿಯಾದ ಕರಾವಳಿಯ ಹತ್ತಿರ ಈಗಾಗಲೇ ಬಂದಿದೆ. ಎರಡನೇ ಯುದ್ಧಹಡಗು ಸಿರಿಯಾದತ್ತ ಪ್ರಯಾಣ ಮಾಡುತ್ತಿದೆ. ಕೆಲವು ವಾರಗಳ ಹಿಂದೆ ಲಂಡನಿನಲ್ಲಿ ಫ್ರಾನ್ಸ್, ತುರ್ಕಿ, ಜೋರ್ಡಾನ್, ಕಟಾರ್, ಯುಎಇ ಮತ್ತು ಅಮೆರಿಕದ ಹಿರಿಯ ಮಿಲಿಟರಿ ಜನರಲುಗಳ ಸಭೆ ಆಕ್ರಮಣದ ಮಿಲಿಟರಿ ವ್ಯೂಹ ಅಂತಿಮಗೊಳಿಸಿದೆ ಎಂದು ವರದಿಯಾಗಿದೆ. ಮಿಲಿಟರಿ ಆಕ್ರಮಣಕ್ಕೆ ಅಗತ್ಯ 'ಕಾರಣ'ವನ್ನು ಸಿದ್ಧ ಪಡಿಸಲಾಗಿದೆ. ಸಿರಿಯಾದ ಜನತೆ ಮೇಲೆ ರಾಸಾಯನಿಕ ಆಯುಧಗಳನ್ನು ಬಳಸಲಾಗುತ್ತಿದೆ. ಇದನ್ನು ನೋಡಿಕೊಂಡು ಸುಮ್ಮನೆ ಇರಲು ಸಾಧ್ಯ ಎಂದು ಅಮೆರಿಕನ್ ಸರ್ಕಾರದ ವಕ್ತಾರ ಗುಡುಗಿದ್ದಾರೆ.

ಸಿರಿಯಾದ ಸರ್ಕಾರ-ವಿರೋಧಿ ಸಿರಿಯಾ ನೇಶನಲ್ ಕೌನ್ಸಿಲ್ (ಎಸ್.ಎನ್.ಸಿ.) ಮೇಲೆ



ನಿಯಂತ್ರಣ ತಪ್ಪಿರುವುದು ಸಹ ಇನ್ನೊಂದು ಕಾರಣ ಎನ್ನಲಾಗಿದೆ. ಸಿರಿಯಾ ನೇಶನಲ್ ಕೌನ್ಸಿಲ್ ಗೆರಿಲ್ಲಾ ಪಡೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಅಲ್-ಖೈದಾ ಮತ್ತು ಇತರ ಭಯೋತ್ಪಾದಕ ಗುಂಪುಗಳು ಸೇರಿ ಅದನ್ನು ಹೈಜಾಕ್ ಮಾಡಿವೆ. ಅಲ್-ಖೈದಾ ಮತ್ತು ಇತರ ಭಯೋತ್ಪಾದಕ ಗುಂಪುಗಳು ಎಸ್.ಎನ್.ಸಿ.ಯಲ್ಲಿ ಇರುವುದು ಅಮೆರಿಕಕ್ಕೆ ಹೊಸ ಸುದ್ದಿ ಏನಲ್ಲ. ಆದರೆ ಅವು ಈಗ ದೊಡ್ಡ ಪ್ರಮಾಣದಲ್ಲಿ ಎಸ್.ಎನ್.ಸಿ. ಸೇರಿ ಅದರ ಮೇಲೆ ನಿಯಂತ್ರಣ ಸಾಧಿಸಿವೆ. ಮೊದಲೇ ಎಸ್.ಎನ್.ಸಿ.ಯ ನಾಯಕತ್ವದಲ್ಲಿ ಬಹುಸಂಖ್ಯಾತರು ಸಿರಿಯಾದಲ್ಲಿ ಯಾವತ್ತೂ ವಾಸಿಸದವರು ಅಥವಾ ಯಾವಾಗಲೋ ಸಿರಿಯಾ ಬಿಟ್ಟು ವಿದೇಶಗಳಲ್ಲಿ ನೆಲೆಸಿದವರು. ಅಲ್-ಖೈದಾ ಮತ್ತು ಇತರ ಭಯೋತ್ಪಾದಕ ಗುಂಪುಗಳ ಆಗಮನದಿಂದ ವಿದೇಶೀಯರ ಸಂಖ್ಯೆ ವಿಪರೀತ ಹೆಚ್ಚಿದೆ. ಜತೆಗೆ ಸಿರಿಯಾ ಸೈನ್ಯದ ಮೇಲೆ ಮಾತ್ರವಲ್ಲ ಜನತೆಯ ಮೇಲೆ ಅವರ ಅತ್ಯಾಚಾರಗಳು ವಿಪರೀತವಾಗಿ ಹೆಚ್ಚಿವೆ. ಸಿರಿಯಾದ ಜನತೆಯಲ್ಲಿ ಅವರ ವಿರುದ್ಧ ತೀವ್ರ ಆಕ್ರೋಶ ಮೂಡುವಷ್ಟು, ಸಿರಿಯಾ ಸರ್ಕಾರ ವಿರೋಧಿಗಳ ವಿರುದ್ಧ ಪ್ರಚಾರದಲ್ಲಿ ದೊಡ್ಡ ರೀತಿಯಲ್ಲಿ ಸಹಾಯ ಮಾಡುವಷ್ಟು. ಈ ಅತ್ಯಾಚಾರಗಳನ್ನು ನಿರಾಕರಿಸವುದು ಸಮರ್ಥಿಸುವುದು ಅಮೆರಿಕಕ್ಕೆ ಕಷ್ಟವಾಗಿದೆ. ವಿರೋಧಿ ಪಡೆಗಳಿಗೆ ಯಾವುದೇ ಸ್ಥಳೀಯ ಬೆಂಬಲ ಇಲ್ಲದೆ ಅವರು ಸರ್ಕಾರಿ ಪಡೆಗಳನ್ನು ಸೋಲಿಸುವುದು ಕಷ್ಟ ಅಥವಾ ಬಹಳ ದೀರ್ಘ ಕಾಲ ತೆಗೆದುಕೊಳ್ಳಲಿದೆ ಎಂದು ಅಮೆರಿಕನ್ನರ ಅಂದಾಜು. ಸಿರಿಯಾದ ಆಂತರಿಕ ಯುದ್ಧ ಈಗಾಗಲೇ 40 ಸಾವಿರ ಸಾವಿಗೆ ಕಾರಣವಾಗಿ 15 ಲಕ್ಷ ಜನ ಮನೆ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. 25 ಲಕ್ಷ ಸಿರಿಯನ್ನರಿ ದೊಡ್ಡ ಪ್ರಮಾಣದ ನೆರವಿನ ಅಗತ್ಯ ... ಸಿರಿಯನ್ನರ ದುಸ್ಥಿತಿಗೆ ಅಮೆರಿಕನ್ ಸ... ಮನ ಕರಗಿದೆ ಅಂತಲ್ಲ. ಆದರೆ ಸಿರಿಯಾ ವಿರೋಧಿ ಪಡೆಗಳ ವಿಜಯ ಬೇಗ ಆಗದಿದ್ದ... ಶಾಂತಿಯುತ ಮಾತುಕತೆಗಳಿಂದ ಪರಿಹಾ... ಪಡೆಯಲು ಅಂತರ್‍ರಾಷ್ಟ್ರೀಯ ಒತ್ತಡ ಹೆಚ್ಚಲಿ... ಸಿರಿಯಾದಲ್ಲಿ ಕೈಗೊಂಬೆ ಸರ್ಕಾರ ತರುವು... ಇನ್ನಷ್ಟು ಕಷ್ಟವಾಗಲಿದೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಸರ್ಕಾರ ಬದಲಾ... ನಂತರ ಮಂದಗಾಮಿ ಸುನ್ನಿ ಸರ್ಕಾ... ತರಬೇಕೆಂಬ ಅದರ ಉದ್ದೇಶ ಈ... ಹೋಗಬಹುದು ಎಂದು ಅವರಿಗೆ ಭಯ ಇ... ವಿರೋಧಿ ಪಡೆಗಳಿಗೆ ಬಿಟ್ಟರೆ ಉಗ್ರಗಾ... ಅಲ್-ಖೈದಾ ತರಹದ ಶಕ್ತಿಗಳು ಸರ್ಕಾ... ಮೇಲೆ ಅಧಿಪತ್ಯ ಸಾಧಿಸಲಿದ್ದು ಲಿಬ... ಪುನರಾವರ್ತನೆ ಆಗಬಹುದು ಎಂಬ ಆತ... ಅವರದು. ಒಸಾಮಾ ಬಿನ್ ಲಾಡೆನ್ ಕೊಲೆ... ಜತೆ ಅಲ್-ಖೈದಾ ಮತ್ತು ಇತರ ಭಯೋತ್ಪಾ... ಶಕ್ತಿಗಳ ಹುಟ್ಟಡಗಿಸಲಾಗಿದೆ ಎಂಬ ... ಲೆಕ್ಕಾಚಾರ ತಲೆಕೆಳಗಾಗಿದೆ. ಈ ಶಕ್ತಿಗಳು ... ಬಲವಾಗಿದ್ದು ಲಿಬ್ಯಾ ಮತ್ತು ಸಿರಿಯಾ... 'ವಿರೋಧಿ ಶಕ್ತಿ'ಗಳಿಗೆ ಅಮೆರಿಕ ಮತ್ತು ನಾಟೋ ನೀಡಿದ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಅ... ಪಾಲಾಗಿವೆ. ಆದರೂ ಅಮೆರಿಕ ಮತ್ತು ನಾಟೋ ಸಿರಿಯಾದಲ್ಲಿ ಸರ್ಕಾರ ಬದಲಾವಣೆಯ ಪ್ರಾ... ಬಿಟ್ಟುಕೊಡಲು ತಯಾರಿಲ್ಲ.

ಜಪಾನಿನಲ್ಲಿ ಎಲ್.ಡಿ.ಪಿ. ಜಯ

ಜಪಾನಿನ ಎಲ್.ಡಿ.ಪಿ.(ಲಿಬರಲ್ ಡೆಮೊಕ್ರಾಟಿಕ್ ಪಾರ್ಟಿ) ಆಳುತ್ತಿದ್ದ ಡಿ.ಪಿ.ಜೆ. (ಡೆಮೊಕ್ರಾಟಿಕ್ ಪಾರ್ಟಿ ಆಫ್ ಜಪಾನ್) ಸೋಲಿಸಿ ಮತ್ತೆ ಅಧಿಕಾರಕ್ಕೆ ಬಂದಿದೆ. ಜಪಾನಿನ ರಾಜಕೀಯದಲ್ಲಿ ಏಕಸ್ವಾಮ್ಯ ಸ್ಥಾಪಿಸಿದ್ದ ಎಲ್.ಡಿ.ಪಿ.ಯ 50ಕ್ಕೂ ಹೆಚ್ಚು ವರ್ಷಗಳ ಆಡಳಿತದ ನಂತರ ಡಿ.ಪಿ.ಜೆ. 2009 ರಲ್ಲಿ ಅಧಿಕಾರಕ್ಕೆ ಬಂದಿತ್ತು. ಎಲ್.ಡಿ.ಪಿ. ಪಾರ್ಲಿಮೆಂಟಿನ ಕೆಳಸದನದಲ್ಲಿ 294 ಸೀಟು ಪಡೆದು ನಿಚ್ಚಳ ಬಹುಮತ ಪಡೆದಿದೆ. ಎಲ್.ಡಿ.ಪಿ.ಯನ್ನು ಗೆಲುವಿನತ್ತ ನಡೆಸಿದ ಶಿನ್ಝೋ ಅಬೆ ಪ್ರಧಾನಿಯಾಗುವುದು ಹೆಚ್ಚು ಕಡಿಮೆ ಖಚಿತವಾಗಿದೆ. ಎಲ್.ಡಿ.ಪಿ. 31 ಸೀಟು ಪಡೆದ ಇನ್ನೊಂದು ಸಣ್ಣ ಪಕ್ಷ ನವ ಕೊಮಿಟೊ ಪಾರ್ಟಿ ಜತೆ ಸಮ್ಮಿಶ್ರ ಸರ್ಕಾರ ಸ್ಥಾಪಿಸಲಿದೆ. ಹಿಂದಿನ ಆಳುವ ಪಕ್ಷ ಡಿ.ಪಿ.ಜೆ. ಬರಿಯ 57 ಸೀಟು ಪಡೆದಿದೆ. 2009ರಲ್ಲಿ ಅದು 308 ಸೀಟು ಪಡೆದಿತ್ತು. ಕಳೆದ 50 ವರ್ಷಗಳಲ್ಲೇ ಇಷ್ಟು ಹೀನಾಯವಾಗಿ ಆಳುವ ಪಕ್ಷ ಜಪಾನಿ ಚುನಾವಣೆಯಲ್ಲಿ ಸೋತದ್ದಿಲ್ಲ. ಡಿ.ಪಿ.ಜೆ. ಪಕ್ಷ ಚುನಾವಣೆ ಮೊದಲು ಒಡೆದಿದ್ದು ಹಲವು ಹೊಸ ಪಕ್ಷಗಳು ಕಣಕ್ಕೆ ಇಳಿದಿದ್ದವು. ಅಲ್ಲದೆ ಡಿ.ಪಿ.ಜೆ. ತನ್ನ ನಾಲ್ಕು ವರ್ಷಗಳ ಅವಧಿ ಮುಗಿಸದೆ, ಒಂದು ವರ್ಷ ಮೊದಲೇ ಚುನಾವಣೆ ನಡೆಸಿದ್ದರು. ಡಿ.ಪಿ.ಜೆ. ಬಿಕ್ಕಟ್ಟು, ಹೊಸ ಪಕ್ಷಗಳ ಉದಯ, ಎಲ್.ಡಿ.ಪಿ.-ವಿರೋಧಿ ಮತಗಳ ವಿಭಜನೆ - ಎಲ್.ಡಿ.ಪಿ. ವಿಜಯಕ್ಕೆ ಕಾರಣವಾಗಿತ್ತು. ಎಲ್.ಡಿ.ಪಿ.ಗೆ ಜನರ ಬೆಂಬಲದ ಹೆಚ್ಚಳ ಅಲ್ಲ ಎಂದು ಅಬೆ ಒಪ್ಪಿಕೊಂಡಿದ್ದಾರೆ. ಕಮ್ಯುನಿಸ್ಟ್ ಪಕ್ಷ 1 ಸೀಟು ಕಳೆದುಕೊಂಡು 8 ಸೀಟು ಗಳಿಸಿದೆ. ಎಲ್.ಡಿ.ಪಿ. ಬಲಪಂಥೀಯ ಪಕ್ಷ ಎಂದು ಪರಿಗಣಿಸಲಾಗಿದ್ದು ಡಿ.ಪಿ.ಜೆ. ನಡುಪಂಥೀಯ ಪಕ್ಷವಾಗಿತ್ತು.

ಹಲವು ವರ್ಷಗಳಿಂದ ಸ್ಥಗಿತತೆಯಿಂದ ಜಪಾನಿ ಆರ್ಥಿಕತೆ ಬಳಲುತ್ತಿದೆ. ಜಪಾನಿ ಯೆನ್ ಬಲಗೊಂಡಿದ್ದು ಅದರಿಂದಾಗಿ ರಫ್ತುಗಳು ಕುಸಿದಿವೆ. ಆರ್ಥಿಕತೆ ಬಗ್ಗೆ ಹೊಸ ಸರ್ಕಾರ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಆದರೆ ಚುನಾವಣೆ ಮೊದಲೇ ವಿದೇಶ ನೀತಿಯ ಬಗ್ಗೆ ಹೆಚ್ಚು ಸದ್ದು ಮಾಡುತ್ತಿತ್ತು. ವಿವಾದಿತ ಸೆನೆಕಾಕು-ಡಿಯಾವೊ ದ್ವೀಪ ಸಮೂಹ ಜಪಾನಿಗೆ ಸೇರಿದ್ದು ಎಂದು ಚುನಾವಣೆ ಮೊದಲೇ ಮತ್ತು ನಂತರವೂ ಅಬೆ ಹೇಳಿಕೆಗಳನ್ನು ನೀಡಿದ್ದಾರೆ. ಇದರಿಂದ ಈಗಾಗಲೇ ಹದಗೆಟ್ಟಿರುವ ಚೀನಾದ ಜತೆ ಸಂಬಂಧ ಇನ್ನಷ್ಟು ಕೆಡಲಿದೆ. ಎರಡನೇ ಮಹಾಯುದ್ಧದ ನಂತರ ಜಪಾನಿ ಸಂವಿಧಾನದಲ್ಲೇ ಅಳವಡಿಸಲಾದ ಶಾಂತಿ ನೀತಿಯನ್ನು ಬಿಟ್ಟುಕೊಡುವ ಸೂಚನೆಗಳೂ ಬಲವಾಗುತ್ತಿವೆ. ಸಂವಿಧಾನದ ಪ್ರಕಾರ ಜಪಾನಿ ಸ್ವ-ರಕ್ಷಣೆ ಪಡೆಗಳು ದೇಶ ಬಿಟ್ಟು ಹೋಗುವಂತಿಲ್ಲ. ಆದರೆ ಇತ್ತೀಚೆಗೆ ಶಾಂತಿ ಮಹಾಸಾಗರದಲ್ಲಿ ಜಪಾನಿ ಪಡೆಗಳು ಕವಾಯಿತಿನಲ್ಲಿ ಭಾಗವಹಿಸಿವೆ. ಕಂಪೂಚಿಯಕ್ಕೆ ತರಬೇತಿಗೆ ಕಳಿಸಲಾಗಿತ್ತು. ಚೀನಾದ ವಿರುದ್ಧ ಜಪಾನ್, ಇಂಡಿಯಾ, ಆಸ್ಟ್ರೇಲಿಯಾ, ಅಮೆರಿಕಗಳ ಮಿಲಿಟರಿ ಅಕ್ಷ ಕಟ್ಟಬೇಕೆಂದೂ ಹೇಳಿದ್ದಾರೆ. ಸಂವಿಧಾನದಲ್ಲಿರುವ ಶಾಂತಿ ನೀತಿಯನ್ನೇ ಬದಲಾಯಿಸುವ ಬಗೆಗೂ ಅಬೆ ಹೇಳಿದ್ದಾರೆ. ಫುಕುಶಿಮಾ-ನಂತರದ ಅಣು ಶಕ್ತಿಯನ್ನು ಬಿಟ್ಟು ಕೊಡುವ ನೀತಿಯನ್ನು ಪುನರ್ವಿಮರ್ಶಿಸಲಾಗುವುದು ಎಂದೂ ಹೇಳಿದ್ದಾರೆ.

ಸಂಸದೀಯ ಸಮಿತಿಯ ತರಾ...

ಪುಟ 13ರಿಂದ

ಬಗ್ಗೆ ಸ್ಥಾಯೀ ಸಮಿತಿ ನಿರಾಶೆ ವ್ಯಕ್ತಪ... ಸರಕಾರ ಮಂಜೂರು ಮಾಡಿದ 88... ಡಾಲರುಗಳ ಈ ಯೋಜನೆಯಲ್ಲಿ 3... ಬಾವಿಗಳನ್ನು ತೋಡುವುದಾಗಿ ಆ... ಹೇಳಿತ್ತು. ಆದರೆ ತೋಡಿದ್ದು 22 ... ಅವುಗಳಲ್ಲೂ ಕೆಲಸ ನಡೆಯುತ್ತಿರುವು... 18ರಲ್ಲಷ್ಟೇ' ಈ 18ರಲ್ಲೂ ಆರು ಈಗಾಗ... ಮುಚ್ಚಿದೆ. ಅಂದರೆ 31 ರಲ್ಲಿ 12 ಮ... ಉತ್ಪಾದನೆಯಲ್ಲಿದೆ.

ಈ ಎಲ್ಲ ಅಂಶಗಳನ್ನು ಸಿಪಿಐ(ಎ... ಸಂಸತ್ ಸದಸ್ಯರು ಈ ಮೊದಲೇ ಹಲ... ಬಾರಿ ಪೆಟ್ರೋಲಿಯಂ ಮಂತ್ರಿಗಳ ಗಮ... ತಂದಿದ್ದರು ಎಂಬುದನ್ನು ಇಲ್ಲಿ ಗಮನಿಸಬೇ... ಆದರೂ ಯುಪಿಎ-2 ಸರಕಾರದ ... ಅಂಬಾನಿಗಳ ಪ್ರಭಾವದಿಂದಾಗಿ ಈ ಖಾ... ಅದಕ್ಷತೆಯನ್ನು ಮರೆಮಾಚಲಾಗಿದೆ, ಬದ... ಹಿಂದಿನ ಪೆಟ್ರೋಲಿಯಂ ಮಂತ್ರಿಗಳ ... ಎತ್ತಂಗಡಿ ಆಗಿದೆ ಎಂಬದು ನಮ್ಮ ಓದುಗ... ತಿಳಿದಿರುವ ಸಂಗತಿ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಯುವಜನರ ಪ್ರತಿಭಟನೆ

ರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಡಬೇಕು ಮತ್ತು ಉದ್ಯೋಗ ಸಿಗುವ ತನಕ ದ್ಯೋಗ ಭತ್ಯೆ ನೀಡಬೇಕೆಂದು ಒತ್ತಾಯಿಸಿ ಫ್ಐ ರಾಜ್ಯ ಸಮಿತಿ ಕರೆಯಂತೆ ಬರ್ 28 ರಂದು ಕೋಲಾರ ಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ಸಿ. ಉದ್ಯೋಗ ನೀಡುವಂತೆ ಕೋರಿ 958 ದ್ಯೋಗಿಗಳು ಅರ್ಜಿಗಳನ್ನು ಸಲ್ಲಿಸಿದರು.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೋಮಾ ಸೇರಿದಂತೆ ಉನ್ನತ ವಿದ್ಯಾಭ್ಯಾಸ ಮಾಡಿದ ಲಕ್ಷಾಂತರ ಮಂದಿ ಉದ್ಯೋಗವಿಲ್ಲದೇ ಪರಿತಪಿಸುತ್ತಿದ್ದಾರೆ.

ಹೊಸ ಆರ್ಥಿಕ ನೀತಿಗಳ ಪರಿಣಾಮ ಸರ್ಕಾರಗಳು ಕೇವಲ ಬೆರಳೆಣಿಕೆಯಷ್ಟು ಹುದ್ದೆಗಳಿಗೆ ಮಾತ್ರ ನೇಮಕಾತಿ



ಕೋಲಾರದಲ್ಲಿ ಯುವಜನರ ಪ್ರತಿಭಟನೆ

ಮಾಡಿಕೊಳ್ಳುತ್ತಿವೆ. ಖಾಯಂ ಆಗಿ ನೇಮಕ ಮಾಡಿಕೊಳ್ಳುವ ಹುದ್ದೆಗಳನ್ನು ಸಹ ಸರ್ಕಾರವು ಗುತ್ತಿಗೆ, ಅರೆ ಗುತ್ತಿಗೆ, ಗೌರವಧನ ಆಧಾರದ ಮೇಲೆ ನೇಮಕ ಮಾಡಿಕೊಂಡು ಅತ್ಯಂತ ಕಡಿಮೆ ಸಂಬಳ ನೀಡುತ್ತಿದೆ. ಈ ಎಲ್ಲ ಸಮಸ್ಯೆಗಳ ಆಧಾರದ ಮೇಲೆ ಡಿವೈಎಫ್ಐ ಸರ್ಕಾರದ ವ್ಯಾಪ್ತಿಯಲ್ಲಿರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕು ಮತ್ತು ಉದ್ಯೋಗ ಸಿಗುವ ತನಕ ನಿರುದ್ಯೋಗ ಭತ್ಯೆ ನೀಡಬೇಕೆಂದು ಒತ್ತಾಯಿಸಿ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲು ಕರೆ ನೀಡಿತ್ತು.

ಕೋಲಾರ ಜಿಲ್ಲೆಯ ವಿವಿಧ ಕಡೆಗಳಿಂದ ಬಂದಿದ್ದ ಸುಮಾರು 200 ಮಂದಿ ನಿರುದ್ಯೋಗಿ ಯುವಕ-ಯುವತಿಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ವಿ.ಸಂಪಂಗಿ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ, ಜೆಎಂಎಸ್ ಜಿಲ್ಲಾ ಕಾರ್ಯದರ್ಶಿ ವಿ.ಗೀತಾ, ಎಸ್‌ಎಫ್ಐ ಜಿಲ್ಲಾ ಕಾರ್ಯದರ್ಶಿ ವಾಸುದೇವ ರೆಡ್ಡಿರವರು ಮಾತನಾಡಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಕೋಲಾರ ತಾಲ್ಲೂಕಿನ ನರಸಾಪುರ ಮತ್ತು ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪನೆಯಾಗುತ್ತಿರುವ ಕೈಗಾರಿಕೆಗಳಲ್ಲಿ ಸ್ಥಳೀಯ ಯುವಕರಿಗೆ ಆದ್ಯತೆ ನೀಡಬೇಕು ಮತ್ತಿತರರ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಎಸ್.ಪೆದ್ದಪ್ಪಯ್ಯನವರಿಗೆ ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಡಿವೈಎಫ್ಐ ಜಿಲ್ಲಾಧ್ಯಕ್ಷ ಬಿ.ವಿ.ಸಂಪಂಗಿ, ಕಾರ್ಯದರ್ಶಿ ಎಂ.ವಿಜಯಕೃಷ್ಣ, ಖಜಾಂಚಿ ಪಿ.ತಂಗರಾಜ್, ಮುಖಂಡರಾದ ಡಿ.ಎಸ್. ವೆಂಕಟಚಲಪತಿ, ಎ.ವಿ.ರಮೇಶ್, ರಾಮಾಂಜಿ, ಮೀನಾಕ್ಷಿ, ಶ್ರೀನಾಥ್, ರವೀಂದ್ರ ವಹಿಸಿದ್ದರು. ಎಸ್‌ಎಫ್ಐ ಜಿಲ್ಲಾಧ್ಯಕ್ಷ ವಿ.ಅಂಬರೀಷ್, ಕಾರ್ಯದರ್ಶಿ ವಾಸುದೇವ ರೆಡ್ಡಿ ಭಾಗವಹಿಸಿದ್ದರು.

ರಾಜ್ಯವ್ಯಾಪಿ ಪ್ರತಿಭಟನೆ

ಇದೇ ರೀತಿ ಮಂಗಳೂರು, ಉಡುಪಿ, ಚಿಕ್ಕಬಳ್ಳಾಪುರ, ತುಮಕೂರು, ರಾಯಚೂರು,ಮಂಡ್ಯ, ಬೆಂಗಳೂರು, ಹಾಸನ, ದಾವಣಗೆರೆ, ಬಳ್ಳಾರಿ, , ಕೊಪ್ಪಳ, ಕೊಡಗು ಮುಂತಾದ ಕಡೆಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಮುಂದೆಕ್ಕೆ ಸಾವಿರಾರು ಯುವಜನರು ಮೆರವಣಿಗೆ ಮೂಲಕ ತೆರಳಿ ಮನವಿ ಸಲ್ಲಿಸಲಾಗಿದೆ.

● ಎಂ.ವಿಜಯಕೃಷ್ಣ

ಸಂಗ್ರಹದ ಆಂದೋಲನ....

ಗಳು ಜಾಥಾದ ಅಜೆಂಡಾ ಏನೆಂದು ಒಂದೇ ಗೆ ಹೇಳಿ ಬಿಡುತ್ತವೆ. ಆ ಹಳ್ಳಿ ಮತ್ತು ಪಕ್ಕದ ಹಳ್ಳಿಗಳಲ್ಲಿ ಇಲ್ಲದಂತಹ ಬಡವರೇನು ರು. ಕಟೌಟ್‌ನ ಬಡವರು, ಹಳ್ಳಿಯ ತರೂ ಬಂಧುಗಳೇ. ಚಿತ್ರಗಳ ಪಕ್ಕ ರುವ ಅಂಕಿ ಸಂಖ್ಯೆಗಳು ಜನರಿಗೆ ಹಲಕಾರಿಯೇ.

ಈಗ ವಾಹನದ ಬಳಿ ಮುಖಂಡರು ು ಸಮಸ್ಯೆಗಳು, ಅದಕ್ಕೆ ಕಾರಣವಾದ ರದ ನೀತಿಗಳ ಕುರಿತು ಮಾತನಾಡುತ್ತಾರೆ. ಹಾಡಿದ ಕಾರ್ಯಕರ್ತರು ಹಳ್ಳಿಯ ಮನೆಗೆ ತೆರಳುತ್ತಾರೆ. ಜನರ ಸಹಿ ಹಿಸಲು ಅವರ ಕೈಗಳಲ್ಲಿ ಬೇಡಿಕೆಗಳ ಪಟ್ಟಿ, ಮಾಡಿಸಲು ರಟ್ಟು, ಕಾಗದ. ಸರ್ಕಾರದ ತಿಗಳ ಬಗ್ಗೆ ಜನರಲ್ಲಿ ತೀವ್ರ ಮಾಧಾನವಿದೆ. ತಮ್ಮ ಅವಸ್ಥೆಯನ್ನು ಡಲು ಕಷ್ಟಗಳನ್ನು ಕೇಳಲು ಇಷರಾದರೂ ದಿದ್ದಾರಲ್ಲ ಎಂಬ ಮೆಚ್ಚುಗೆಯ ಭಾವ ರಲ್ಲಿರುವ ಎದ್ದು ಕಾಣುತ್ತದೆ. ಗ್ರಾಮಸ್ಥರು ಹದಿಂದ ಸಹಿ ಹಾಕುತ್ತಿದ್ದಾರೆ. ಸಹಿ ು ಬಾರದವರ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಎಂದು ಮೊದಲು ಇಡೀ ತಂಡಕ್ಕೆ ಒಂದು ್ ಪ್ಯಾಡ್ ಕೊಂಡೊಯ್ಯಲಾಗಿತ್ತು. ಈಗ ಬ್ಬರ ಕೈಯಲ್ಲಿಯೂ ಒಂದೊಂದು ಪ್ಯಾಡ್ ಕೊಳ್ಳಬೇಕಾಗಿ ಬಂದಿದೆ. ಜನರ ಅನಕ್ಷರತೆಯ ಮಟ್ಟ ಮತ್ತು ಬೇಡಿಕೆಗೆ ಇರುವ ಬೆಂಬಲ ಎರಡನ್ನೂ ಇದು ತೋರಿಸುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಅತಿ ಹೆಚ್ಚು ಪರಿಶಿಷ್ಟ ಜಾತಿಯ ಜನರನ್ನು ಹೊಂದಿರುವ ವಿಧಾನ ಸಭಾ ಕ್ಷೇತ್ರ ಇದು. ದೇಶ ಸ್ವಾತಂತ್ರ್ಯ ಪಡೆದ ಆರೂವರೆ ದಶಕಗಳು ಉರುಳಿದ ಮೇಲೂ ಇದು ನಮ್ಮ ಹಳ್ಳಿಗಳ ಮತ್ತು ದಲಿತರ ಬದುಕಿನ ವಾಸ್ತವ.

" ಹಿಂಗ್ ಮಾತಾಡೋರು ಯಾರಿದ್ದಾರೆ ಸಾರ್.."

ಬಡತನ, ಸರ್ಕಾರದ ದೋಷಪೂರಿತ ರೇಷನ್ ವ್ಯವಸ್ಥೆ, ಶಾಶ್ವತ ನೀರಾವರಿಯ ಅಗತ್ಯತೆ...ಇತ್ಯಾದಿ ಇತ್ಯಾದಿ ವಿಷಯಗಳ ಕುರಿತು ಮುಖಂಡರ ಮಾತು ಕೇಳಿದ ಸುಂದರ ಪಾಳ್ಯದ ರಾಜಗೋಪಾಲ ಹೇಳುತ್ತಾರೆ. " ಹಿಂಗ್ ಮಾತಾಡೋರು ಯಾರಿದ್ದಾರೆ ಸಾರ್.. ". ಬಹುಶಃ ಅವರ ಕಣ್ಣ ಮುಂದೆ ಲಂಚ ಪ್ರಕರಣದಲ್ಲಿ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾದ ಕ್ಷೇತ್ರದ ಶಾಸಕರು... ಜಿಲ್ಲೆಯ ಆಳುವ ವರ್ಗದ ಪಕ್ಷಗಳ ರಾಜಕಾರಣಿಗಳ ಮುಖ ಚಹರೆಗಳು ಹಾದು ಹೋಗಿರಬಹುದು. ಬರೀ ಅಭಿಮಾನದ ಮಾತಲ್ಲ. ವಾಹನದ ಜಾಥಾದ ಖರ್ಚು ವೆಚ್ಚಗಳಿಗೆಂದು ಜನ ಧಾರಾಳವಾಗಿ ಹಣವನ್ನು ಕೊಡುತ್ತಿದ್ದಾರೆ. ಸ್ವತಃ ರಾಜಗೋಪಾಲ್ 200 ರೂ. ಕೊಡುತ್ತಾರೆ. ಹಳ್ಳಿಗರು 10, 20 ರೂ.ಗಳನ್ನು ಸಂತೋಷದಿಂದ ಕೊಡುತ್ತಾರೆ. ಹಳ್ಳಿಯ ಅಂಗನವಾಡಿ ಕೇಂದ್ರದ ನೌಕರರು, ಶಾಲೆಯ ಶಿಕ್ಷಕರು 50, 100 ರೂಗಳನ್ನು ಕೊಡುತ್ತಾರೆ. ಒಬ್ಬ ಶಿಕ್ಷಕರಂತೂ 500 ರೂ. ಕೊಟ್ಟು ಜಾಥಾ ಉದ್ದೇಶ ಎಷ್ಟು ಮಹತ್ವದ್ದು ಸ್ವತಃ ಚಳುವಳಿಯ ಕಾರ್ಯಕರ್ತರಿಗೂ ಮತ್ತಷ್ಟು ಮನದಟ್ಟು ಮಾಡಿಸಿದ ಘಟನೆಯೂ ನಡೆದಿದೆ. ಅಭಿಮಾನದಿಂದ ಟೀ- ಬಿಸ್ಕತ್ತು ಕೊಡಿಸಿ ಸಂತೋಷ ಪಡುವರಿಗೂ ಕಮ್ಮಿ ಇಲ್ಲ. ಹೈಸ್ಕೂಲು, ಪಿಯುಸಿ, ಓದಿ ಮುಂದೆ ಓದಲು ಸಾಧ್ಯವಾಗದೇ ಶಿಕ್ಷಣ ನಿಲ್ಲಿಸಿದ ಗಣನೀಯ ಸಂಖ್ಯೆಯ ಯುವಜನರು ಈ ಗ್ರಾಮಗಳಲ್ಲಿದ್ದಾರೆ. ಅಂತಹವರಂತೂ ಜಾಥಾದಿಂದ ತುಂಬಾ ಪ್ರಭಾವಿತರಾಗುತ್ತಿದ್ದಾರೆ. ಡಿ. 16 ರಿಂದ ಪ್ರತಿದಿನ 15-16 ಹಳ್ಳಿಗಳನ್ನು ಜಾಥಾ ವಾಹನ ಸುತ್ತುತ್ತಿದೆ. ಈ ಜಾಥಾ ಗ್ರಾಮಾಂತರ ಪ್ರದೇಶದಲ್ಲಿ ಒಟ್ಟು 10 ದಿನ ನಡೆಯಲಿದೆ. ನಂತರ ನಗರ ಪ್ರದೇಶದಲ್ಲಿ ಮತ್ತೆ ಹತ್ತು ದ್ದಿನ ಮುಂದುವರಿಯಲಿದೆ.

ಗ್ರಾಮಗಳಲ್ಲಿ ಸಿಗುತ್ತಿರುವ ಹೊಸ ಸಂಪರ್ಕಗಳನ್ನು ಬಳಸಿಕೊಂಡು ಮುಂದೆ ಗ್ರಾಮ ಗ್ರಾಮ್ಗಗಳಲ್ಲಿ 'ಆಹಾರ ಭದ್ರತೆಗಾಗಿ ಸಮಿತಿ'ಗಳನ್ನು ರಚಿಸುವ ಮತ್ತು ತಾಲ್ಲೂಕು ಕೇಂದ್ರದಲ್ಲಿ ಬೇಡಿಕೆ ಇಟ್ಟು ಪ್ರಬಲ ಹೋರಾಟ ನಡೆಸುವ ಉದ್ದೇಶ ಕೂಡ ಇದ್ದು ಅದಕ್ಕೆ ಪೂರಕವಾಗಿ ಯೋಜಿಸಲಾಗುತ್ತಿದೆ. ಜಿ.ಸಿ. ಬಯ್ಯಾರೆಡ್ಡಿಯವರು ವಾಹನ ಜಾಥಾದ ಜೊತೆಗೇ ಇದ್ದುಕೊಂಡು ಮಾರ್ಗದರ್ಶನ ಮಾಡುತ್ತಾ ಜಾಥಾ ಯಶಸ್ಸಿಗೆ ಶ್ರಮಿಸುತ್ತಿರುವುದು ಮುಖಂಡರು, ಕಾರ್ಯಕರ್ತರಲ್ಲಿ ಮತ್ತಷ್ಟು ಹುರುಪು ಮೂಡಿಸಿದೆ. ●

ಮೇ ನಾಲ್ಕರ ಚಳುವಳಿಯಲ್ಲಿ

ಪುಟ 16 ರಿಂದ

ಆಹ್ವಾನಿಸಿ ಸಲಹೆ ಪಡೆದರು. ಅಲ್ಲಿ ಸಂವಾದಗಳ ನಂತರ ಬಂದ ಮುಖ್ಯ ತೀರ್ಮಾನವೆಂದರೆ ಎಲ್ಲರೂ ಜನರ ಜೊತೆ, ವಿವಿಧ ರಂಗಗಳ ದುಡಿಯುವ ಜನರ ಜೊತೆ ಬೆರೆಯಬೇಕು ಎಂದು. ಅವರು ಬೇರೆ ಬೇರೆ ತಂಡಗಳಾಗಿ ಜನರ ಜೊತೆ ಕೆಲಸ ಮಾಡಿದರು. ಬಂದರು ಕಾರ್ಮಿಕರ ಜೊತೆ ಸಂಭಾಷಣೆ ನಡೆಸಿದರು ಮಾತ್ರವಲ್ಲ ಅವರ ಜೊತೆ ಮೂಟೆ ಹೊತ್ತರು. ರೈಲ್ವೆ ದುಡಿಮೆಗಾರರ ಜೊತೆ ಅವರ ರೈಲಿನ ಜೊತೆ ಸಾಗಿದರು. ಅವರೊಡನೆ ದುಡಿದರು. ಹಳ್ಳಿಗಳಿಗೆ ತೆರಳಿದರು. ಅವರ ನಾಯಕರಾಗಿ, ಅವರಿಗೆ ಭಾಷಣ ಮಾಡಲು ಕಲಿಸಿದರು ಮಾತ್ರವಲ್ಲ. ಅವರ ಜೊತೆ ಹೊಲಗಳಲ್ಲಿ ದುಡಿದರು.

ಮೇ ನಾಲ್ಕರ ಚಳುವಳಿಯಲ್ಲಿ ಲಿಯು ಶಾವೋಕಿ, ಡೆಂಗ್ ಶಿಯಾವೋಪಿಂಗ್

ಮಾವೋರವರ ಹುನಾನ್ ರಾಜ್ಯಕ್ಕೆ ಸೇರಿದ ಲಿಯು ಶಾವೋಕಿ ಮುಂದೆ ಚೀನಾದ ಅಧ್ಯಕ್ಷರಾಗಿದ್ದವರು. ಅವರು ಕೂಡ ಹುನಾನ್‌ನ ಚಳುವಳಿಯಲ್ಲಿ ಭಾಗವಹಿಸಿದರು. ಮಾವೋರವರ ಹೊಸ ಜನರ ಅಧ್ಯಯನ ಸಂಘ ಸೇರಿದರು. ಅಲ್ಲಿಯೇ ಸಮಾಜವಾದಿ ಯುವಜನರ ಸಂಘ ಸೇರಿದರು. ಡೆಂಗ್‌ರವರೂ ಕೂಡ ಮೇ ನಾಲ್ಕರ ಚಳುವಳಿಯಲ್ಲಿ ಜಪಾನೀ ವಸ್ತುಗಳ ಬಹಿಷ್ಕಾರದಲ್ಲಿ ಭಾಗವಹಿಸಿ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದರು.



ಜಿ.ಎಸ್.ನಾಗರಾಜ್ 17

ಮೇ ನಾಲ್ಕರ ಚಳುವಳಿಯಲ್ಲಿ ಝೌ ಎನ್ ಲಾಯ್ ಮತ್ತು ಇತರ ನಾಯಕರು

ಮಾವೋರವರು ಮೇ ನಾಲ್ಕರ ಚಳುವಳಿಯ ಸುತ್ತ ಮುತ್ತ ಅದರ ಪ್ರಭಾವದಿಂದ ಮಾರ್ಕ್ಸ್‌ವಾದದತ್ತ ಸೆಳೆಯಲ್ಪಟ್ಟರೋ ಅದೇ ಸಮಯದಲ್ಲಿ ಸಾವಿರಾರು ಮಂದಿ ಯುವಕರು ಮಾರ್ಕ್ಸ್‌ವಾದದತ್ತ ಸೆಳೆಯಲ್ಪಟ್ಟ ಬಗೆಯನ್ನು ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ.ಹುಸಾನ್ನಲ್ಲಿ ಮಾವೋರವರ ನಾಯಕತ್ವದಲ್ಲಿ ನಡೆದ ಚಳುವಳಿಯಂತೆಯೇ ಇತರ ರಾಜ್ಯಗಳಲ್ಲಿಯೂ ತೀವ್ರ ಚಳುವಳಿಗಳು ನಡೆದವು. ಚೀನಾದ ಇಪ್ಪತ್ತು ರಾಜ್ಯಗಳಲ್ಲಿ ನೂರಕ್ಕೂ ಹೆಚ್ಚು ನಗರಗಳಲ್ಲಿ ವ್ಯಾಪಕವಾಗಿ ಈ ಚಳುವಳಿಗಳು ನಡೆದವು. ಹೆಸರು ಮೇ ನಾಲ್ಕರ ಚಳುವಳಿ ಎಂದಾದರೂ ಸುಮಾರು ಮೂರು ವರ್ಷಗಳ ಕಾಲ ವಿವಿಧ ರೂಪಗಳಲ್ಲಿ ಚೀನಾದ ಉದ್ದಗಲಕ್ಕೂ ನಡೆದ ಚಳುವಳಿ ಅದು. ಮುಂದೆ ಚೀನಾದ ಕ್ರಾಂತಿಯ ನಾಯಕತ್ವ ವಹಿಸಿದ ಅನೇಕ ನಾಯಕರು ಈ ಚಳುವಳಿಗಳ ಮೂಲಕ ಹೊರಹೊಮ್ಮಿದರು.

ಝೌ ಎನ್ ಲಾಯ್ (ನಮಗೆಲ್ಲರಿಗೂ ಪರಿಚಿತವಾದ ಉಚ್ಚಾರಣೆ ಚೌ ಎನ್ ಲಾಯ್ ಎಂದು)ರವರು ಚೀನಾದ ಕ್ರಾಂತಿಯಲ್ಲಿ ಮಾವೋರವರಿಗೆ ಹೆಗಲೆಣೆಯಾಗಿ ದುಡಿದು ಮುಂದೆ ಕ್ರಾಂತಿಯ ನಂತರ 1949ರಿಂದ 1976ರಲ್ಲಿ ಅವರ ನಿಧನದವರೆಗೆ ಚೀನಾದ ಪ್ರಧಾನಿಯಾಗಿ ಚೀನಾವನ್ನ ಮುನ್ನಡೆಸಿದವರು. ಒಂದು ದೊಡ್ಡ ಬಡ ಜಂಟಿ ಕುಟುಂಬವೊಂದರಲ್ಲಿ ಜನಿಸಿದರು. ಬಡವರಾಗಿದ್ದರೂ ಕೂಡ ಸಂಪ್ರದಾಯಕ್ಕೆ ಕಟ್ಟು ಬಿದ್ದು ಅನೇಕ ಹಬ್ಬ ಮತ್ತಿತರ ಆಚರಣೆಗಳನ್ನು ಆಚರಿಸಲೇ ಬೇಕಾದ ಕಾರಣ ಮತ್ತಷ್ಟು ಬಡವರಾದರು. ಆ ಸಂದರ್ಭಗಳಲ್ಲಿ ಮನೆಯಲ್ಲಿದ್ದ ಬೆಲೆಬಾಳುವ ವಸ್ತುಗಳನ್ನು ಗಿರವಿಗೆ ಇಡಲು ರ್‍ಝೌರವರೇ ಹೋಗುತ್ತಿದ್ದುದರಿಂದ ಅಲ್ಲಿ ಗಿರವಿ ಇಡಿಸಿಕೊಳ್ಳುತ್ತಿದ್ದ ಶ್ರೀಮಂತ ಭೂ ಮಾಲಕರ ಕಟುಕತನದ ವರ್ತನೆಗಳು, ಅಲ್ಲಿ ಗಿರವಿ ಇಡಲು ಬರುತ್ತಿದ್ದ ರೈತರ ಕುಟುಂಬಗಳ ಸಂಕಷ್ಟಗಳು ಅವರ ಅರಿವಿಗೆ ಬಂದವು.

ಅವರ ತಾಯಿಯ ಉತ್ತೇಜನದಿಂದ ಅವರು ಚೀನಾದ ಚರಿತ್ರೆಯ ಬಗ್ಗೆ ಅನೇಕ ಪುಸ್ತಕಗಳನ್ನು ಓದಿದರು. ಅದರಲ್ಲಿ ಪಾಳೆಯಗಾರರ, ಸಾಮ್ರಾಟರ ವಿರುದ್ಧ ತಿರುಗಿ ಬಿದ್ದ ಬಂಡುಕೋರರ ಕಥೆಗಳು ಅವರಿಗೆ ಬಹಳ ಹಿಡಿಸಿದವು. ಮುಂದೆ ಅವರು ತಮ್ಮ ಚಿಕ್ಕಪ್ಪನ ಜೊತೆಗೆ ಉತ್ತರ ಚೀನಾದ ರಾಜ್ಯವೊಂದಕ್ಕೆ ಹೋಗಿ ಅಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಬೇಕಾಯಿತು. ಆಗ ಅವರಿಗೆ ಬಡತನದ ಜೊತೆಗೆ ಮತ್ತೆರಡು ಸಮಸ್ಯೆಗಳು ಎರಗಿದವು. ಒಂದು, ಅವರಿಗೆ ರೂಢಿಯಿಲ್ಲದ ವಿಪರೀತ ಚಳಿ, ಎರಡು ಉತ್ತರದ ಶ್ರೀಮಂತರ ಕೊಬ್ಬಿ ಬೆಳೆದ ಹುಡುಗರು ಈ ದಕ್ಷಿಣದ ಬಡ ಹುಡುಗನ ಮೇಲೆ ಮಾಡುತ್ತಿದ್ದ ಧಾಳಿ. ಇವೆರಡನ್ನೂ


ಝೌ ಎನ್ ಲಾಯ್

ಎದುರಿಸಲು ಅವರು ದೈಹಿಕವಾಗಿ ಬಲಗೊಳ್ಳಲು ಮಾವೋರವರಂತೆಯೇ ವ್ಯಾಯಾಮಗಳು, ಸಾಹಸ ಕ್ರೀಡೆಗಳಲ್ಲಿ ತೊಡಗಿದರು. ಮುಂದೆ ಕ್ರಾಂತಿಕಾರೀ ಸೈನ್ಯವನ್ನು ರೂಪಿಸಲು, ದೀರ್ಘ ಪಯಣದ (ಲಾಂಗ್ ಮಾರ್ಚ್)ನ ಕಡು ಕಷ್ಟಗಳನ್ನು ಎದುರಿಸಲು ಸಹಾಯಕವಾದವು.

ಎಷ್ಟೇ ಬಡತನ, ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂದರೂ ಶಿಕ್ಷಣದಲ್ಲಿ ಅವರು ಬಹಳ ಮುಂದೆ ಇದ್ದರು. ಹೊಟ್ಟೆ ಬಟ್ಟೆ ಕಟ್ಟಿ ಪುಸ್ತಕಗಳನ್ನು ಕೊಳ್ಳುತ್ತಿದ್ದರು. ಆಧುನಿಕ ಸಮಾಜದ ಹೊಸ ಅರಿವನ್ನು ಪಡೆಯಲು ಇಂಗ್ಲಿಷನ್ನು ಅಭ್ಯಾಸ ಮಾಡಿದರು. ಕೂಡಿ ಅಧ್ಯಯನ ನಡೆಸಲು ಹಾಗೂ ಪಡೆದ ತಿಳುವಳಿಕೆಯನ್ನು ಹಬ್ಬಿಸಲು ಅಂದಿನ ಚೀನಾದಲ್ಲಿ ಆರಂಭವಾಗಿದ್ದ ಪದ್ಧತಿಯಂತೆ "ಅಧ್ಯಯನ ಮತ್ತು ಗೆಳೆತನ" ಎಂಬ ಸಂಘವೊಂದನ್ನು ಕಟ್ಟಿದರು. ಆ ಸಂಘದ ಮುಖವಾಣಿಯಾಗಿ "ಅಧ್ಯಯನ" ಎಂಬ ಪತ್ರಿಕೆಯನ್ನೂ ಹೊರತಂದರು. ಅದರಲ್ಲಿನ ಅವರ ಬರಹಗಳು ಅವರು ಪಡೆಯುತ್ತಿದ್ದ ಪ್ರಜಾಪ್ರಭುತ್ವದ ಅರಿವಿನ ಸೂಚಕವಾಗಿ ಉಳಿದಿವೆ. ಹೊಸ ಅರಿವನ್ನು ಜನರಿಗೆ ವ್ಯಾಪಕವಾಗಿ ಹರಡಲು ಕೇವಲ ಲೇಖನಗಳಷ್ಟೇ ಸಾಲದೆಂದು ಮನಗಂಡು ಭಾಷಣ ಕಲೆಯನ್ನು ಅಭ್ಯಾಸ ಮಾಡಿ ಉತ್ತಮ ಭಾಷಣಕಾರರಾಗಿ ರೂಪುಗೊಂಡರು. ಆಧುನಿಕ ಅರಿವಿನ ನಾಟಕಗಳಲ್ಲಿ ಪಾಲುಗೊಂಡರು. ಅಂದು ಚೀನಾದಲ್ಲಿ ಸ್ತ್ರೀಯರು ಪಾತ್ರ ವಹಿಸಲು ಅವಕಾಶವಿಲ್ಲದ್ದರಿಂದ ತಾವೇ ಸ್ತ್ರೀ ಪಾತ್ರ ವಹಿಸಿದರು. ಅನೇಕ ಉತ್ತಮ ಕವನಗಳನ್ನೂ ರಚಿಸಿದರು.

ಅವರು ಶಿಕ್ಷಣ ಪಡೆಯುತ್ತಿದ್ದ ನಗರ ತ್ಯಾಂಜಿನ್ ಜಪಾನಿಗೆ ಹತ್ತಿರವಿದ್ದುದರಿಂದ ಜಪಾನಿನಲ್ಲಿ ಅವರ ಶಿಕ್ಷಣ ಮುಂದುವರೆಯಿತು. ಅಲ್ಲಿಯೇ ಅವರಿಗೆ ರಷ್ಯನ್ ಕ್ರಾಂತಿಯ ಬಗ್ಗೆ ಜಪಾನಿನ ಬುದ್ಧಿಜೀವಿಗಳು ಕೆಲವರು ತರುತ್ತಿದ್ದ ಪತ್ರಿಕೆಯ ಮೂಲಕ ಪರಿಚಯವಾಯಿತು. ಅಲ್ಲಿಯ ಅಧ್ಯಯನದ ನಂತರ ಅವರು ಉತ್ತರ ಚೀನಾದಲ್ಲಿ ಶಿಕ್ಷಣ ಪಡೆಯುತ್ತಿದ್ದ, ಬೀಜಿಂಗ್ ಬಳಿಯೇ ಇದ್ದ ನಗರ ತ್ಯಾಂಜಿನ್‌ಗೆ ಜೂನ್ 1919ರಲ್ಲಿ ಹಿಂದಿರುಗಿದರು.

ಮೇ ನಾಲ್ಕರ ಚಳುವಳಿಯಲ್ಲಿ ಝೌ ಬಂಧನ, ಕೊಲೆ ಪ್ರಯತ್ನ

ಅಷ್ಟು ಹೊತ್ತಿಗೆ ಚೀನಾದಲ್ಲಿ ಮೇ ನಾಲ್ಕರ ಚಳುವಳಿ ಆರಂಭವಾಗಿತ್ತು. ಆ ಸಮಯದಲ್ಲಿ ತ್ಯಾಂಜಿನ್ ವಿದ್ಯಾರ್ಥಿಗಳ ಸಂಘ, ತ್ಯಾಂಜಿನ್ ದೇಶಾಭಿಮಾನೀ ಮಹಿಳೆಯರ ಸಂಘ, ವಿವಿಧ ಸಂಘಗಳ ಒಕ್ಕೂಟ ಎಂಬ ಸಂಘಗಳು ಮೇ ನಾಲ್ಕರ ಚಳುವಳಿಗೆ ಧುಮುಕಿದ್ದವು. ಝೌ ಬಂದವರೇ ವಿದ್ಯಾರ್ಥಿ ಸಂಘದ ಜೊತೆಗೂಡಿದರು. ಒಂದು ಪತ್ರಿಕೆಯನ್ನು ಆರಂಭಿಸಿ ಅದರ ಸಂಪಾದಕರಾಗಿ ಕೆಲಸ ಮಾಡಿದರು. ಅದಕ್ಕಾಗಿ ಮುದ್ರಣ ವಿಧಾನ, ಮುದ್ರಣ ದೋಷಗಳನ್ನು ತಿದ್ದುವುದು ಇವುಗಳನ್ನು ರೂಢಿಸಿಕೊಂಡರು. ಈ ಪತ್ರಿಕೆ ವಿದ್ಯಾರ್ಥಿಗಳಲ್ಲಿ ಮಾತ್ರವಲ್ಲದೆ ಜನಸಾಮಾನ್ಯರಲ್ಲಿಯೂ ಅತ್ಯಂತ ಜನಪ್ರಿಯವಾಯಿತು.

ಚಳುವಳಿ ಬಿರುಸುಗೊಂಡಿತು. ತ್ಯಾಂಜಿನ್‌ನಿಂದ ಬೀಜಿಂಗ್‌ನ ಆಳರಸರ ಅರಮನೆಗೇ ನುಗ್ಗಿ ಮನವಿಗಳನ್ನು ಕೊಡಲಾಯಿತು. ಆಗ ಬಂಧನಕ್ಕೊಳಪಟ್ಟ ವಿದ್ಯಾರ್ಥಿಗಳನ್ನು ಬಂಧನದಿಂದ ಬಿಡಿಸಲು ಸಾವಿರಾರು ವಿದ್ಯಾರ್ಥಿಗಳು ಪೋಲೀಸ್ ಮುಖ್ಯಸ್ಥರ ಕಚೇರಿಗೇ ಮುತ್ತಿಗೆ ಹಾಕಿದರು. ವಿದ್ಯಾರ್ಥಿಗಳನ್ನು ಬಿಡಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು.

ಹೀಗೆ ಬಿರುಸುಗೊಂಡ ಚಳ
ವಿವಿಧ ಸಂಘಗಳ ನಡುವೆ ಸಂಯ
ದಿನ ದಿನದ ಅಗತ್ಯವಾಯಿತು. ಅ
ಮೂರೂ ಸಂಘಗಳನ್ನು ಒಟ್ಟಿಗೇ
"ಜಾಗೃತಿ ಸಂಘ"ವೊಂದನ್ನು ಸ್ಥಾಪಿ
ಇದರ ನಾಯಕತ್ವದಲ್ಲಿ ಉ
ಪಾಳೆಯಗಾರರ ಅರಮನೆಗೇ ಲಗ್ಗೆ
ತೀರ್ಮಾನಿಸಲಾಯಿತು. ಹತ್ತಾರು
ವಿದ್ಯಾರ್ಥಿ, ವಿದ್ಯಾರ್ಥಿನಿಯರು
ಜನರನ್ನೊಳಗೊಂಡ ಮೆರ
ಅರಮನೆಯನ್ನು ತಲುಪಿದಾಗ
ಪ್ರಾಣಾಪಾಯವನ್ನೂ ಲೆಕ್ಕಿಸದೆ ಬೀಗ
ಅರಮನೆಯ ಗೇಟಿನ ಕೆಳಗೆ
ವಿದ್ಯಾರ್ಥಿಗಳ ಜೊತೆ ನುಸುಳ
ಅರಮನೆಯ ಒಳಗೆ ಕಾವಲು ಭಟ
ನಿರ್ಮಿಸಿದ್ದ ಎತ್ತರದ ಕ
ಗೋಪುರವನ್ನೇರಿ ಭಾಷಣ ಮಾ
ಇವೆಲ್ಲ ಕ್ರೂರ ಆಡಳಿತಗಾರರನ್ನು ಇನ್ನ
ರೇಗಿಸಿತು. ಝೌರವರನ್ನೂ
ಜೊತೆಗಾರರನ್ನೂ ಬಂಧಿಸಿದರು.
ದಮನಕಾರೀ ಕ್ರಮಗಳನ್ನು ಹರಿ ಬಿಡಲ
ನೂರಾರು ಹುಡುಗ, ಹುಡುಗಿ
ಗಾಯಗೊಂಡರು. ಪಕ್ಕದಲ್ಲಿಯೇ ಹರಿ
ನದಿಯ ನೀರೆಲ್ಲಾ ಕೆಂಪಾಯಿತು.

ಬಂಧಿಸಿದ್ದ ನಾಯಕರನ್ನು ಮ
ರಾಜ್ಯಪಾಲ ಇನ್ನಿಲ್ಲದಂತೆ ಮಾತುಕತೆ
ಹಾಗೂ ವಿವಿಧ ಕುತಂತ್ರಗ
ಪ್ರಯೋಗಿಸಿದ. ಆದರೆ ಝೌ ಮತ್ತು ಜ
ಸಂಗಾತಿಗಳು ಮಣಿಯಲಿಲ್ಲ. ಆಗ ಅ
ಕೊಲ್ಲಲೂ ಯೋಜನೆ ಹಾಕಿದ.
ಹೊರಗೆ ಚಳುವಳಿ ಮತ್ತಷ್ಟು ತೀವ್ರಗೊ
ಚೀನಾದ ಇತರ ನಗರಗಳಿಂದಲೂ
ತೀವ್ರವಾಯಿತು. ಕೊನೆಗೆ ಬ
ವಿಚಾರಣೆಯ ನಾಟಕ ಮಾಡಿ ಶಿಕ್ಷೆ
ವಿಧಿಸಿದರು. ಅದನ್ನೂ ಮನ್ನಾ ಮಾ
ಮುಖ ಉಳಿಸಿಕೊಳ್ಳುವ ಘೋಷಣೆ
ಅಂತೂ ಕೊನೆಗೆ ಬಿಡುಗಡೆ ಮಾ
ಅವರು ಸೆರೆಮನೆಯಲ್ಲಿದ್ದ ಆರು ತಿ
ಹಾಗೂ ಅವರ ವಿಚಾರಣೆಯ ವೇಳ
ರವರು ಹೂಡಿದ ಪ್ರತಿವಾದಗಳು
ತ್ಯಾಂಜಿನ್ ನಗರಕ್ಕೆ ರಾಜಕೀಯ
ತರಬೇತಿಯಾಗಿ ಪರಿಣಮಿಸಿದುವು.
ಬಿಡುಗಡೆಯಂತೂ ಹತ್ತಾರು ಕಾ
ಸಾವಿರಾರು ಜನರ ಮೆರವಣಿಗೆಯಾ
ಇಡೀ ನಗರಕ್ಕೇ ಹೊಸ ಉತ್ಸಾಹ
ತುಂಬಿತು.

ಈ ಅನುಭವದ ನಂತರ ಜಾಗೃತಿ
ಬೀಜಿಂಗ್‌ನ ಇದೇ ರೀತಿಯ ಸ
ಸಂಘಗಳ ಜೊತೆ ಸೇರಿ ಚೀನಾದ
ಕಮ್ಯುನಿಸ್ಟ್ ಲಿ ದ ಝಾವೋರ

ಪುಟ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12, 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH